# ನಾದಯಾತ್ರೆ

ವಸಂತ ಕವಲಿ

1977

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ — ಬೆಂಗಳೂರು-18

ಶ್ರೀಮತಿ ಜಯಲಕ್ಷ್ಮಿ [illegible],

[illegible],

27 | 10 | 2013

ವಜ್ರಮಹೋತ್ಸವ ವರ್ಷ

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ-೮೦

ಸ್ಥಾಪಿತ...

ವಿದ್ವತ್ಪೂ...

# ನಾದಯಾತ್ರೆ

...; ಪುಸ್ತಕಗಳ

...ತ್ತು ಜನಸಾಮಾನ್ಯರ

...ಕ ಯೋಜನೆಯನ್ನು ಯಶಸ್ವಿಯಾ...

ಸಾಹಿತ್ಯ ಪರಿಷತ್ತು ಕನ...

...ಭಿವೃದ್ಧಿಗಾಗಿ ಈಗ ಪಂಚ...

...ಜನೆಗೆ ಸಾರ್ವಜನಿಕರ ಮತ್ತ...

... ಪಡೆದಿದೆ. ...

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ :: ಬೆಂಗಳೂರು-೧೮

1977

NADAYATRE—by Vasantha Kavali—Published by Kannada Sahitya Parishat, Chamarajapet, Bangalore–18. Pages 90 + viii : Pictures 8 pages : First Edition 1977 ;
[illegible]

ಪ್ರಥಮ ಮುದ್ರಣ ೧೯೭೭

© ಹಕ್ಕುಗಳನ್ನು ಕಾದಿರಿಸಲಾಗಿದೆ

ಮುದ್ರಕರು : ಶ್ರೀ [illegible] ಪ್ರಿಂಟಿಂಗ್ ಪ್ರೆಸ್, ಮೈಸೂರು[illegible]

# ಪ್ರಸ್ತಾವನೆ

೧೯೧೫ರಲ್ಲಿ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಕಾಲಾನುಕ್ರಮದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿ, ಕನ್ನಡಿಗರ ಮನ್ನಣೆಗೆ ಪಾತ್ರವಾಗಿದೆ. ೧೯೭೦ರಲ್ಲಿ ಪರಿಷತ್ತು ರೂಪಿಸಿದ ತ್ರೈವಾರ್ಷಿಕ ಯೋಜನೆಯ ಪ್ರಕಾರ, ಮೂರು ವರ್ಷಗಳ ಅವಧಿಯಲ್ಲಿ ಒಂದು ನೂರು ಪುಸ್ತಕಗಳನ್ನು ಪ್ರಕಟಿಸುವ ನಿರ್ಧಾರವನ್ನು ಅದು ಕೈಗೊಂಡಿತು. ಅದರಂತೆ ೧೯೭೧ರಿಂದ ೭೪ರವರೆಗಿನ ಮೂರು ವರ್ಷದ ಅವಧಿಯಲ್ಲಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟಂತೆ ಒಂದು ನೂರು ಪುಸ್ತಕಗಳನ್ನು ಹೊರತರಲಾಯಿತು. ಈ ಗ್ರಂಥಗಳು ವಿಷಯವೈವಿಧ್ಯದಿಂದ ಕೂಡಿವೆ; ಪುಸ್ತಕಗಳ ಬೆಲೆ ಸಾಮಾನ್ಯರ ಕೈಗೆ ಎಟಕುವಂತಿದೆ; ವಿದ್ವಾಂಸರ ಮತ್ತು ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದೆ.

ತ್ರೈವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಮಾಡಿದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಈಗ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ, ಈ ಯೋಜನೆಗೆ ಸಾರ್ವಜನಿಕರ ಮತ್ತು ಸರ್ಕಾರದ ಪ್ರೋತ್ಸಾಹವನ್ನೂ ಬೆಂಬಲವನ್ನೂ ಪಡೆದಿದೆ. ೧೯೭೪ರಲ್ಲಿ ಆರಂಭಿಸಲಾದ ಪಂಚವಾರ್ಷಿಕ ಯೋಜನೆಯ ಪ್ರಕಾರ, ೫ ವರ್ಷಗಳ ಅವಧಿಯಲ್ಲಿ ಒಂದು ನೂರ ಐವತ್ತು ಪುಸ್ತಕಗಳನ್ನು ಹೊರತರಬೇಕಾಗಿದೆ. ಕೆಲವು ಪ್ರಾಚೀನ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಮೂಲಪಾಠದೊಡನೆ ಪ್ರಕಟಿಸುವುದು, ಕೆಲವು ಅಮೂಲ್ಯ ಗ್ರಂಥಗಳ ಪುನರ್ಮುದ್ರಣ, ಭಾಷಾಂತರ ಕೃತಿಗಳ ಮುದ್ರಣ, ಜನಸಾಮಾನ್ಯರಿಗಾಗಿ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ, ಜನಪದ ಸಾಹಿತ್ಯ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳ ಪ್ರಕಟಣೆ—ಇವು ಪರಿಷತ್ತಿನ ಪಂಚವಾರ್ಷಿಕ ಯೋಜನೆಯ ಪ್ರಕಟಣೆಯ ಉದ್ದೇಶಗಳಲ್ಲಿ ಅಡಕವಾಗಿವೆ. ಅಲ್ಲದೆ ಸಂಗೀತ, ಚಿತ್ರಕಲೆ, ಗಮಕ

ಮುಂತಾದ ವಿಷಯಗಳನ್ನು ಸಾಮಾನ್ಯರಿಗೆ ಪರಿಚಯ ಮಾಡಿಕೊಡುವ ಪುಸ್ತಕಗಳನ್ನೂ ವಿಜ್ಞಾನದ ವಿವಿಧ ಅಂಶಗಳನ್ನು ವಿವರಿಸುವ ಜನಪ್ರಿಯ ಹೊತ್ತಗೆಗಳನ್ನೂ ಪ್ರಕಟಿಸಲಾಗುವುದು. ಮಕ್ಕಳ ಸಾಹಿತ್ಯ, ಮಹಿಳೆಯರಿಗೆ ಉಪಯುಕ್ತವಾದ ಗ್ರಂಥಗಳು — ಇವುಗಳ ಪ್ರಕಟಣೆಯೂ ಈ ಉದ್ದೇಶದ ಅಂಗವಾಗಿದೆ. ಕನ್ನಡ ಬಾರದವರು ಕನ್ನಡ ಕಲಿಯಲು ಸಹಾಯಕವಾಗ ಬಹುದಾದ ಸ್ವಯಂ ಬೋಧಿನಿಗಳೂ ಈ ಯೋಜನೆಯಲ್ಲಿ ಸೇರಿಕೊಂಡಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಒದಗಿಸ ಬೇಕೆಂಬ ಪರಿಷತ್ತಿನ ಆಶಯವನ್ನು ಗಮನಿಸಿ, ಕರ್ನಾಟಕ ರಾಜ್ಯ ಸರ್ಕಾರ ಪರಿಷತ್ತಿಗೆ ಆರ್ಥಿಕ ಸಹಾಯವನ್ನು ನೀಡಲು ಮುಂದೆ ಬಂದಿರುವುದರಿಂದ, ಪರಿಷತ್ತಿನ ಪ್ರಕಟಣಕಾರ್ಯಕ್ಕೆ ವಿಶೇಷ ಪ್ರೋತ್ಸಾಹ ದೊರೆತಂತಾಗಿದೆ. ಅದೇ ರೀತಿ ನಾಡಿನ ವಿದ್ವಾಂಸರು ಪರಿಷತ್ತಿನ ಮೇಲೆ ಅಭಿಮಾನವಿಟ್ಟು, ಪರಿಷತ್ತಿನ ಪ್ರಕಟಣ ಕಾರ್ಯದಲ್ಲಿ ಆಸಕ್ತಿವಹಿಸಿ, ಎಲ್ಲ ರೀತಿಯಿಂದಲೂ ತಮ್ಮ ಸಹಕಾರ ನೀಡುತ್ತಿದ್ದಾರೆ. ಪರಿಷತ್ತಿನ ಗ್ರಂಥ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರಾದ ಡಾ॥ ರಂ. ಶ್ರೀ. ಮುಗಳಿಯವರೂ, ಇತರ ಸದಸ್ಯರೂ ತುಂಬ ಉತ್ಸಾಹದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಎಲ್ಲ ಮಹನೀಯರ ಪ್ರೋತ್ಸಾಹ ಮತ್ತು ಬೆಂಬಲದಿಂದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೇಲಿನ ಉದ್ದೇಶಗಳನ್ನು ಪೂರೈಸುತ್ತದೆಂಬ ನಂಬಿಕೆ ನನಗಿದೆ. ಈ ಕಾರ್ಯದಲ್ಲಿ ಸಹಕಾರ ನೀಡುತ್ತಿರುವ ಈ ಎಲ್ಲ ಮಹನೀಯರಿಗೂ ರಾಜ್ಯ ಸರ್ಕಾರಕ್ಕೂ ಪರಿಷತ್ತು ಆಭಾರಿಯಾಗಿದೆ.

ಪರಿಷತ್ತಿನ ಪ್ರಕಟಣೆಯ ಲಾಭವನ್ನು ಎಲ್ಲ ಕನ್ನಡಿಗರೂ ಪಡೆದು ನಾಡು ನುಡಿಯ ಸೇವೆಯಲ್ಲಿ ಭಾಗಿಗಳಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷ
ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು
೧೮-೪-೧೯೭೭

# ಮುನ್ನುಡಿ

ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಉತ್ತರಾದಿ ದಕ್ಷಿಣಾದಿ ಸಂಗೀತಗಳು ಎಂಬುದಾಗಿ ಸಂಗೀತದಲ್ಲಿ ಭೇದಗಳನ್ನು ಹೇಳುವುದು ರೂಢಿಯಲ್ಲಿದೆ. ಆದರೆ 'ಸಂಗೀತಶಾಸ್ತ್ರ'ದಲ್ಲಿ ಮೂಲತಃ ಈ ಭೇದವನ್ನು ಶಾಸ್ತ್ರಜ್ಞರು ಗುರುತಿಸುವುದಿಲ್ಲ. ಈ ಭೇದಗಳು ಪ್ರಾದೇಶಿಕವಾಗಿ ಬಂದಿರಬಹುದು, ಸಂಪ್ರದಾಯವಾಗಿ ತೋರಿರಬಹುದು. ಭಾರತೀಯ ಸಂಗೀತದ ಚರಿತ್ರೆಯನ್ನು ಅಭ್ಯಾಸ ಮಾಡಿದವರಿಗೆ ಈ ಭೇದಗಳ ಕಲ್ಪನೆ ಯಾವಾಗ ಉಂಟಾಯಿತು ಎಂಬುದನ್ನು ಊಹಿಸಲು ಸಾಕಷ್ಟು ಆಧಾರಗಳು ದೊರಕುತ್ತವೆ.

ಈ ದೃಷ್ಟಿಯಿಂದ 'ನಾದಯಾತ್ರೆ' ಮೂಲ ಆಧಾರಗಳ ವಿವೇಚನೆಯಿಂದ ಸಂಗೀತದ ಹುಟ್ಟು, ಬೆಳವಣಿಗೆಯನ್ನು ತಿಳಿಸಿಕೊಡುವುದರ ಜೊತೆಗೆ ಅದರ ವೈವಿಧ್ಯವನ್ನೂ, ಅದನ್ನು ಬಳಕೆಗೆ ತಂದ ಸಂಗೀತ ವಿದ್ವಾಂಸರನ್ನೂ ಕುರಿತು ವಿವರಿಸುತ್ತದೆ. ಸಂಗೀತಕ್ಕೆ ತವರಾದ ಕರ್ನಾಟಕದ ಕಲಾ ಪ್ರೋತ್ಸಾಹವನ್ನು ಈ ಪುಸ್ತಕ ಪರಿಚಯ ಮಾಡಿಕೊಡುತ್ತದೆ.

ಸಂಗೀತ ಕಲಾವೈಭವದ ಪ್ರದರ್ಶನಕ್ಕೆ ಇದೊಂದು ಕೈಗನ್ನಡಿಯಾಗಿ ಪ್ರಕಟವಾಗುತ್ತಿದೆ. ಈ ಪುಸ್ತಕವನ್ನು ಪರಿಷತ್ತಿನ ಪ್ರಕಟನೆಗಾಗಿ ಸಿದ್ಧಪಡಿಸಿಕೊಟ್ಟ ಬೆಂಗಳೂರು ಆಕಾಶವಾಣಿಯ ನಾಟಕ ವಿಭಾಗದ ನಿರ್ದೇಶಕರಾದ ಶ್ರೀ ವಸಂತಕವಲಿಯವರಿಗೆ ನಮ್ಮ ಹಾರ್ದಿಕ ವಂದನೆಗಳು. ಶ್ರೀಯುತರು ಸ್ವತಃ ಸಂಗೀತಗಾರರು, ಕಲಾಭಿಮಾನಿಗಳು ಮತ್ತು ಸಂಗೀತಶಾಸ್ತ್ರವನ್ನು ಕುರಿತು ಆಳವಾಗಿ ಅಭ್ಯಾಸಮಾಡಿದವರು. ಅವರ ಈ ಪುಸ್ತಕ ಸಂಗೀತ ಕಲೆಯ ಪರಿಚಯಕ್ಕೆ ತುಂಬ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

ರಂ. ಶ್ರೀ. ಮುಗಳಿ
ಪ್ರಧಾನ ಸಂಪಾದಕರು
ಗ್ರಂಥ ಪ್ರಕಟಣ ಸಲಹಾ ಸಮಿತಿ

ಬೆಂಗಳೂರು
12-4-1977

# ಅರಿಕೆ

ಪ್ರಖ್ಯಾತ ನಟರೂ ಸಂಗೀತಗಾರರೂ ನನ್ನ ತಂದೆಯವರ ಸ್ನೇಹಿತರಾಗಿದ್ದ ಕಾರಣ ಆಗಾಗ ಅವರೆಲ್ಲ ಒಬ್ಬೊಬ್ಬರಾಗಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ದಿನಗಟ್ಟಲೆ, ವಾರಗಟ್ಟಲೆ ಇದ್ದು ಹೋಗುತ್ತಿದ್ದರು. ಇದ್ದಾಗಲೆಲ್ಲ ಹಗಲಿರುಳು ಅವರ ಗಾಯನ ವಾದನಗಳು ನಮ್ಮ ಮನೆಯಲ್ಲಿ. ಅಲ್ಲದೆ ಸಂಗೀತದ ಬಗೆಗೆ, ಘರಾನಗಳ ವೈಶಿಷ್ಟ್ಯಗಳ ಬಗೆಗೆ ವಾದ, ಚರ್ಚೆ. ಆಗಾಗ ಒಬ್ಬರು ಇನ್ನೊಬ್ಬರ ಗಾಯನ ಪದ್ಧತಿಯನ್ನು ಟೀಕಿಸುವುದು, ಅಣಕಮಾಡಿ ತೋರಿಸುವುದು ನಡೆಯುತ್ತಿತ್ತು. ಇದೆಲ್ಲವನ್ನೂ ಚಿಕ್ಕಂದಿನಿಂದಲೇ ಕಂಡು ಕೇಳುತ್ತ ಬಂದ ನನಗೆ ಸಂಗೀತ ಕಲಿಯಬೇಕೆಂಬ ಒತ್ತಾಸೆ. ಅನೇಕ ಕಷ್ಟನಷ್ಟ, ನಿಂದೆ, ಅಪಮಾನ, ವಿರೋಧ ಪ್ರತಿರೋಧಗಳನ್ನು ಲೆಕ್ಕಿಸದೆ ಸಂಗೀತ ಕಲಿತೇ ಕಲಿತೆ. ನನ್ನ ಗುರುಬಲ ಚೆನ್ನಾಗಿರಬೇಕು. ದೊಡ್ಡದೊಡ್ಡ ಗಾಯಕರೇ ಗುರುಗಳಾಗಿ ದೊರೆತರು. ಮುಕ್ತ ಮನಸ್ಸಿನಿಂದ ವಿದ್ಯಾದಾನ ಮಾಡಿದರು. ಲೋಕಾಭಿರಾಮವಾಗಿ ಮಾತಾಡುವಾಗ ಆಗಾಗ ಅವರು ತಮ್ಮ ತಮ್ಮ ಘರಾನಗಳ ವೈಶಿಷ್ಟ್ಯಗಳನ್ನು ವಿವರಿಸುತ್ತ ಚರಿತ್ರೆಯ ಅಂಶಗಳನ್ನೂ ಒಮ್ಮೊಮ್ಮೆ ವಿವರಿಸುತ್ತಿದ್ದರು. ನಾನು ಅವನ್ನೂ ನೆನಪಿಟ್ಟುಕೊಂಡೆ. ಬರಬರುತ್ತ ಆ ಸಂಗ್ರಹವೂ ಬೆಳೆಯುತ್ತ ಬಂದಿತು. ಅದು ಮುಂದೆ ನಮ್ಮ ಭಾರತೀಯ ಸಂಗೀತದ ಸಮಗ್ರ ಇತಿಹಾಸದ ಬಗೆಗಿನ ಕುತೂಹಲವಾಗಿ ಪರಿಣಮಿಸಿತು. ಅದಕ್ಕೆ ದೊರೆತ ಪ್ರಚೋದನೆಗಳನ್ನೆಲ್ಲ ಈ ಗ್ರಂಥದಲ್ಲಿಯೇ ಸಂದರ್ಭತಃ ವಿವರಿಸಿದ್ದೇನೆ. ನನ್ನ ಅನ್ವೇಷಣೆಯ ಫಲವಾಗಿ "ಗಂಗಾ–ಕಾವೇರಿ" ಎಂಬ ನಾದರೂಪಕ ರಂಗದ ಮೇಲೆ ಬಂದಿತು. ಆಮೇಲೆ ನನ್ನ ಮಿತ್ರ ಶ್ರೀ ಜಿ. ಕೆ. ಅನಂತರಾಮು ಅವರ ಸೂಚನೆಯ ಮೇರೆಗೆ "ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ" ಎಂಬ ಪುಟ್ಟ ಹೊತ್ತಿಗೆ ಐ. ಬಿ.ಎಚ್. ಮಾಲಿಕೆಯಲ್ಲಿ ಪ್ರಕಟವಾಯಿತು. ಅವೆರಡೂ ದೊಡ್ಡ ಸಾಹಸಗಳೇ ನನ್ನ ಯೋಗ್ಯತೆಗೆ; ಅದಕ್ಕಾಗಿ ಮಾಡಿದ ಸಂಶೋಧನೆಯನ್ನು ಉಪಯೋಗಿಸಿಕೊಂಡು ಇದೀಗ "ನಾದಯಾತ್ರೆ"

ಯನ್ನು ಸಿದ್ಧಪಡಿಸಿದ್ದೇನೆ. ಇದಕ್ಕಾಗಿ ನೆರವಾದ ಮಿತ್ರರ ಸಂಖ್ಯೆ ದೊಡ್ಡದು. ಅದಕ್ಕಾಗಿ ಸಮಷ್ಟಿಯಾಗಿ ಅವರೆಲ್ಲರ ಉಪಕಾರವನ್ನಿಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಸುಮುಹೂರ್ತದಲ್ಲಿ ಇದನ್ನು ಪ್ರಕಟನೆಗೆಂದು ಅಂಗೀಕರಿಸಿದ ಅಧ್ಯಕ್ಷರು, ಶ್ರೀ ಜಿ. ನಾರಾಯಣ ಅವರಿಗೂ ನಾನು ಚಿರಋಣಿ.

ಸರಸ್ವತೀ ನಿಲಯ
೫ನೇ ವಿಭಾಗ ರಾಜಾಜಿ ನಗರ.
ಬೆಂಗಳೂರು ೫೬೦ ೦೧೦

**ವಸಂತ ಕವಲಿ**

# ನಾಂದೀ

ಓದುಗರ ಇಲ್ಲವೆ ವಿಮರ್ಶಕರ ಕೈಗೆ ಬಂದ ಕೆಲವು ಕತೆ ಕಾದಂಬರಿಗಳು ತಮ್ಮಷ್ಟಕ್ಕೆ ತಾವೇ ಓದಿಸಿಕೊಂಡು ಹೋಗುತ್ತವೆ. ಹಾಗೆಯೇ ಕೆಲ ಸಾಹಿತ್ಯಿಕ ಕಲಾಕೃತಿಗಳು ಲೇಖಕರಿಂದ ಬರೆಯಿಸಿಕೊಂಡು ಹೋಗುತ್ತವೆ. ಆದರೆ ಸಂಶೋಧನೆ ? ಸ್ವಾನುಭವದಿಂದ ಹೇಳುತ್ತಿದ್ದೇನೆ : "ಕರ್ನಾಟಕದಲ್ಲಿ ಹಿಂದೂಸ್ತಾನೀ ಸಂಗೀತದ ಇತಿಹಾಸ" ಮತ್ತು "ಭಾರತೀಯ ಸಂಗೀತವೆಲ್ಲ ಕರ್ನಾಟಕದ ಕೊಡುಗೆ" ಎಂಬೀ ಎರಡು ಸಂಗತಿಗಳು ನನ್ನಿಂದ ಬಲವಂತವಾಗಿ ಸಂಶೋಧನೆ ಮಾಡಿಸಿಕೊಂಡುವು. ಕಾವ್ಯಸ್ಫೂರ್ತಿ ಉತ್ಕಟವಾಗಿ ತನ್ನಿಂದ ತಾನೇ ಹೊಮ್ಮಿ ಬಂದ ಅನುಭವವಾದಾಗ ಲೇಖಕ ವಿನಯದಿಂದ, ಭಾವುಕತನ ದಿಂದ "ವೀರನಾರಾಯಣನೆ ಕವಿ" ಎಂದು ಹೇಳಬಹುದು. ಆದರೆ ಭಾವಾವೇಶವಿಲ್ಲದೆ ಬುದ್ಧಿ ಪ್ರಾಧಾನ್ಯತೆಯೊಡಗೂಡಿ ತರ್ಕದ ಒರೆಗಲ್ಲಿಗೆ ತಿಕ್ಕಿ ನೋಡಿ ಶಾಸ್ತ್ರವಿದ್ಯಾಪ್ರಚಯ ಪರಿಚಯದಿಂದಾಯ್ತು ಸಾರಾಸಾರ ವಿವೇಕದಿಂದ 'ಸಂಶೋಧಿಸಿದ' ಸಂಗತಿಗಳ ಬಗೆಗೆ ಅತಿಮಾನುಷ ಶಕ್ತಿಗೆ ಅದನ್ನೆಲ್ಲ ಆರೋಪಿಸಲು ಇಲ್ಲವೆ ಅರ್ಪಿಸಲು ಬಾರದು. ಆದರೆ ಯಾವುದೋ ಜಾಡನ್ನು ಹಿಡಿದು ಎಲ್ಲೆಲ್ಲಿಗೋ ಹೋಗಿ ನಮ್ಮ ಸಂಗೀತದ ಬಗೆಗೆ ವಿಶೇಷ ರಂಜಕವಾದ ಅಲ್ಲದೆ ಕೆಲವು ವಿಚಿತ್ರ ವಿಲಕ್ಷಣ ಸಂಗತಿಗಳನ್ನು ಕಂಡುಹಿಡಿದ ಕತೆಯನ್ನೂ ಅದಕ್ಕೊದಗಿ ಬಂದ ಯೋಗಾಯೋಗಗಳನ್ನೂ ನಾನಿಲ್ಲಿ ವಿವರಿ ಸಲೇಬೇಕು. ಅದು ಅಪ್ರಸ್ತುತವಾಗಲಾರದು ; ಅಷ್ಟೇಕೆ, ಅದರ ಕತೆಯೂ ರಂಜಕವಾಗಿದೆ.

ಅಂದೊಮ್ಮೆ ಮಲ್ಲಾರಿಪಂತ ಜೋಶಿ ಎಂಬ ನನ್ನ ಸ್ನೇಹಿತ ನನ್ನನ್ನು ಹುಡುಕಿಕೊಂಡು ಬಂದ. ಇಪ್ಪತ್ತೈದು ವರ್ಷಗಳ ಹಿಂದೆ ನಾವು ಕಾಲೇಜು ವಿದ್ಯಾರ್ಥಿಗಳಾಗಿದ್ದಾಗ್ಗೆ ನಾವು ಹಾಡುತ್ತಿದ್ದ ಸಂಗೀತದ ಬಗೆಗೆ, ಚರ್ಚೆ ಮಾಡುತ್ತಿದ್ದ ಬಗೆಗೆ, ಮಾತನಾಡಿದೆವು. ಆಗ ಮಲ್ಲಾರಿಗೆ ಒಮ್ಮೆಲೇ ಒಂದು ಸಂಗತಿ ನೆನಪಾಯಿತು. ಅವನೊಮ್ಮೆ ರೈಲಿನಲ್ಲಿ ದಿಲ್ಲಿಯಿಂದ ಕಲಕತ್ತೆಗೆ ಹೊರಟಿದ್ದನಂತೆ. ಅವನೊಂದಿಗೆ ಅದೇ ಕಂಪಾರ್ಟ್‌ಮೆಂಟಿನಲ್ಲಿ ಚಂಡೀಗಢದಿಂದ ಬಂದಿದ್ದ ಪಂಜಾಬೀ ಡಾಕ್ಟರೊಬ್ಬರಿದ್ದರಂತೆ. ಪರಸ್ಪರ

ಪರಿಚಯುವಾಗಿ ನನ್ನ ಮಿತ್ರ ಧಾರವಾಡದವನೆಂದು ತಿಳಿದ ಕೂಡಲೆ ಅವರೊಂದು ಪ್ರಶ್ನೆ ಕೇಳಿದರಂತೆ: "ಇಡೀ ಭಾರತದಲ್ಲಿ ಹಿಂದೂಸ್ತಾನೀ ಸಂಗೀತದಲ್ಲಿ ದೊಡ್ಡ ದೊಡ್ಡವರ ಹೆಸರನ್ನು ತೆಗೆದುಕೊಂಡರೆ ಅವರಲ್ಲಿ ಬಹುಮಟ್ಟಿಗಿನವರು ಧಾರವಾಡದಲ್ಲಿರುವವರಲ್ಲ, ಕಾರಣವೇನು ?" ಎಂದು. ಸಾಲದುದಕ್ಕೆ ಮಲ್ಲಿಕಾರ್ಜುನ ಮನಸೂರ, ಗಂಗೂಬಾಯಿ ಹಾನಗಲ್ಲ, ಭೀಮಸೇನ ಜೋಶಿ, ಬಸವರಾಜ ರಾಜಗುರು ಮುಂತಾಗಿ ಪ್ರತಿಥಯುತ ಸಂಗೀತಕಾರರ ಹೆಸರುಗಳನ್ನೂ ಆ ಪಂಜಾಬೀ ಡಾಕ್ಟರರು ಹೇಳಿದರು. ಧಾರವಾಡದವನೇ ಆದ ಮಲ್ಲಾರಿಯ ತಲೆಗೆ ಈ ವಿಚಾರ ಆ ಮೊದಲು ಹೊಳೆದಿರಲೇ ಇಲ್ಲ. ಹೀಗಾಗಿ "ಕಾರಣವೇನು ?" ಎಂದು ಅವರು ಕೇಳಿದಾಗ ಇವನು ನಿರುತ್ತರನಾದ. ಆದರೂ ತನ್ನ ಅಸಹಾಯಕತೆಯನ್ನು ತೋರಗೊಡದೆ "ಅದೆಂದರೆ, ಅದೂ............ಅದೊಂದು ಸಣ್ಣ ಮಗುವಿಗೆ ಕೂಡ ತಿಳಿಯುವ ಸಂಗತಿ—(ಇವನು ಸ್ವತಃ ಮಗುವಿಗಿಂತ ಚಿಕ್ಕ ಹಸುಗೂಸು ಆಗ !)—ಏನೆಂದರೆ ಧಾರವಾಡದ ಗಾಳಿಯಲ್ಲಿಯೇ ಕಾವ್ಯವಿದೆ ; ನೀರಲ್ಲಿಯೇ ಸಂಗೀತವಿದೆ ; ನೆಲದಲ್ಲಿಯೇ ಚಿತ್ರವಿದೆ ; ಕಲ್ಲಲ್ಲಿಯೇ ಶಿಲ್ಪವಿದೆ...." ಮುಂತಾಗಿ ಅರಳು ಹುರಿದಂತೆ ಮಾತನಾಡಿ ಈ ಪಂಜಾಬೀ ಗೃಹಸ್ಥರನ್ನು ಅವಾಕ್ಕಾಗಿಸಿದ.

ಈ ಘಟನೆಯನ್ನು ನನಗೆ ವಿವರಿಸಿ, "ಧಾರವಾಡವಿರುವುದು ಕರ್ನಾಟಕದಲ್ಲಿಯಾದರೂ ಕನ್ನಡಿಗರು ಹಿಂದೂಸ್ತಾನೀ ಸಂಗೀತದಲ್ಲಿ ಹೆಸರು ಮಾಡಲು ಕಾರಣವೇನು ? ನೀನಾದರೂ ಹೇಳೋ" ಎಂದು ನನ್ನನ್ನು ಕೇಳಿದ ಮಲ್ಲಾರಿ. ಆ ಪಂಜಾಬಿಯೆದುರು ಅವನು ಅವಾಕ್ಕಾದಂತೆ ಇವನೆದುರು ನಾನಾದೆ ಆಗ.

ಬೆಂಗಳೂರ ಆಕಾಶವಾಣಿಯಲ್ಲೊಂದು ಸಲ ನನ್ನ ಗುರು ಪಂಡಿತ ಮಲ್ಲಿಕಾರ್ಜುನ ಮನಸೂರರ "ಸಂದರ್ಶನ" ಮಾಡಿ ಕಾರ್ಯಕ್ರಮವನ್ನು ಬಿತ್ತರಿಸುವ ಸುಯೋಗ ದೊರೆತಿತ್ತು. ಆಗ ನಾನವರಿಗೆ ಯಾವ ಪೂರ್ವ ಸೂಚನೆಯನ್ನೂ ಕೊಡದೆ ಅವರೆದುರು ಈ ಸಮಸ್ಯೆಯನ್ನೊಡ್ಡಿದೆ. ಮನಸೂರರು ಸ್ವಲ್ಪವೂ ವಿಕಲರಾಗದೆ ಮಗುವಿಗೆ ಕಥೆ ಹೇಳುವ ರೀತಿಯಲ್ಲಿ ಧಾರವಾಡದಲ್ಲಿ ಮುನ್ನ ವಿದ್ದ ಕರ್ನಾಟಕ ಸಂಗೀತವನ್ನು ಪದಚ್ಯುತಗೊಳಿಸಿ

ಅದರ ಸ್ಥಾನವನ್ನು ಹಿಂದೂಸ್ತಾನೀ ಸಂಗೀತ ಆಕ್ರಮಿಸಿದ ಇತಿಹಾಸವನ್ನು ಮನಂಬುಗುವ ರೀತಿಯಲ್ಲಿ ವಿವರಿಸಿದರು :

"ನೋಡ್ರಿ, ಈಗೊಂದು ಅರವತ್ತು ವರ್ಷದ ಹಿಂದೆ ಧಾರವಾಡ-ಹುಬ್ಬಳ್ಳಿ ಬೆಳಗಾವಿ ಕಡೆಗೆ ಇದ್ದದ್ದೆಲ್ಲ ಕರ್ನಾಟಕೀ ಸಂಗೀತ. ಆಗಿನ ಮೈಸೂರ ಮಹಾರಾಜರಿಗೆ ಹಿಂದೂಸ್ತಾನೀ ಸಂಗೀತದ ಅಭಿರುಚಿಯಿತ್ತು. ಅವರು ಪ್ರತಿ ವರ್ಷ ದಸರಾ ಉತ್ಸವಕ್ಕೆ ಉತ್ತರ ಭಾರತದಿಂದ ಮೈಸೂರಿಗೆ ಹಿಂದುಸ್ತಾನೀ ಗಾಯಕರನ್ನ ವಾದಕರನ್ನ ಕರೆಸುತ್ತಿದ್ದರು. ಧಾರವಾಡ-ಹುಬ್ಬಳ್ಳಿ ಜನ ಅವರನ್ನು ಹೋಗುವಾಗ ಬರುವಾಗ ತಮ್ಮಲ್ಲಿ ಇಳಿಸಿಕೊಂಡು ಅವರ 'ಬೈಠಕ' ಮಾಡಿಸಿ, ಕೇಳಿ ಸಂತೋಷಪಟ್ಟು ದುಡ್ಡು ಕೊಟ್ಟು ಕಳಿಸುತ್ತಿದ್ದರು. ಹಿಂಗಾಗಿ ಅವರಲ್ಲಿ ಹಿಂದೂಸ್ತಾನೀ ಕೇಳೋ ಅಭಿರುಚಿ ಹುಟ್ಟಿತು. ಹೊಸ ತಲೆಮಾರಿನವರು ಆ ಸಂಗೀತವನ್ನ ಕಲಿಯೋದಕ್ಕಾರಂಭ ಮಾಡಿದರು. ಕಾಲಕ್ರಮೇಣ ಕರ್ನಾಟಕೀ ಸಂಗೀತ ಹಿಂದೆ ಬಿದ್ದು ಅದರ ಸ್ಥಾನವನ್ನ ಹಿಂದೂಸ್ತಾನೀ ಆಕ್ರಮಿಸಿಕೊಂಡಿತು."

ಮೈಸೂರು ಮಹಾರಾಜರಾಗಿದ್ದ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರ ಅವರ ಅಭಿರುಚಿಯಿಂದಾಗಿ ಹಿಂದೂಸ್ತಾನೀ ಸಂಗೀತ ಮುಂಬಯಿಯಿಂದ ಮೈಸೂರಿಗೆ ಬಂದು ಅಲ್ಲಿಂದ ಧಾರವಾಡವತ್ತ ಜೈತ್ರಯಾತ್ರೆಗೆ ಹೊರಟ ಕತೆ ಕೇಳಿ ಅಚ್ಚರಿಯಾಯಿತು. ಏಕೆಂದರೆ ಅನೇಕರಂತೆ ನಾನೂ ಹಿಂದೂಸ್ತಾನೀ ಸಂಗೀತ ಧಾರವಾಡದಿಂದ ಮೈಸೂರಿಗೆ ಹೋಯಿತೆಂದು ತಿಳಿದಿದ್ದೆ.

೧೯೫೩ ರಲ್ಲಿ ನಾನು ಮುಂಬಯಿಗೆ ಹೋಗಿದ್ದಾಗ ಏಪ್ರಿಲ್ ತಿಂಗಳಿನಲ್ಲಿ (೧೮ ನೆಯ ದಿನಾಂಕವೇನೋ) ಮಹಾರಾಷ್ಟ್ರ ಟೈಮ್ಸ್ ಪತ್ರಿಕೆಯಲ್ಲಿ ಶ್ರೀ ಮನಸೂರರ ರೇಖಾಚಿತ್ರವೊಂದು ಅಕಸ್ಮಾತ್ತಾಗಿ ಕಣ್ಣಿಗೆ ಬಿತ್ತು. (ಅದೂ ಒಂದು ಮಹತ್ತ್ವದ ಯೋಗಾಯೋಗ) ಕುತೂಹಲದಿಂದ ನೋಡಿದೆ. ಶ್ರೀ ಪು. ಲ. ದೇಶಪಾಂಡೆಯವರು ಬರೆದ "ಗಾಣ್ಯಾತ ರಾಹಣಾರಾ ಮಾಣೂಸ" ಎಂಬ ಲೇಖನದ ಅಂಗವಾಗಿ ಅಚ್ಚಾಗಿದ್ದ ಚಿತ್ರವದು. "ಗಂಗಾ ಸ್ನಾನಕ್ಕಾಗಿ ಎಲ್ಲರೂ ಕಾಶಿಗೆ ಹೋದರೆ ನಾನು ಧಾರವಾಡಕ್ಕೆ ಹೋಗುತ್ತೇನೆ. ನಾಲ್ಕಾರು ದಿನವಿದ್ದು ಮನಸೂರರ ಗಾಯನಗಂಗೆಯಲ್ಲಿ

ಮಿಂದು ಮನಸ್ಸು ಹೃದಯಗಳನ್ನು ಮಡಿ ಮಾಡಿಕೊಂಡು ಮರಳುತ್ತೇನೆ" ಎಂದಿದ್ದರು ದೇಶಪಾಂಡೆ. ಮುಂದೆ ಸಮಸ್ತ ಹಿಂದೂಸ್ತಾನದ ಹಿಂದೂಸ್ತಾನೀ ಸಂಗೀತಗಾರರಲ್ಲಿ ಅಗ್ರೇಸರರಾದ ಕರ್ನಾಟಕದ ಗಾಯಕರ ಬಗೆಗೆ ಅವರು ಹೀಗೆ ನುಡಿದಿದ್ದರು.

"ಹಿಂದುಸ್ತಾನೀ ಸಂಗೀತದಲ್ಲಿ ಇಂದು ಖ್ಯಾತನಾಮರಾದವರಲ್ಲಿ ಮಲ್ಲಿಕಾರ್ಜುನ ಮನಸೂರ, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ, ಬಸವರಾಜ ರಾಜಗುರು—ಇವರಂತೂ ಸರಿಯೇ; ಅಲ್ಲದೆ ಹೊಸಬರಲ್ಲಿ ಮುಂದಕ್ಕೆ ಬರುತ್ತಿರುವ ಸಂಗಮೇಶ್ವರ ಗುರವ ಮತ್ತು ಅರ್ಜುನಸಾ ನಾಕೋಡ ಇವರೂ ಕೂಡಾ ಕರ್ನಾಟಕ ಪ್ರದೇಶದವರೇ........... ಒಂದೊಂದು ನಾಡಿನ ಪುಣ್ಯ ವಿಶೇಷ ಹಾಗಿರುತ್ತದೆ."

ಪು.ಲ. ಅವರ ಲೇಖನದ ಈ ಅಂಶವನ್ನು ಕತ್ತರಿಸಿಕೊಂಡು ನನ್ನ ಬಳಿ ಭದ್ರವಾಗಿರಿಸಿಕೊಂಡೆ: ಎಂದಾದರೊಂದು ಕೆಲಸಕ್ಕೆ ಬಂದೀತೆಂದು. ಅಂದಿನಿಂದ ನನ್ನ ಅನ್ವೇಷಣೆ ಆರಂಭವಾಯಿತು ಕನ್ನಡನಾಡಿನ ಪುಣ್ಯ ವಿಶೇಷದ ಬಗೆಗೆ. ಮೈಸೂರ ಮಹಾರಾಜರಿಗೆ ಹಿಂದೂಸ್ತಾನೀ ಸಂಗೀತದಲ್ಲಿ ಅಭಿರುಚಿ ಹೇಗೆ ಹುಟ್ಟಿತು? ಮತ್ತು ಯಾಕೆ ಎಂಬುದು ಮುಖ್ಯ. ಅದಕ್ಕಾಗಿ ಅವರಿವರನ್ನು ಕಂಡು ಸತ್ಯದ ಸ್ವಾರಸ್ಯಕರ ಕತೆಗಳನ್ನು ಸಂಗ್ರಹಿಸಿ ಅವುಗಳಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ಸಂಗೀತೇತಿಹಾಸ ನಿರ್ಝರಿಯ ಗತಿಗಮ್ಯಗಳನ್ನು ಗುರುತಿಸಿದೆ. ಪು. ಲ. ದೇಶಪಾಂಡೆಯವರನ್ನೂ ಕೇಳಿಕೊಂಡುದಾಯಿತು. ನನ್ನ ಕುತೂಹಲ ತಣಿಯುವಂತೆ ಅವರು ಒಂದು ಪುಟ್ಟ ಭಾಷಣವನ್ನು ಬರೆದು ಧ್ವನಿಮುದ್ರಣಗೊಳಿಸಿ ಟೇಪನ್ನೂ, ಹಸ್ತಪ್ರತಿಯನ್ನೂ ಒಟ್ಟಿಗೇ ಕಳಿಸಿಕೊಟ್ಟರು. ಅದರಲ್ಲಿ ನನಗುಪಯುಕ್ತವಾದ ಅಂಶಗಳಿವು:

"ಭಾರತೀಯ ಸಂಸ್ಕೃತಿಯ ಇತಿಹಾಸವನ್ನು ಗಮನಿಸಿದಾಗ ಅನೇಕ ಸ್ವಾರಸ್ಯಕರವಾದ ಯೋಗಾಯೋಗವೆನ್ನಿಸುವ ಸಂಗತಿಗಳು ಬೆಳಕಿಗೆ ಬರುತ್ತವೆ. ಕರ್ನಾಟಕದಲ್ಲಿ ಬೆಳೆದುಬಂದಿರುವ ಹಿಂದೂಸ್ತಾನೀ ಸಂಗೀತದ ಇತಿಹಾಸವೂ ಇಂತಹ ಸ್ವಾರಸ್ಯಗಳಲ್ಲೊಂದು. ಹಾಗೆ ನೋಡಿದರೆ ನಮ್ಮ ದೇಶದ ಪ್ರತಿಭಾಗವೂ ತನ್ನದೇ ಆದ ವೈಶಿಷ್ಟ್ಯಪೂರ್ಣ ಸಂಸ್ಕೃತಿಯ ಹಿನ್ನೆಲೆ

ಯನ್ನು ಹೊಂದಿದೆ. ಮಹಾರಾಷ್ಟ್ರ ಕರ್ನಾಟಕ ಪ್ರಾಂತಗಳೆರಡೂ ಹಿಂದೂ ಸ್ಥಾನೀ ಸಂಗೀತಕ್ಕೆ ಯಶಸ್ವಿಯಾದ ಬಹು ದೊಡ್ಡ ಕೊಡುಗೆಯನ್ನೇ ನೀಡಿವೆ. ಈ ಎರಡೂ ಪ್ರಾಂತಗಳು ಬಹು ಕಾಲದಿಂದ ಸಂಗೀತದ ಸೂತ್ರದಿಂದ ಪರಸ್ಪರ ಬಂಧಿತವಾಗಿವೆ. ಉತ್ತರಕರ್ನಾಟಕದ ಅನೇಕ ಜನ ಸಂಗೀತ ವಿದ್ವಾಂಸರು, ಮಹಾರಾಷ್ಟ್ರದಲ್ಲಿ ಮನೆಮಾತಾಗಿದ್ದಾರೆ. ಇದೇ ರೀತಿ ಮಹಾರಾಷ್ಟ್ರದ ವಿದ್ವಾಂಸರು ಉತ್ತರ ಕರ್ನಾಟಕದವರಿಗೆ ಪರಿಚಿತರಾಗಿದ್ದಾರೆ. ಈ ಎರಡೂ ಪ್ರಾಂತದವರು ಹಿಂದೂಸ್ಥಾನೀ ಸಂಗೀತಕ್ಕೆ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಅವರಿಗೇ ಅರಿವಿಲ್ಲದಂತೆ ಇತರ ಸಂಗೀತದ ಮೇಲೆ ಕರ್ನಾಟಕೀ ಶೈಲಿ ಪ್ರಭಾವ ಬೀರಿದೆ. ಇದಕ್ಕೆ ಮುಖ್ಯ ಕಾರಣ, ಕರ್ನಾಟಕ ಜಾನಪದ ಸಂಗೀತದ ಪರೋಕ್ಷ ಪ್ರಭಾವ. ಉತ್ತರಕರ್ನಾಟಕದ ಸಂಗೀತ ವಿದ್ವಾಂಸ ರಿಂದಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಗಂಗಾ ಕಾವೇರಿಯ ಸಂಗಮ ವಾದಂತಾಗಿದೆ.

"ನಾನು ಚಿಕ್ಕಂದಿನಿಂದಲೂ ಕೇಳುತ್ತ ಬಂದಿರುವ ಕಿರ್ಲೋಸ್ಕರರವರ ಮರಾಠಿ ರಂಗಗೀತೆಗಳ ಮೂಲ ಧಾಟಿ ಕನ್ನಡ ಪದಗಳದ್ದು. ಕಾಲಕ್ರಮೇಣ ಬಾಲಗಂಧರ್ವರೂ ಅದನ್ನೇ ಅನುಸರಿಸಿದರು. ಉತ್ತರ ಕರ್ನಾಟಕದವರು ಇದನ್ನು ಮತ್ತೆ ತಮ್ಮದಾಗಿಸಿಕೊಂಡು ಹಾಡಿದಾಗ, ಹೆಣ್ಣುಮಗಳು ತನ್ನ ಆಭರಣವನ್ನು ತವರುಮನೆಯಲ್ಲಿ ಪ್ರದರ್ಶಿಸಿದಾಗ, ಅದನ್ನು ಕಂಡು ತವರವರು ಆನಂದಪಡುವಂತೆ, ಜನ ಮೆಚ್ಚಿದರು. ಮಹಾರಾಷ್ಟ್ರ ಮತ್ತು ಕರ್ನಾಟಕಗಳ ಪರಸ್ಪರ ಕೊಡು-ಕೊಳ್ಳುವ ಸಂಪ್ರದಾಯದ ಸುಂದರ ರೂಪ ಹಿಂದೂಸ್ತಾನೀ ಸಂಗೀತದಲ್ಲಿ ಪ್ರಕಟವಾಗುತ್ತದೆ. ಹಿಂದೂಸ್ತಾನೀ ಶಾಸ್ತ್ರೀಯ ಸಂಗೀತದ ದೊಡ್ಡ ನಿಧಿಯಾದ ಶ್ರೀ ಮಲ್ಲಿಕಾರ್ಜುನ ಮನಸೂರ ಅವರು ವಚನಗಳನ್ನೂ ದಾಸರ ಪದಗಳನ್ನೂ ಹಾಡುವಷ್ಟೇ ಆಕರ್ಷಕವಾಗಿ ಮರಾಠೀ ಗೀತೆಗಳನ್ನೂ ಹಾಡುತ್ತಾರೆ.

"ಇಂದು ಹಿಂದೂಸ್ತಾನೀ ಸಂಗೀತ ಪ್ರಪಂಚದಲ್ಲಿ ಉನ್ನತ ಸ್ಥಾನದಲ್ಲಿ ಮಿಂಚಿಸಿರುವ ಮನಸೂರ, ಗಂಗೂಬಾಯಿ ಹಾನಗಲ್ಲ, ಕುಮಾರ ಗಂಧರ್ವ, ಭೀಮಸೇನ ಜೋಶಿ, ಬಸವರಾಜ ರಾಜಗುರು, ಸಂಗಮೇಶ್ವರ ಗುರವ ಮುಂತಾದ ಅನೇಕ ಜನ ಶ್ರೇಷ್ಠ ವಿದ್ವಾಂಸರಂತೆಯೇ ಹಿಂದಿನ ತಲೆಮಾರಿನ

ಪ್ರತಿಭಾವಂತ ಕಲಾವಿದರಾದ ಕುಂದಗೋಳದ ಸವಾಯಿ ಗಂಧರ್ವ, ಭಾಸ್ಕರ ರಾವ ಬಖಲೆ, ರಾಮಕೃಷ್ಣ ಬುವಾ ವಝೆ ಮುಂತಾದವರೂ ಉತ್ತರ ಕರ್ನಾಟಕದ ಜನಕ್ಕೆ ಹಿಂದೂಸ್ತಾನೀ ಸಂಗೀತದಲ್ಲಿ ಅಭಿರುಚಿಯನ್ನು ಹುಟ್ಟಿಸಿದರು.

ಹಿಂದೂಸ್ತಾನೀ ಸಂಗೀತಕ್ಕೆ ಅಪಾರ ಕೊಡುಗೆ ನೀಡಿರುವ ತನ್ನ ಸುಪುತ್ರ-ಸುಪುತ್ರಿಯರ ಬಗ್ಗೆ ಕರ್ನಾಟಕವು ಹೆಮ್ಮೆಪಡಬೇಕು. ಶ್ರೇಷ್ಠ ಮಟ್ಟದ ಕಲೆಗೆ ದೇಶ ಕಾಲಗಳ ಎಲ್ಲೆಯಿಲ್ಲ ಎಂಬುದಕ್ಕೆ ಇಂತಹ ಕಲಾವಿದರೇ ಸಾಕ್ಷಿ.''

ಕಲೆಯು ಕಾಲ ದೇಶಗಳ ಎಲ್ಲೆಯನ್ನು ಮೀರುವುದು ಸಾಮಾನ್ಯ ಸಂಗತಿಯೇನಲ್ಲ. ಅದರಲ್ಲಿಯೂ ಕರ್ನಾಟಕದ ಕಲೆ ಕನ್ನಡನಾಡಿನ ಹೊರಗೆ ಹೋಗಿ ಬೆಳಕು ಬೀರುವುದು ಬಹಳ ಅಪರೂಪ. ಆದರೆ ನೆರೆಯ ನಾಡಿನ ಕಲಾತೀತ ಕಲಾವಿದರು : ಷಡ್ಜವೈರಿಗಳು, ಹಲಸಿನ ಮರದ ವೀಣೆಯನ್ನು ಹಣ್ಣುಗಾಯಿ ನೀರುಗಾಯಿ ಮಾಡುವ ವೈಣಿಕರು, ರಾಮೋತ್ಸವದ ಗಾಳಿ ಬಿಟ್ಟಾಗ ಕರ್ನಾಟಕದಲ್ಲಿ ಬಂದು ತೂರಿಕೊಂಡು ಹೋಗುತ್ತಾರೆ. ಪ್ರತಿಯಾಗಿ ಕರ್ನಾಟಕದ ಸಂಗೀತಗಾರರು ಮಾತ್ರ ನಿಜವಾದ ಯೋಗ್ಯತೆಯಿಲ್ಲದೆ, ಅದೂ ಅನನ್ಯಸದೃಶವಾದ ಪ್ರತಿಭೆಯಿಲ್ಲದೆ ಕನ್ನಡನಾಡಿನ ಹೊರಗೆ ಹೆಸರು ಮಾಡುವಂತಿಲ್ಲ. ಹೀಗಿರುವಾಗ ನಮ್ಮವರು ದಿಲ್ಲಿ, ಜಲಂದರ, ಬನಾರಸ, ಕಲಕತ್ತೆ, ನಾಗಪುರ, ಮುಂಬಯಿಗಳಲ್ಲಿ ಕಛೇರಿಗಳನ್ನು ಮಾಡಿ ಹಣ ಹೆಸರು ಗಳನ್ನು ಗಳಿಸಿಕೊಂಡು ಬರಬೇಕಾದರೆ ಅವರ ಗುರುಪರಂಪರೆ ಅದೆಂತಹ ಘನ ವಿದ್ವತ್ಪೂರ್ಣವಾದುದಿರಬೇಕು ! ಅಲ್ಲದೆ ಅದೆಷ್ಟು ಶತಮಾನಗಳಿಂದ ನಡೆದುಬಂದುದಾಗಿರಬೇಕು !

ಕರ್ನಾಟಕದ ಹಿಂದೂಸ್ತಾನೀ ಗುರುಪರಂಪರೆ ಉಜ್ಜ್ವಲವಾದುದೇನೋ ನಿಜ, ಆದರೆ ಅಂತಹ ಸುದೀರ್ಘವಾದುದೇನೂ ಅಲ್ಲ. ಹೆಚ್ಚೆಂದರೆ ಎಂಬತ್ತು ವರ್ಷಗಳೆನ್ನಬಹುದು. ಹಾಗೆ ನೋಡಿದರೆ ಕರ್ನಾಟಕದಲ್ಲಿ, ಅಷ್ಟೇಕೆ, ದಕ್ಷಿಣ ಭಾರತದಲ್ಲಿಯೇ ಹಾಡುವ ಪರಂಪರೆ, ಅರ್ಥಾತ್ ಕಚೇರಿ ಸಂಪ್ರದಾಯ ನಿನ್ನೆ ಮೊನ್ನಿನದು ; ಎಂದರೆ ಸುಮಾರು ನೂರೈವತ್ತು ವರ್ಷಗಳಷ್ಟು ಹಿಂದಿನ ದಿರಬಹುದು. ಒಂಬತ್ತನೆಯ ಶತಮಾನದ ಕನ್ನಡ ದೊರೆ ನೃಪತುಂಗನಿಂದ

ಹದಿನಾರನೆಯ ಶತಕದ ವಿಜಯನಗರದ ಕೃಷ್ಣದೇವರಾಯನವರೆಗೆ ಅನೇಕ ಕನ್ನಡ ದೊರೆಗಳು ದಕ್ಷಿಣವನ್ನಾಳಿದರು. ಅವರ ಆಸ್ಥಾನಗಳಲ್ಲಿ ಕವಿ, ವಾದಿ, ಗಮಕಿಗಳಿದ್ದರು. ಅವರ ಕಾಲಕ್ಕೆ ಶಿಲ್ಪಕಲಾವೈಭವ ಮುಗಿಲು ಮುಟ್ಟಿತ್ತೆಂಬುದಕ್ಕೆ ಸಾಕ್ಷ್ಯವಾಗಿ ಅವರು ಕಟ್ಟಿಸಿದ ದೇವಾಲಯಗಳ ಗಗನಚುಂಬಿಯಾದ ಗೋಪುರಗಳು ಇಂದಿಗೂ ತಲೆಯೆತ್ತಿ ನಿಂತಿವೆ. ನರ್ತನ ಕಲೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅರಸುಗಳ ಕೃಪೆಗೆ ಪಾತ್ರರಾಗಿ ರಾಜನರ್ತಕಿಯರಿದ್ದರು. ದೇವಸ್ಥಾನದ ವಿಶಾಲ ಪ್ರಾಂಗಣದಲ್ಲಿ, ರಾಜಾಸ್ಥಾನಗಳಲ್ಲಿ ಅವರ ನರ್ತನ ನಡೆಯುತ್ತಿತ್ತು, ತಾರ್ಕಿಕ ಪಂಡಿತರ ವಾದಗಳೂ ಶೀಘ್ರ ಕವಿತ್ವದ ಮೇಲಾಟಗಳೂ ನಡೆಯುತ್ತಿದ್ದುವು. ಆದರೆ ಯಾವ ರಾಜನ ಆಸ್ಥಾನದಲ್ಲಿಯಾಗಲಿ ವಿದ್ವತ್ಸಭೆಗಳಲ್ಲಾಗಲಿ ಸಂಗೀತ ಕಚೇರಿ ನಡೆದ ಉಲ್ಲೇಖಗಳು ಸಿಗುವುದಿಲ್ಲ. ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ಸಂಗೀತಗಾರನಿಗೆ ರಾಜಮನ್ನಣೆ ದೊರೆತಿರುವುದಾಗಿ ತಿಳಿದುಬಂದರೂ ಜಯದೇವ, ನಾಯಕ ಗೋಪಾಲ, ಸ್ವಾಮಿ ಹರಿದಾಸ, ಬೈಜೂ, ತಾನಸೇನ, ಜಗನ್ನಾಥಪಂಡಿತ, ಘನಾನಂದ, ಸದಾರಂಗರಂತಹ ಮಹಿಮಾನ್ವಿತ ಸಂಗೀತಗಾರರು, ಸಂಗೀತ ಕಾಯಕದಲ್ಲಿ ಕೈಲಾಸ ಕಂಡ ಕಲಾವಿದರು ದಕ್ಷಿಣದಲ್ಲಿ ಆಗಿ ಹೋಗಿಲ್ಲ. ಪಾಲ್ಕುರಿಕೆ ಸೋಮನಾಥ ಹೇಳಿರುವಂತೆ "ಬಸವಣ್ಣನವರು ಕವಿ ಗಾಯಕ ಚಕ್ರವರ್ತಿ". ಅವರು ಶರಣ ಸಮೂಹದ ಸಮ್ಮುಖದಲ್ಲಿ ನಿಂತುಕೊಂಡು ಭಕ್ತಿಯ ಆವೇಶದಿಂದ ವಚನಗಳನ್ನೂ ಕೀರ್ತನೆಗಳನ್ನೂ ಹಾಡುತ್ತಿದ್ದರು; ಆದರೆ ಅದು ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ಮನಂಬುಗಿಸಲೆಂದು ಹಾಡಿದ ಹಾಡೇ ಹೊರತು ರಸಿಕವಿದ್ವಜ್ಜನರ ಮೆಚ್ಚುಗೆಗಾಗಿ ಪ್ರಸ್ತುತಪಡಿಸಿದ ಶಾಸ್ತ್ರೀಯ ಸಂಗೀತವಾಗಿರಲಿಲ್ಲ. ಪುರಂದರದಾಸರು ತಾಳ— ತಂಬೂರಿ ತೆಗೆದುಕೊಂಡು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಮನೆ ಮನೆಗೆ ಹೋಗಿ ಕನ್ನಡ ಕೃತಿಗಳನ್ನು ರಚಿಸಿ ಹಾಡಿ ಕುಣಿದು, ವೈಷ್ಣವ ಭಕ್ತಿಯನ್ನು ಜನಮನಗಳಲ್ಲಿ ಬಿತ್ತುವ ಸಾಧನವಾಗಿಸಿ ಸಂಗೀತವನ್ನು ಉಪಯೋಗಿಸಿಕೊಂಡರು. ಅವರೆಂದೂ ಕೃಷ್ಣದೇವರಾಯನ ದರಬಾರಿನಲ್ಲಿ ಕಚೇರಿ ಮಾಡಲಿಲ್ಲ. ಅವರ ನಂತರ ದಕ್ಷಿಣದಲ್ಲಿ ಸಂಗೀತಗಾರರೆಂದು ಹೆಸರಾದ ತ್ಯಾಗರಾಜರಾಗಲಿ, ಮುತ್ತುಸ್ವಾಮಿ ದೀಕ್ಷಿತರಾಗಲಿ, ಶ್ಯಾಮಶಾಸ್ತ್ರಿಗಳಾಗಲಿ ದೇವಸ್ಥಾನಗಳಲ್ಲಿ ಕುಳಿತು ದೇವರ ನಾಮಗಳನ್ನು

ರಚಿಸಿ ಹಾಡಿದರೇ ಹೊರತು ವಿದ್ವತ್ಸಭಾರಂಜನೆಗಾಗಿ ಇಲ್ಲವೆ ರಾಜಮನ್ನಣೆಗಾಗಿ ಹಾಡಲಿಲ್ಲ. ಆ ಸಂಪ್ರದಾಯವೆಲ್ಲ ಉತ್ತರ ಭಾರತದ್ದು.

ವಿಶೇಷವೆಂದರೆ ಉತ್ತರದವರು ಹಾಡಿದರು. ಅದನ್ನಭ್ಯಸಿಸಿ ದಕ್ಷಿಣದವರು—ಅದರಲ್ಲಿಯೂ ಕರ್ನಾಟಕದವರು—ಶಾಸ್ತ್ರಗ್ರಂಥಗಳನ್ನು ಬರೆದರು. ಆ ಗ್ರಂಥಗಳನ್ನಾಧಾರವಾಗಿರಿಸಿಕೊಂಡು ಉತ್ತರದವರು ತಮ್ಮ ಗಾನಕಲೆಯನ್ನು "ಶಾಸ್ತ್ರೀಯ" ವಾಗಿಸಿಕೊಂಡರು. ಅದನ್ನು ಕೇಳಿ ಕರ್ನಾಟಕರು ಇನ್ನೂ ಹೆಚ್ಚು ಪರಿಷ್ಕೃತ ಪ್ರೌಢ ಶಾಸ್ತ್ರ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದರು. ಹೀಗಾಗಿ ಉತ್ತರ ಹಾಗೂ ದಕ್ಷಿಣ ಭಾರತದಲ್ಲಿ ಅನುಕ್ರಮವಾಗಿ ಕಲೆ ಹಾಗೂ ಶಾಸ್ತ್ರಗಳು ಅನ್ಯೋನ್ಯ ಪೂರಕವಾಗಿ ಬೆಳೆದುಬಂದಿವೆ. ಆದ್ದರಿಂದ ಕರ್ನಾಟಕದಲ್ಲಿ ಕಲೆ ಇತ್ತೀಚಿನದು, ಶಾಸ್ತ್ರ ಪ್ರಾಚೀನವಾದುದು. ಅದಕ್ಕಾಗಿ ಮೊದಲು ಶಾಸ್ತ್ರದ ಇತಿಹಾಸವನ್ನು ಅವಲೋಕಿಸೋಣ.

## ಮತಂಗ

ಭಾರತೀಯ ಸಂಗೀತದ ಮೂಲಸ್ರೋತ ಭರತಮುನಿಯ ನಾಟ್ಯಶಾಸ್ತ್ರವೆನ್ನಬಹುದು. ಭರತ ಮಗಧ ದೇಶದವನೆನ್ನುತ್ತಾರೆ. ಅವನ ನಂತರ ಪ್ರಸಿದ್ಧನಾದ ಮತಂಗ ಕರ್ನಾಟಕದ ಶಿವಮೊಗ್ಗೆ ಜಿಲ್ಲೆಯವನು. ಹಂಪೆಯ ಬಳಿ ಇರುವ ಮತಂಗ ಪರ್ವತದಲ್ಲಿ ತಪಸ್ಸುಮಾಡಿದನೆಂದೂ ,ಎನ್ನುತ್ತಾರೆ. ಸಂಗೀತದ ಬಗ್ಗೆ 'ಬೃಹದ್ದೇಶಿ' ಎಂಬ ಮಹಾಗ್ರಂಥವನ್ನು ಈತ ಬರೆದಿದ್ದಾನೆ. ಸಂಗೀತದ ಮುಖ್ಯ ರಾಗಗಳು ಮೂವತ್ತೆರಡು — ಅರ್ಥಾತ್ ಬತ್ತೀಸ ರಾಗಗಳು — ಎಂಬುದು ಮತಂಗಮತವೆಂದು ಪ್ರಸಿದ್ಧವಾಗಿದೆ. ನಿಜಗುಣ ಶಿವಯೋಗಿಯ "ವಿವೇಕ ಚಿಂತಾಮಣಿ" ಹಾಗೂ ಕೆಳದಿಯ ಬಸವರಾಜನ "ಶಿವತತ್ತ್ವರತ್ನಾಕರ" ಗ್ರಂಥಗಳಲ್ಲಿ ಮತಂಗಮತದ ಉಲ್ಲೇಖವಿದೆ.

## ನಾನ್ಯದೇವ

ಚಾಲುಕ್ಯ ವಂಶದ ದೊರೆ ನಾನ್ಯದೇವ. ಹನ್ನೊಂದನೆಯ ಶತಮಾನದ ಉತ್ತರಾರ್ಧ ಮತ್ತು ಹನ್ನೆರಡನೆಯ ಶತಮಾನದ ಪೂರ್ವಾರ್ಧ

ದಲ್ಲಿ ಈತ ರಾಜ್ಯವಾಳುತ್ತಿದ್ದ. ಮಿಥಿಲಾ, ಬಂಗಾಲ, ಬಿಹಾರಗಳಲ್ಲಿ ಇವನ ರಾಜ್ಯವಿತ್ತು. ಕನ್ನಡ ರಾಜವಂಶದ ಈ ದೊರೆ ೧೦೯೭ ರಲ್ಲಿ ಮಿಥಿಲೆಯಲ್ಲಿ ಕೋಟೆಯನ್ನು ಕಟ್ಟಿಸಿ, ವಿಜಯಸ್ತಂಭವನ್ನು ನೆಡಿಸಿದ. ಮುಂದೆ ಅವನು ನೇಪಾಳವನ್ನೂ ಗೆದ್ದು ಅಲ್ಲಿ ರಾಜ್ಯಭಾರ ಮಾಡಿದ.

ಭರತಮುನಿಯ ನಾಟ್ಯಶಾಸ್ತ್ರದ ಮೇಲೆ ರಾಜ ನಾನ್ಯದೇವ ಟೀಕೆ ಬರೆದಿದ್ದಾನೆ. ಇದಕ್ಕೆ 'ಭರತಭಾಷ್ಯ' ಅಥವಾ 'ಸರಸ್ವತಿಹೃದಯಾಲಂಕಾರಹಾರ' ಎಂದು ಹೆಸರು. ಸಂಗೀತದ ವಿಚಾರವಾಗಿ ಭರತಮುನಿ ಸಂಕ್ಷಿಪ್ತವಾಗಿ, ಸೂತ್ರ ರೂಪದಲ್ಲಿ ಹೇಳಿರುವುದನ್ನು ನಾನ್ಯದೇವ ವಿಸ್ತರಿಸಿದ್ದಾನೆ, ವಿವರಿಸಿದ್ದಾನೆ.

## ಮೂರನೆಯ ಸೋಮೇಶ್ವರ

ಸಂಗೀತಕ್ಕೆ ಶ್ರೇಷ್ಠವಾದ ಶಾಸ್ತ್ರಗ್ರಂಥವೊಂದನ್ನು ಕೊಟ್ಟವನು ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಮೂರನೆಯ ಸೋಮೇಶ್ವರ. ಇವನು ಸಂಸ್ಕೃತದಲ್ಲಿ ಗ್ರಂಥ ರಚಿಸಿದ್ದಾನೆ. ಹೆಸರು "ರಾಜಮಾನಸೋಲ್ಲಾಸ" ಅಥವಾ "ಅಭಿಲಷಿತಾರ್ಥಚಿಂತಾಮಣಿ". ಸುಮಾರು ನೂರು ಅಧ್ಯಾಯಗಳಿರುವ ಇದೊಂದು ವಿಶ್ವಕೋಶ. ಸೋಮೇಶ್ವರ ಈ ಗ್ರಂಥದ ಮೂರು ಅಧ್ಯಾಯಗಳಲ್ಲಿ ಗಾಯನ, ವಾದನ, ನರ್ತನಗಳ ಬಗೆಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ಕನ್ನಡ ಅರಸನಾದ ಇವನಿಂದಾಗಿ ಕರ್ನಾಟಕ ಸಂಗೀತವೆಂದು ಹೆಸರು ಬಳಕೆಯಲ್ಲಿ ಬಂದಿತೆಂದು ಯಾರೋ ಎಂದೋ ಹೇಳಿದ ಸುಳ್ಳು ಇಂದಿಗೂ ಸತ್ಯದ ಸೋಗನ್ನು ತಳೆದು ಉಳಿದಿದೆ. ಏಕೆಂದರೆ ಆ ಕಾಲದಲ್ಲಿ ಕನ್ನಡಿಗರು ಬಂಗಾಲ, ಬಿಹಾರ, ಕಾಮರೂಪ (ಅಸ್ಸಾಂ), ಒರಿಸ್ಸಾ ಅಲ್ಲದೆ ನೇಪಾಳವನ್ನೂ ಕೂಡಾ ಗೆದ್ದು ಆಳುತ್ತಿದ್ದರು ಎಂದು ಪ್ರಸಿದ್ಧ ಇತಿಹಾಸಕಾರರಾದ ಶ್ರೀ ಆರ್. ಸಿ. ಮುಜುಮುದಾರರು ಬರೆದಿದ್ದಾರೆ. ಹೀಗಾಗಿ ದಕ್ಷಿಣ ಭಾರತದ ಕಲ್ಯಾಣದಿಂದ ಅದಕ್ಕೂ ದಕ್ಷಿಣಕ್ಕಿರುವ ಕಾವೇರಿಯಿಂದ ಉತ್ತರದ ನೇಪಾಳದವರೆಗಿನ ಭಾರತೀಯ ಸಂಗೀತಕ್ಕೆ ದೊರೆ ಚಾಲುಕ್ಯ ಸೋಮೇಶ್ವರನಿಂದಾಗಿ ಕರ್ನಾಟಕ ಸಂಗೀತ ಎಂದು ಹೆಸರು

ಬಂದಿರಬಹುದೆ ? ಇಲ್ಲ. "ರಾಜಮಾನಸೋಲ್ಲಾಸ" ದಲ್ಲಿ ಕರ್ನಾಟಕ ಸಂಗೀತದ ಹೆಸರೇ ಇಲ್ಲ. ಆದರೂ ಟಿ. ಓ. ಗೋಸ್ವಾಮಿ, ಡಾ॥ ತಿಪ್ಪೇರುದ್ರಸ್ವಾಮಿ ಮುಂತಾದವರು ದಾಕ್ಷಿಣಾತ್ಯ ಸಂಗೀತಕ್ಕೆ ಕರ್ನಾಟಕ ಸಂಗೀತವೆಂಬ ಹೆಸರು ಕೊಟ್ಟವನೆಂಬ ಅಪವಾದವನ್ನು ಸೋಮೇಶ್ವರನ ತಲೆಗೆ ಕಟ್ಟಿದ್ದಾರೆ.

## ಶಾರ್ಙ್ಗದೇವ

"ಸಂಗೀತ ರತ್ನಾಕರ"ವನ್ನು ರಚಿಸಿದ ಶಾರ್ಙ್ಗದೇವ ಅಥವಾ ಸಾರಂಗದೇವ ಭಾರತೀಯ ಸಂಗೀತದಲ್ಲಿ ಒಂದು ಮೈಲಿಗಲ್ಲು. ಗ್ರಂಥ ರಚನೆಯ ಕಾಲ ಕ್ರಿಸ್ತಶಕ ೧೨೦೦ ರಿಂದ ೧೨೨೫ರೊಳಗಾಗಿ. ಇವನ ಪೂರ್ವಜರು ಕಾಶ್ಮೀರದಿಂದ ಬಂದು ದಕ್ಷಿಣದ ದೇವಗಿರಿಯಲ್ಲಿ ನೆಲಸಿದ್ದರು. ಶಾರ್ಙ್ಗದೇವ ದೇವಗಿರಿಯ ಕನ್ನಡಿಗರಾದ ಯಾದವ ವಂಶದ ಅರಸನಾದ ಸಿಂಘಣದೇವನ ಆಶ್ರಯದಲ್ಲಿ ಕೋಶಾಧಿಪತಿಯಾಗಿದ್ದನಂತೆ. ಇವನು ಸಕಲ ಶಾಸ್ತ್ರ ಪಾರಂಗತ. ಇವನಿಗೆ 'ನಿಶ್ಶಂಕ' 'ಅನವದ್ಯವಿದ್ಯಾವಿನೋದ' ಮುಂತಾದ ಬಿರುದುಗಳಿದ್ದವು. ಇವನು ತನ್ನ ಗ್ರಂಥ 'ಸಂಗೀತ ರತ್ನಾಕರ' ದಲ್ಲಿ ಸ್ವರ ಮೇಳಗಳು, ರಾಗಗಳು, ಪ್ರಬಂಧಗಳು, ವಾದ್ಯಗಳು ಮುಂತಾದ ಸಂಗೀತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಚರ್ಚಿಸಿದ್ದಾನೆ, ವಿವರಿಸಿದ್ದಾನೆ. ಹದಿಮೂರನೆಯ ಶತಮಾನದಲ್ಲಿ ಭಾರತೀಯ ಸಂಗೀತವು ಸಂಪೂರ್ಣ ವಿಕಾಸ ಹೊಂದಿ, ಗಾಯನ ವಾದನ ಕಲೆಗಳು ಒಂದು ನಿಶ್ಚಿತ ರೂಪಕ್ಕೆ ಬಂದಿದ್ದುವೆಂಬುದಕ್ಕೆ ಶಾರ್ಙ್ಗದೇವನ 'ಸಂಗೀತರತ್ನಾಕರ' ವೇ ಸಾಕ್ಷಿ.

ಶಾರ್ಙ್ಗದೇವ ವಾಗ್ಗೇಯಕಾರ ಶಬ್ದದ ವ್ಯಾಖ್ಯೆಯನ್ನು ಕೊಡುವಾಗ, ವಾಕ್ ಮತ್ತು ಗೇಯ ಎಂಬ ಶಬ್ದಗಳನ್ನು ವಿವರಿಸುತ್ತಾ ಹೇಳುತ್ತಾನೆ :

"ವಾಕ್ ಮಾತು : ಉಚ್ಯತೇ ಗೇಯಂ ಧಾತು ಃ ಇತ್ಯಭಿಧೀಯತೇ" ಹಾಗೆಂದರೆ ವಾಕ್ ಎಂದರೆ 'ಮಾತು' ಎಂದರ್ಥವೆಂದು. ಸಂಸ್ಕೃತದ ವಾಕ್ ಶಬ್ದಕ್ಕೆ ಕನ್ನಡದ 'ಮಾತು' ಶಬ್ದವನ್ನು ಅವನು ಸಂಗೀತದ ಪರಿಭಾಷೆಯಲ್ಲಿ ತಂದು ಬಳಸಿದ್ದಾನೆ. ಗೇಯ ಅಂದರೆ ಗಾನ ಮಾಡಬಹುದಾದದ್ದು ;

ಹಾಡಬಹುದಾದದ್ದು. ಅದಕ್ಕಾಗಿ ಶಾರ್ಙ್ಗದೇವ : ‘ ಪಾಠಂ ಗೇಯಂ ಕುರುತೇ ಯಃ ಸಃ ವಾಗ್ಗೇಯಕಾರಕಃ ’ ಎಂದಿದ್ದಾನೆ. ಆಡಬಹುದಾದುದನ್ನು ಮತ್ತು ಹಾಡಬಹುದಾದುದನ್ನು ರಚಿಸುವಾತನೇ ವಾಗ್ಗೇಯಕಾರ ಎನ್ನುವುದು ಅವನ ಮತ. ಅದಕ್ಕನುಗುಣವಾಗಿ ಪಾಠ್ಯವಾದ ಹಾಗೂ ಗೇಯವಾದ ವಚನಗಳನ್ನೂ ಕೀರ್ತನಗಳನ್ನೂ ಬರೆದು ಹಾಡಿದ ಶಿವಶರಣರೇ ವಾಗ್ಗೇಯಕಾರರು ; ಮುಂದೆ ಹದಿನಾರನೆಯ ಶತಮಾನದಲ್ಲಿ ವಚನಗಳ ಮಾದರಿಯಲ್ಲಿ ಉಗಾಭೋಗಗಳನ್ನು ರಚಿಸಿದ, ಭಗವನ್ನಾಮ ಸಂಕೀರ್ತನಗಳನ್ನು ರಚಿಸಿ ಹಾಡಿದ ಹರಿದಾಸರೂ ವಾಗ್ಗೇಯಕಾರರು.

ಯಾವಾಗಲೂ ಮೊದಲು ಹುಟ್ಟುವುದು ಕಲೆ, ಆಮೇಲೆ ಶಾಸ್ತ್ರ. ಕಲೆ ಹುಟ್ಟಿ ವಿಕಾಸ ಹೊಂದಿದ ಮೇಲೆ ಶಾಸ್ತ್ರಕಾರ ಅದರ ಸಾಮಾನ್ಯ ರೂಪರೇಷೆಗಳನ್ನು ಅಭ್ಯಸಿಸಿ ಇದು ಹೀಗೆಯೇ ಇರಬೇಕು ಎಂದು ನಿಯಮ ಮಾಡಿ ಆ ಕಲೆಯನ್ನು ಶಾಸ್ತ್ರೀಯವಾಗಿ ಮಾಡಿ ಮುಂದಿನವರಿಗೆ ಮಾರ್ಗದರ್ಶನ ಮಾಡುತ್ತಾನೆ. ಭರತ, ಮತಂಗ ಮುಂತಾದ ಋಷಿಗಳಿಗೆ ಶಾಸ್ತ್ರ ಬರೆಯಲು ಸಾಮ ಮುಂತಾದ ವೇದಗಳಿಂದ ಮತ್ತು ದೇಶಪ್ರದೇಶಗಳ ಜಾನಪದ ಹಾಡುಗಳಿಂದ ಸಾಮಗ್ರಿ ದೊರೆಯಿತು. ಕಲ್ಯಾಣದ ಚಾಲುಕ್ಯ ಸೋಮೇಶ್ವರನಿಗೆ ಸಾಮಗ್ರಿ ದೊರಕಿದ್ದು ರಾಗದ ಸಂಕಣ್ಣ, ಬಹುರೂಪಿ ಚೌಡಯ್ಯ, ಜೇಡರ ದಾಸಿಮಯ್ಯ, ಬಸವೇಶ್ವರ, ಅಲ್ಲಮಪ್ರಭು ಮುಂತಾದ ಶರಣರಿಂದ. ಕಲ್ಯಾಣದಲ್ಲಿ ಸೋಮೇಶ್ವರ ರಾಜ್ಯವಾಳುತ್ತಿದ್ದಾಗ ಅವನ ಮಾಂಡಲಿಕನಾಗಿ ಮಂಗಳವಾಡದಲ್ಲಿ ಬಿಜ್ಜಳನಲ್ಲಿ ಕರಣಿಕನಾಗಿದ್ದ ಬಸವಣ್ಣನ ಗಾಯನವನ್ನು ಸೋಮೇಶ್ವರ ಕೇಳಿರುವುದು ಸಾಧ್ಯವಿದೆ. ಬಸವಣ್ಣನವರ ಚರಿತ್ರೆಯನ್ನು ತೆಲುಗಿನಲ್ಲಿ ಬರೆದ ಪಾಲ್ಕುರಿಕೆ ಸೋಮನಾಥನು ಅವರನ್ನು ‘ ಕವಿ ಗಾಯಕ ಚಕ್ರವರ್ತಿ ’ ಎಂದು ಹೊಗಳಿದ್ದಾನೆ. ಅವರದೊಂದು ವಚನ ಹೀಗಿದೆ :

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ

ಬತ್ತೀಸ ರಾಗವ ಹಾಡಯ್ಯ
ಉರದಲೊತ್ತಿ ಬಾರಿಸು ಕೂಡಲ ಸಂಗಮದೇವಾ

ಈ ವಚನದಲ್ಲಿ ಬಸವಣ್ಣನವರು ತಮ್ಮ ದೇಹವನ್ನು ಭಗವಂತನ ಕೈಯಲ್ಲಿನ ರುದ್ರವೀಣೆಗೆ ಹೋಲಿಸಿಕೊಂಡಿದ್ದಾರೆ. ಅದರಲ್ಲಿ ಅವರು 'ಬತ್ತೀಸ' ಎಂಬ ಸಂಖ್ಯಾವಾಚಕವನ್ನು ಉಪಯೋಗಿಸಿದ್ದಾರೆ. ಬತ್ತೀಸ ಎಂದರೆ ಮೂವತ್ತೆರಡು. ಇದರ ಅರ್ಥ ಬಸವಣ್ಣನವರ ಕಾಲಕ್ಕಿಂತ ನಾನೂರು ವರ್ಷ ಮುಂಚೆಯೇ ಮತಂಗ ಹೇಳಿದ ಮೂವತ್ತೆರಡು ರಾಗಗಳು ಬಳಕೆಯಲ್ಲಿದ್ದುವೆಂದೂ, ಅವು ಬಸವಣ್ಣನವರಿಗೆ ಗೊತ್ತಿದ್ದುವೆಂದೂ ಆಗುತ್ತದೆ. ಚಾಲುಕ್ಯ ಸೋಮೇಶ್ವರನ ಕಾಲಕ್ಕೆ ಮತ್ತು ಅವನ ಅನಂತರದ ಕಾಲದಲ್ಲಿ ಪುರುಷ ಮತ್ತು ಸ್ತ್ರೀ ರಾಗಗಳ ವರ್ಗೀಕರಣ ಬೇರೆಯಾಗಿ ರಾಗ ರಾಗಿಣಿಗಳ ಸಂಖ್ಯೆ ಮೂವತ್ತೆರಡರಿಂದ ಮೂವತ್ತಾರಕ್ಕೇರಿತು. ಬತ್ತೀಸವು ಛತ್ತೀಸವಾಯಿತು. ಈ ಬಗೆಯ ವರ್ಗೀಕರಣದಲ್ಲಿ ಸೋಮೇಶ್ವರ ಮತ ವಲ್ಲದೆ ಹನೂಮನ್ಮತ, ರಾಗಾರ್ಣವಮತ ಎಂಬುವೂ ಪ್ರಸಿದ್ಧವಾಗಿವೆ.

ಬಸವ, ಚೆನ್ನಬಸವ, ಅಲ್ಲಮ, ಮಹಾದೇವಿ ಮುಂತಾದ ಶರಣ ಶರಣೆಯರು ವಚನಕಾರರೆಂದು ಹೆಸರಾಗಿದ್ದಾರೆ. ಆದರೆ ಅವರು ವಚನಗಳಲ್ಲದೆ ಕೀರ್ತನೆಗಳನ್ನೂ ಬರೆದಿದ್ದಾರೆ. ಡಾ॥ ಎಲ್. ಬಸವರಾಜು ಅವರು ತಮ್ಮ 'ಶಿವದಾಸ ಗೀತಾಂಜಲಿ'ಯಲ್ಲಿ ಈ ಕೀರ್ತನೆಗಳನ್ನು ಸಂಗ್ರಹಿಸಿದ್ದಾರೆ.

ಕಲ್ಯಾಣದ ಶರಣರಲ್ಲಿ ಗಾಯಕರಲ್ಲದೆ ವಾದಕರೂ ಇದ್ದರು. ಕಿನ್ನರಿ ಬೊಮ್ಮಯ್ಯನೆಂಬಾತ ಕಿನ್ನರವೀಣೆಯನ್ನು ನುಡಿಸುತ್ತಿದ್ದ. ಅವನು ಮೊದಲು ಅಕ್ಕಸಾಲಿಗನಾಗಿದ್ದು, ಆ ವೃತ್ತಿಯನ್ನು ಬಿಟ್ಟು ವೈಣಿಕನಾದ. ಅಲ್ಲಮಪ್ರಭುಗಳು ಮೃದಂಗ ನುಡಿಸುತ್ತಿದ್ದರೆಂಬ ಉಲ್ಲೇಖ ಹರಿಹರ ಚಾಮರಸರ ಗ್ರಂಥಗಳಲ್ಲಿದೆ. ಅವನು ರಚಿಸಿ ಹಾಡಿದ ಕೀರ್ತನೆಗಳೂ ದೊರೆತಿವೆ. ವಚನಗಳಂತೂ ಸರಿಯೇ. ಸಕಲೇಶ ಮಾದರಸನೆಂಬ ಶರಣ ಮೂವತ್ತೆರಡು ಬಗೆಯ ವೀಣೆಗಳನ್ನು ನುಡಿಸುತ್ತಿದ್ದನಂತೆ. ಬಹುರೂಪಿ ಚೌಡಯ್ಯನೆಂಬಾತ ಜಾತಿಯಿಂದ ಬ್ರಾಹ್ಮಣನಾಗಿದ್ದು ದೀಕ್ಷೆಯಿಂದ ವೀರ ಶೈವನಾಗಿ ವೃತ್ತಿಯಿಂದ ಜಾತಿಗನಾಗಿದ್ದ. ಬೀದಿ ನಾಟಕಗಳನ್ನಾಡುತ್ತಿದ್ದ.

ವಿಧವಿಧದ ವೇಷ ಧರಿಸಿ ರಂಗಭೂಮಿಯ ಮೇಲೆ ಶಿವನ ಲೀಲೆಗಳನ್ನು ನಿರೂಪಿಸಿ, ಅಭಿನಯಿಸಿ ಜನರಂಜನೆ ಮಾಡುತ್ತಿದ್ದ. ನಾಟ್ಯವಾಡುತ್ತಾ ಹಾಡುತ್ತಲೂ ಇದ್ದ. ಅವನೊಮ್ಮೆ ತಾನು ಕೊಂಡ ಸಾಲಕ್ಕಾಗಿ ತನ್ನ ನೆಚ್ಚಿನ ರಾಮಕಲೀ ರಾಗವನ್ನು ಒತ್ತೆಯಿಟ್ಟಿದ್ದನೆಂದು ಜಾನಪದ ಗೀತೆಯೊಂದರಿಂದ ತಿಳಿಯುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ದಕ್ಷಿಣದಲ್ಲಿ ಬಸವಾದಿ ಶರಣರು ವಾಗ್ಗೇಯಕಾರರಾಗಿ ಸಂಗೀತ ಕಲೆಯನ್ನು ಬೆಳೆಸುತ್ತಿದ್ದಾಗ, ಸೋಮೇಶ್ವರ —ಶಾರ್ಙ್ಗದೇವರು ಸಂಗೀತಶಾಸ್ತ್ರವನ್ನು ರಚಿಸುವುದರ ಮೂಲಕ ಸಂಗೀತವನ್ನು ಒಂದು ಕಟ್ಟಿಗೆ ಒಳಪಡಿಸುತ್ತಿದ್ದಾಗ, ಉತ್ತರ ಭಾರತದಲ್ಲಿ ಒಬ್ಬ ಭಕ್ತ ಕವಿ ಒಡಿಸ್ಸಾದ ಪುರಿ ನಗರದ ಜಗನ್ನಾಥ ಮಂದಿರದಲ್ಲಿ ಸಂಸ್ಕೃತದಲ್ಲಿ ಅಷ್ಟಪದಿಗಳನ್ನು ರಚಿಸಿ ದೇವಸ್ಥಾನದಲ್ಲಿ ಹಾಡುತ್ತಿದ್ದ. ಇವನೇ ಪ್ರಸಿದ್ಧ ಗೀತಕಾರ ಜಯದೇವ. ಇವನ ಕಾವ್ಯದ ಹೆಸರು "ಗೀತಗೋವಿಂದ". ಇವನಿಗೆ ಆಶ್ರಯದಾತನಾಗಿದ್ದ ಲಕ್ಷ್ಮಣಸೇನ ಕರ್ನಾಟಕದವನು. ಬಂಗಾಲ, ಬಿಹಾರ, ಉತ್ಕಲ, ಕಾಮರೂಪಗಳನ್ನು ಗೆದ್ದಿದ್ದ ಕನ್ನಡ ವೀರರು ಅಲ್ಲಿಯೇ ನೆಲಸಿದ್ದರು. ಬ್ರಾಹ್ಮಣರಾದ ಅವರು ಅಲ್ಲಿನ ಕ್ಷತ್ರಿಯ ಕನ್ಯೆಯರನ್ನು ವಿವಾಹವಾಗಿದ್ದರು. ಕ್ರಮೇಣ ಅವರು ಬ್ರಹ್ಮಕ್ಷತ್ರಿಯರೆನಿಸಿಕೊಂಡರು. ಲಕ್ಷ್ಮಣಸೇನ ಇದೇ ವಂಶದ ದೊರೆ. ಕರ್ಣಾಟ ಕ್ಷತ್ರಿಯನೆಂದೂ ಉಲ್ಲೇಖವಿದೆ. ಜಯದೇವನಿಗೆ ಆಶ್ರಯದಾತನಾಗಿದ್ದುದಲ್ಲದೆ, ದೊರೆ ಅವನನ್ನು ತನ್ನ ಪ್ರಾಣಮಿತ್ರನಂತೆ ಭಾವಿಸುತ್ತಿದ್ದ. ಜಯದೇವನ ಶಬ್ದಸೌಂದರ್ಯಕ್ಕೆ, ನಾದಮಾಧುರ್ಯಕ್ಕೆ ಅವನು ಮಾರುಹೋಗಿದ್ದ. ಲಕ್ಷ್ಮಣಸೇನನು ಕರ್ನಾಟಕದ ಚಾಲುಕ್ಯ ಸೋಮೇಶ್ವರನ ಸೋದರಳಿಯ. ಎಂದರೆ, ಅವನ ತಂದೆ ವಿಜಯಸೇನನ ಹೆಂಡತಿ ಸೋಮೇಶ್ವರನ ಅಕ್ಕ. ಮತ್ತೆ, ಜಯದೇವನ ಹೆಂಡತಿ ಪದ್ಮಾವತಿ ಭರತನಾಟ್ಯ ಪ್ರವೀಣೆ, ಕರ್ನಾಟಕದವಳು.

ಜಯದೇವ ಕವಿ ತನ್ನ ಪದ್ಯಗಳನ್ನು ವಸಂತ, ಗುರ್ಜರೀ, ಗುಣಕರೀ ಇತ್ಯಾದಿ ಯಾವ ಯಾವ ರಾಗಗಳಲ್ಲಿ ಹಾಡಬೇಕೆಂಬುದನ್ನು ಅಲ್ಲಲ್ಲಿ ನಿರ್ದೇಶಿಸಿದ್ದಾನೆ. ಕೆಲವೆಡೆಗಳಲ್ಲಿ "ಕರ್ನಾಟ ರಾಗೇಣ ಗೀತಯತೇ" ಎಂದಿದ್ದಾನೆ. ಅವನ ಕಾಲಕ್ಕೆ ಕರ್ನಾಟಕವೆಂಬ ರಾಗವಿದ್ದಿತೇ ಹೊರತು ಅದೊಂದು

ಸ್ವತಂತ್ರ ಸಂಗೀತ ಪದ್ಧತಿಯಾಗಿರಲಿಲ್ಲ. ಇದ್ದುದೊಂದೇ : ಭಾರತೀಯ ಸಂಗೀತ. ಅದರ ವಿಕಾಸಕ್ಕೆ ಕಾರಣಕರ್ತರಾದವರು ಕರ್ನಾಟಕದವರು. ನಾನ್ಯದೇವ, ಸೋಮೇಶ್ವರ, ಲಕ್ಷ್ಮಣಸೇನರಂತಹ ರಾಜರು, ಶಾರ್ಙ್ಗದೇವನಂತಹ ಪಂಡಿತರು ಮತ್ತು ಕಲ್ಯಾಣದ ಶಿವಶರಣರಂತಹ ಕವಿ—ಗಾಯಕ ಚಕ್ರವರ್ತಿಗಳು.

## ಶ್ರೀ ವಿದ್ಯಾರಣ್ಯರು

ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ಶ್ರೀ ವಿದ್ಯಾರಣ್ಯರು ' ಸಂಗೀತಸಾರ ' ಎಂಬ ಸಂಗೀತ ಶಾಸ್ತ್ರ ಗ್ರಂಥವೊಂದನ್ನು ರಚಿಸಿದ್ದರೆಂದು ಪ್ರತೀತಿ ಇದೆ. ಇವರು ಹದಿನಾಲ್ಕನೆಯ ಶತಮಾನದವರು. ಅವರ ಗ್ರಂಥ ಉಪಲಬ್ಧವಾಗಿಲ್ಲ. ಮುಂದೆ ಹದಿನೇಳನೆಯ ಶತಮಾನದಲ್ಲಿ ' ಸಂಗೀತಸುಧಾ ' ಎಂಬ ಗ್ರಂಥವನ್ನು ಬರೆದ ರಘುನಾಥ ಭೂಪಾಲನೆಂಬ ತಂಜಾವೂರಿನ ಅರಸ, ತನ್ನ ಗ್ರಂಥದಲ್ಲಿ ವಿದ್ಯಾರಣ್ಯರ ' ಸಂಗೀತಸಾರ 'ದ ಹೆಸರೆತ್ತಿದ್ದಾನೆ.

## ನಿಜಗುಣ ಶಿವಯೋಗಿ

ಹದಿನಾಲ್ಕನೆಯ ಶತಮಾನದವನೇ ಎನ್ನಬಹುದಾದ ನಿಜಗುಣ ಶಿವಯೋಗಿ ಕೊಳ್ಳೇಗಾಲದಲ್ಲಿ ರಾಜನಾಗಿದ್ದ. ಲೌಕಿಕವನ್ನು ತೊರೆದು ಪಾರಮಾರ್ಥಿಕದತ್ತ ದೃಷ್ಟಿ ನೆಟ್ಟು ಶಿವಯೋಗಿಯಾದ ಈತ ಶಂಭುಲಿಂಗನ ಬೆಟ್ಟದ ಮೇಲೆ ಕುಳಿತು ತಪಸ್ಸುಮಾಡಿದ. ಗ್ರಂಥಗಳನ್ನು ರಚಿಸಿದ. ಅವುಗಳಲ್ಲಿ ಲೋಕಾನುಭವವೂ ತತ್ತ್ವಜ್ಞಾನವೂ ತುಂಬಿ ತುಳುಕುತ್ತಿವೆ. ಇವನು ಕೃತಿ ರಚನೆಯನ್ನು ಮಾಡಿ ತಾನು ಯಾವ ರಾಗ–ತಾಳಗಳಲ್ಲಿ ಹಾಡಿದನೆಂಬುದನ್ನೂ ಮುಂದಿನವರ ಮಾರ್ಗದರ್ಶನಕ್ಕಾಗಿ ಪ್ರತಿ ಕೀರ್ತನೆಯ ಮೇಲ್ಗಡೆಯೂ ನಿರ್ದೇಶಿಸಿದ್ದಾನೆ. ನಿಜಗುಣ ಶಿವಯೋಗಿಯ ಇಂತಹ ಹಾಡುಗಬ್ಬಗಳ ಸಂಗ್ರಹವಾದ ಗ್ರಂಥದ ಹೆಸರು ' ಕೈವಲ್ಯ

ಪದ್ಧತಿ '. ಕವಿಯೇ ಹೇಳಿಕೊಂಡಿರುವಂತೆ ಅದು "ಯೋಗಿ ನಿಜಾನಂದದೊಳು ನುಡಿಸುವ ವೀಣೆ, ರಾಗರಸದ ತರಂಗಿಣಿ ". ಭಾರತೀಯ ಸಂಗೀತಕ್ಕೆ ಕರ್ನಾಟಕದ ಬಹು ಮುಖ್ಯ ಕೊಡುಗೆಗಳಲ್ಲಿ ಒಂದು 'ಕೈವಲ್ಯಪದ್ಧತಿ '. ಅಲ್ಲದೆ ನಿಜಗುಣನ ' ವಿವೇಕ ಚಿಂತಾಮಣಿ ' ಎಂಬ ವಿಶ್ವಕೋಶದಲ್ಲಿ ಗೀತ ವಾದ್ಯನೃತ್ಯಗಳ ವಿವೇಚನೆಯಿದೆ.

## ಗೋಪಾಲನಾಯಕ

ಹದಿಮೂರನೆಯ ಶತಮಾನದಲ್ಲಿ ಭಾರತೀಯ ಸಂಗೀತದ ದಿಕ್ಕನ್ನೇ ಬದಲಾಯಿಸಲು ಕಾರಣನಾದವನು ಗೋಪಾಲನಾಯಕ. ಅನಂತರದ ಎಲ್ಲ ಪ್ರಮುಖ ಸಂಗೀತಗಾರರೂ, ಶಾಸ್ತ್ರಕಾರರೂ ಇವನ ಹೆಸರನ್ನು ಸ್ಮರಿಸಿದ್ದಾರೆ. ಪ್ರಸಿದ್ಧ ಸಂಗೀತಗಾರ ತಾನಸೇನನ ಸಮಕಾಲೀನನಾದ ಜಗನ್ನಾಥ ಪಂಡಿತ ತನ್ನ ಧ್ರುಪದವೊಂದರಲ್ಲಿ ತನ್ನ ಪೂರ್ವದ ಸಂಗೀತಜ್ಞರ ಹೆಸರು ಹೇಳುವಾಗ ತಾನಸೇನ, ಸ್ವಾಮಿ ಹರಿದಾಸ, ಡಾಗೂರ ಮುಂತಾದವರೊಡನೆ ಗೋಪಾಲ ನಾಯಕನ ಹೆಸರನ್ನೂ ಹೇಳಿದ್ದಾನೆ.

ಸರ್ವ ಕಲಾಸಂಪೂರಕ, ಮತಿ ಅಪಾರ ವಿಸ್ತಾರ,
 ನಾದಕಾ ನಾಯಕ "ಬೈಜೂ" "ಗೋಪಾಲ"
ತಾ ಪಾಛೈ "ಬಕ್ಸೂ" ಬಹಂಸಿ ಬಸಿ ಕೀನ್ಹಾ,
 "ಮಹಮೂ" ಮಹಿಮಂಡಲಮೇ
ಉದೋತ ಚಹುಂಚಕ ಭೂ ಡಿಢ ವಿದ್ಯಾ ನಿಧಾನ,
 ಸರಸ ಧರು "ಕರನ" ಡಿಢ ತಾಲ ॥
"ಭಗವಂತ" ಸುರಭರನ "ರಾಮದಾಸ" ಜಸು ಪಾಯಾ,
 "ತಾನಸೇನ" ಜಗತಗುರು ಕಹಾಯಾ, "ಧಾಂಧೀ" ಬಾನೀ ರಸಾಲ
ಸುರತಿ ಬಿಲಾಸ "ಹರಿದಾಸ ಡಾಗುರ" ಜಗನ್ನಾಥ ಕವಿರಾಯ,
 ತಿನಕೇ ಪಗ ಪರಸಿವೇ ಕೋ ಸ್ಯಾಮರಾಮ ರಂಗ ಲಾಲ ॥

ಗೋಪಾಲ ನಾಯಕ ದೇವಗಿರಿಯಲ್ಲಿ ಯಾದವರಾಜ ಎರಡನೆಯ ಸಿಂಘಣನ ಆಸ್ಥಾನದ ಸಂಗೀತಗಾರನಾಗಿದ್ದ. ಇವನಿಗೆ ಹನ್ನೆರಡು ನೂರು

ಜನ ಶಿಷ್ಯರಿದ್ದರಂತೆ. ಅವರು ಗುರುವನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಹೊತ್ತುಕೊಂಡು ಕುರುಕ್ಷೇತ್ರಕ್ಕೆ ಹೋದರೆಂದು ಹೇಳುತ್ತಾರೆ. ಅಲ್ಲಿಂದ ದಿಲ್ಲಿಯ ಅಲ್ಲಾವುದ್ದೀನಖಿಲಜಿಯ ಆಸ್ಥಾನದಲ್ಲಿ ಖ್ಯಾತ ಸಂಗೀತಗಾರ ಅಮೀರ ಖುಸರೂವಿನೊಡನೆ ಸ್ಪರ್ಧೆ ಹೂಡಲು ದಿಲ್ಲಿಗೆ ಹೋದನಂತೆ ಗೋಪಾಲ ನಾಯಕ. ಗೋಪಾಲ ನಾಯಕ ದರಬಾರಿಗೆ ಬರುತ್ತಿದ್ದ ಸಂಗತಿ ಖುಸರೂವಿಗೆ ಮುಂಚಿತವಾಗಿಯೇ ತಿಳಿದಿದ್ದಿತು. ಸಂಗೀತ ಸ್ಪರ್ಧೆಯಲ್ಲಿ ತನಗಾಗಲಿದ್ದ ಪರಾಭವವನ್ನು ತಪ್ಪಿಸಿಕೊಳ್ಳಲು ಅವನೊಂದು ಉಪಾಯ ಹೂಡಿದ. ಅದನ್ನು ತನ್ನ ಸುಲ್ತಾನ ಖಿಲಜಿಗೆ ಹೇಳಿಕೊಟ್ಟ. ಗೋಪಾಲ ನಾಯಕ ದರಬಾರಿಗೆ ಬಂದೊಡನೆ : “ನನ್ನ ದರಬಾರ ಗವಯ್ಯಾ ಅಮೀರ ಖುಸರೂ ಅಸ್ವಸ್ಥನಾಗಿದ್ದು, ಔಷಧೋಪಚಾರಕ್ಕಾಗಿ ಇರಾಣಕ್ಕೆ ಹೋಗಿದ್ದಾನೆ ; ಅವನು ಬರುವವರೆಗೆ ದರಬಾರಿನಲ್ಲಿ ನೀನು ಹಾಡು” ಎಂದ ಸುಲ್ತಾನ. ಸುಲ್ತಾನನ ಮಾತನ್ನು ಮನ್ನಿಸಿ ಗೋಪಾಲ ನಾಯಕ ದಿನವೂ ತನ್ನ ಪದ್ಧತಿಯಲ್ಲಿ ಹಾಡುತ್ತಿದ್ದ. ಮರೆಯಲ್ಲಿ ಕೂತು ಅಮೀರ ಖುಸರೂ ಈ ಸಂಗೀತವನ್ನು ಕೇಳಿಕೊಂಡ. ಆರು ದಿನಗಳ ನಂತರ ಅಮೀರ ಖುಸರೂ ದರಬಾರಿನಲ್ಲಿ ಕಾಣಿಸಿಕೊಂಡ. ಗೋಪಾಲ ನಾಯಕನೊಂದಿಗೆ ಸಂಗೀತ ಸ್ಪರ್ಧೆಗೆ ಕುಳಿತ. ಗೋಪಾಲ ನಾಯಕನ ಅಪರೂಪದ ರಾಗಗಳನ್ನೆಲ್ಲ ಮೊದಲೇ ಕೇಳಿ ಅಭ್ಯಾಸ ಮಾಡಿಕೊಂಡಿದ್ದ ಕಾರಣ ಅವೆಲ್ಲ ಹಳೆಯ ಮಾಮೂಲು ರಾಗಗಳೆಂಬುದಾಗಿ ಸಾರಿ ಖುಸರೂ ಹಾಡಿ ತೋರಿಸಿದ. ಮುಂದೆ ಖುಸರೂ ಹಾಡಿದ. ಪರ್ಶಿಯನ್ ರಾಗಗಳನ್ನು ಭಾರತೀಯ ಸಂಗೀತಕ್ಕೆ ಅಳವಡಿಸಿ ಹೊಸ ಹೊಸ ಕೃತಿ ರಚಿಸಿ ಹಾಡಲು ಗೋಪಾಲನಾಯಕ ಪೆಚ್ಚಾದ. ಖುಸರೂವೇ ಗೆದ್ದಂತಾಯಿತು.

ಆ ಅನ್ಯಾಯದ ವಿಜಯ ಖುಸರೂವನ್ನು ಅಸ್ವಸ್ಥಗೊಳಿಸಿತು. ತಾನು ಆಸ್ಥಾನದಲ್ಲಿ ಅಡಗಿ ಕುಳಿತು ಗೋಪಾಲನಾಯಕನ ಗಾಯನವನ್ನು ಕೇಳಿಕೊಂಡು ಆ ರಾಗಗಳನ್ನು ಅಭ್ಯಾಸ ಮಾಡಿಕೊಂಡಿದ್ದನೆಂಬ ಗುಟ್ಟನ್ನು ಬಿಟ್ಟುಕೊಟ್ಟ. ಅವನ ನಿಷ್ಕಪಟ ಹೃದಯವನ್ನ ನಾಯಕನೂ ಮೆಚ್ಚಿಕೊಂಡ. ಅಂದಿನಿಂದ ಅವರಿಬ್ಬರೂ ಆತ್ಮೀಯ ಸ್ನೇಹಿತರಾದರು. ಅಮೀರ ಖುಸರೂವಿಗೆ ಪರ್ಶಿಯಾ ದೇಶದ ರಾಗಗಳು ಗೊತ್ತಿದ್ದವು.

ಅಲ್ಲದೆ ಅವನು ಭಾರತದಲ್ಲಿಯೇ ಹುಟ್ಟಿ ಬೆಳೆದವನಾದ್ದರಿಂದ ಹದಿಮೂರನೆಯ ಶತಮಾನದಲ್ಲಿ ಪ್ರಚಲಿತವಿದ್ದ ಧ್ರುಪದ ಸಂಗೀತದ ಪರಿಚಯವೂ ಅವನಿಗೆ ಇದ್ದಿರಬೇಕು. ಅವನು ಖಿಲಜಿಯ ದರಬಾರಿನ ಗಾಯಕನೂ, ಮಂತ್ರಿಯೂ ಆಗಿದ್ದುದಲ್ಲದೆ ಸೇನಾನಿಯೂ ಆಗಿದ್ದ. ನಾಯಕ ಧ್ರುಪದ ಗಾಯಕನಾಗಿದ್ದ. ಅಲ್ಲದೆ ಕರ್ನಾಟಕದಲ್ಲಿ ಧ್ರುಪದವನ್ನೇ ವಿಲಂಬಿತವಾಗಿ ಹಾಡುವ ' ಠಾಯಿ ' (ಸ್ಥಾಯೀ) ಪದ್ಧತಿ ಬಳಕೆಯಲ್ಲಿತ್ತು. ಅದಕ್ಕಾಗಿ ಧ್ರುಪದಿನ ಅಂಗಗಳಲ್ಲಿ ಒಂದಾದ ' ಅಭೋಗ 'ವನ್ನು ತೆಗೆದುಕೊಂಡು ' ಉಗಾಭೋಗ 'ವೆಂದು ಪರಿವರ್ತಿಸಿ ಕರ್ನಾಟಕದ ಹರಿದಾಸರು ಈ ಹೊಸ ಪ್ರಭೇದದ ಕನ್ನಡ ಕೃತಿಗಳನ್ನು ರಚಿಸಿ ಹಾಡುತ್ತಿದ್ದರು. ಇವರಲ್ಲಿ ಅಗ್ರಗಣ್ಯರು ನರಹರಿತೀರ್ಥರೆಂಬ ಹರಿದಾಸರು. ಗೋಪಾಲನಾಯಕನಿಗೆ ಈ ಹೊಸದಾದ ವಿಲಂಬಕಾಲದ ಉಗಾಭೋಗ ಪದ್ಧತಿಯ ಗಾಯನವೂ ಬರುತ್ತಿತ್ತು. ಹೀಗಾಗಿ ಖುಸರೂ ಮತ್ತು ಗೋಪಾಲನಾಯಕರ ಮಿಲನದಿಂದಾಗಿ ಪರ್ಶಿಯಾದ ಕವಾಲಿ ಸಂಗೀತ, ಗ್ವಾಲಿಯಾರಿನ ಧ್ರುಪದ ಸಂಗೀತ ಮತ್ತು ಕರ್ನಾಟಕದ ವೈಶಿಷ್ಟ್ಯವಾದ ಉಗಾಭೋಗ ಸಂಗೀತ—ಇವುಗಳ ಸಮ್ಮಿಲನವಾಯಿತು. ಅದರ ಪರಿಣಾಮವಾಗಿ ಖಯಾಲ ಸಂಗೀತವೆಂಬ ಹೊಸದೊಂದು ರೂಪ ಭಾರತೀಯ ಸಂಗೀತದ ಅಂಗವಾಗಿ ಉಗಮಿಸಿತು. ಇತ್ತೀಚೆಗೆ ಹಿಂದೂಸ್ತಾನೀ ಎನ್ನಿಸಿಕೊಂಡಿರುವ ಭಾರತೀಯ ಸಂಗೀತ ಪ್ರಭೇದಗಳಲ್ಲಿ ಈಗಂತೂ ಹೆಚ್ಚು ಪ್ರಚಾರದಲ್ಲಿರುವುದು ಈ ಖಯಾಲ ಎಂಬ ರೂಪ.

ಧ್ರುಪದಗಾಯಕರು ಕೃತಿಯನ್ನು ಹಾಡುವ ಮುನ್ನ ಅನಿಬದ್ಧ ಗಾಯನವಾಗಿ ಎಂದರೆ ತಾಳದ ಕಟ್ಟಿಗೊಳಪಡದೆ ರಾಗಾಲಾಪನೆ ಮಾಡುತ್ತಿದ್ದರು. ಅದಕ್ಕೆ ಸಾಹಿತ್ಯ ಇರುತ್ತಿರಲಿಲ್ಲ. ಓಂ ಅನಂತ ಹರಿನಾರಾಯಣ ಎಂಬ ಮಂತ್ರವನ್ನೇ ಅಪಭ್ರಂಶಗೊಳಿಸಿ ಹಾಡುತ್ತಿದ್ದರು. ಆಮೇಲೆ ತಾಳಬದ್ಧವಾಗಿ ಹಾಡುವ ನಿಬದ್ಧ ಸಂಗೀತದ ಕೃತಿಯಾಗಿ ಬರೆದ ದೇವರ ನಾಮಗಳನ್ನು ಹಾಡುತ್ತಿದ್ದರು. ಇವುಗಳಲ್ಲಿ ಕಾವ್ಯರಮಣೀಯತೆಯಾಗಲಿ, ಭಾವೋತ್ಕಟತೆಯಾಗಲಿ ಇರುತ್ತಿರಲಿಲ್ಲ. ಅದರಿಂದಾಗಿ ಅದು ಲಯದ ಚಮತ್ಕಾರದ, ತಾಳದ ಲೆಕ್ಕಾಚಾರದ ಕಚ್ಚಾಟವಾಗುತ್ತಿತ್ತು.

ಶಿವಶರಣರ—ಎಂದರೆ ಬಸವಾದಿ ಪ್ರಮಥರ ಕೀರ್ತನೆಗಳಲ್ಲಿ ಕಾವ್ಯ ಸೌಂದರ್ಯವೂ, ಶರಣಸತಿ-ಲಿಂಗಪತಿ ಭಾವದ ಭಕ್ತಿ ನಿರ್ಭರತೆಯೂ ಹೆಚ್ಚಾಗಿದ್ದುವಲ್ಲದೆ, ಅವುಗಳಲ್ಲಿ ವೀರಶೈವ ಸಿದ್ಧಾಂತದ ತತ್ತ್ವಜ್ಞಾನವೂ ಸೇರಿ ಅವು ಭಾರವಾಗಿದ್ದವು. ಅದಕ್ಕಾಗಿ ಅವನ್ನು ಸುಮ್ಮನೆ ಹಾಡ ಬಹುದಾಗಿತ್ತಲ್ಲದೆ, ರಾಗ ವಿಸ್ತರಣೆಗೆ. ಆ ಶಬ್ದಗಳನ್ನು ಉಪಯೋಗಿಸಲು ಬರುವಂತಿರಲಿಲ್ಲ. ಅದ್ದರಿಂದ ನರಹರಿತೀರ್ಥರು ಮತ್ತು ಅವರ ಸಮ ಕಾಲೀನ ಹರಿದಾಸರು ಶರಣರ ವಚನಗಳ ಹೋಲಿಕೆಯಲ್ಲಿ ಉಗಾಭೋಗಗಳನ್ನು ರಚಿಸಿಕೊಂಡು ಅವುಗಳನ್ನು ಧ್ರುಪದಿನ ಮಾದರಿಯಲ್ಲಿ ಅನಿಬದ್ಧವಾಗಿಯೂ, ನಿಬದ್ಧವಾಗಿಯೂ ಹಾಡುತ್ತಿದ್ದರು. ಆ ಪರಂಪರೆಯು ಗಾಯಕನಾದ ಗೋಪಾಲನಾಯಕನಿಗೆ, ಖುಸರೂವಿನ ಕವ್ವಾಲಿ ಸಂಗೀತದ ಪರಿಚಯವಾದ ಮೇಲೆ ಭಾರತೀಯ ಸಂಗೀತದ ಹೊಸ ಪರಂಪರೆಯ ನಿರ್ಮಾಣಕ್ಕೆ ಒಂದು ಮಾರ್ಗ ಹೊಳೆದಂತಾಯಿತು.

### ಖಯಾಲಿನ ಆವಿಷ್ಕಾರಕ

ಖಯಾಲ ಗಾಯಕಿಯನ್ನು ಆವಿಷ್ಕರಿಸಿದ ಖುಸರೂವಿಗೆ ಹಿಂದೂ ಸ್ಥಾನೀ ಸಂಗೀತ ಪಿತಾಮಹನೆಂಬ ಗೌರವ ಸಲ್ಲುತ್ತದೆ. ಅದು ಯೋಗ್ಯವೂ ಆಗಿದೆ. ಆದರೆ ಅದರಿಂದಾಗಿ ಒಂದು ತಪ್ಪುಕಲ್ಪನೆಗೆ ಎಡೆಯಾಗಿದೆ. ಹಿಂದೂಸ್ಥಾನೀ ಸಂಗೀತವೆಂದರೆ ಅದು ತುರುಕರ ಸಂಗೀತವೆಂದು ನಮ್ಮಲ್ಲಿ ಅನೇಕರು ನಂಬಿದ್ದಾರೆ. ಅದಕ್ಕೆ ಕಾರಣ, ಅವರಿಗೆ ಅಮೀರ ಖುಸರೂ ಅಪ್ಪಟ ಭಾರತೀಯನೆಂದು ಗೊತ್ತಿಲ್ಲ. ಅವನಿಗೆ " ತೋತಾ-ಎ-ಹಿಂದ್ " ಎಂದರೆ ಹಿಂದೂಸ್ಥಾನದ ಕನ್ನಡವಕ್ಕಿ, ಅರ್ಥಾತ್ ಭಾರತದ ಗಿಳಿ ಎಂಬ ಬಿರುದಿತ್ತು. ಅವನ ತಂದೆ ತುರ್ಕಸ್ಥಾನದಿಂದ ಭಾರತಕ್ಕೆ ಬಂದು ನೆಲಸಿದವ ನಾದರೂ ತಾಯಿ ಹಿಂದೂಸ್ಥಾನದವಳು. ಅವಳ ತಂದೆ—ಎಂದರೆ ಖುಸರೂವಿನ ಹೆಣ್ಣಜ್ಜ—ಹಿಂದುವಾಗಿದ್ದವನು ಇಸ್ಲಾಮಕ್ಕೆ ಮತಾಂತರ ಹೊಂದಿದವ, ಭಾರತೀಯ. ಹೀಗಾಗಿ ಖುಸರೂವಿನಲ್ಲಿ ಹಿಂದೂ ಸಂಸ್ಕೃತಿ ರಕ್ತಗತವಾಗಿತ್ತು. ಅಲ್ಲದೆ ಅವನು ಬ್ರಾಹ್ಮಣ ಪಂಡಿತರ ಪದತಲದಲ್ಲಿ

ಕಲಿತು ಸಂಸ್ಕೃತವನ್ನೋದಿದ್ದ. ತನ್ನ ಗುರುಗಳನ್ನವನು ಅರಿಸ್ಟಾಟಲನಿಗೆ ಸಮಾನರಾದ ಮೇಧಾವಿಗಳೆಂದು ಹೊಗಳಿದ್ದಾನೆ. ಸಾಲದುದಕ್ಕೆ ಖುಸರೂವಿನ ಜನ್ಮಸ್ಥಳ ವ್ರಜಭೂಮಿ : ಗಂಗಾಯಮುನಾ ಪ್ರವಾಹಗಳ ನಡುವಣ ನಾಡು ; ಲಲಿತಲವಂಗಲತಾಕೋಮಲೆಯರೊಂದಿಗೆ ಸಾವೋದ ದಾಮೋದರ ರಾಸಕ್ರೀಡೆಯಾಡಿದ ಪುಣ್ಯಭೂಮಿ. ಅದರಿಂದಾಗಿ ಸಹಜವಾಗಿಯೇ ತನ್ನ ಬಗೆಗೆ ಖುಸರೂ ಈ ರೀತಿಯಾಗಿ ಪರ್ಶಿಯನ್ ದ್ವಿಪದಿಯೊಂದರಲ್ಲಿ ಹೇಳಿಕೊಂಡಿದ್ದಾನೆ :

ಕಾಫಿರೇ ಇಶ್ಕಂ ಮುಸಲ್ಮಾನೀ ಮರಾ ದರಕಾರ ನೇಸ್ತ
ಹರ ರಗೇ ಮನ ತಾರೇ ಗಶ್ತಾ ಹಾಜತೇ ಜುನ್ನಾರ ನೇಸ್ತ ॥

—“ ನಾನೊಬ್ಬ ಪ್ರೇಮಪಾಖಂಡಿ, ಕಾಫಿರ, ಧರ್ಮಬಾಹಿರ. ನಾನು ಮುಸಲ್ಮಾನನೇ ಅಲ್ಲವೆನ್ನಿ ಬೇಕಾದರೆ. ನನ್ನ ನರನರವೂ ಪವಿತ್ರ ಯಜ್ಞೋಪವೀತ, ಧಮನಿ ಧಮನಿಯೂ ಜಪಮಾಲೆ ”.

ಖುಸರೂವಿಗೆ ಸಮಾನರಾದ ಬ್ರಾಹ್ಮಣರುಂಟೆ ?

ನನ್ನ ತಾಯಿ ಹಿಂದುಸ್ತಾನದವಳು, ಅವಳು ವೀಳ್ಯದೆಲೆ ತಿನ್ನುತ್ತಾಳೆ, ಜಗತ್ತಿನ ಬೇರೆಲ್ಲ ದೇಶಗಳ ಸ್ತ್ರೀ ಸೌಂದರ್ಯದಲ್ಲಿ ಒಂದಿಲ್ಲೊಂದು ಕೊರತೆಯಿದ್ದೇ ಇದೆ, ಆದರೆ ಭಾರತೀಯ ನಾರಿಯ ಸೌಂದರ್ಯ ಪರಿಪೂರ್ಣವಾದದ್ದು ಎಂದಿದ್ದಾನೆ ಅಮೀರ ಖುಸರೂ.

ಜೂ ಜನೇ ಹಿಂದೂ ಕಸೇ ಆಶಿಕೀ ದೀವಾನಾ ನೇಸ್ತ
ಸೋಖ್ತನ ಬರಶಮೇ ಮುರದಾ ಕಾರೇ ಹರಿ ಪರವಾನಾ ನೇಸ್ತ ॥

ಹಿಂದೂ ಸ್ತ್ರೀ ಸಹಗಮನ ಮಾಡುತ್ತಿದ್ದುದನ್ನು ಕಂಡು ಖುಸರೂ ಸಮರ್ಪಿಸಿದ ಭಕ್ತಿ ಕುಸುಮಾಂಜಲಿ ಇದು : “ ಇಷ್ಟೊಂದು ಅತ್ಯಂತಿಕವಾಗಿ ಪ್ರೇಮೋನ್ಮಾದಿನಿಯಾಗುವುದು ಕೇವಲ ಹಿಂದೂ ಹೆಂಗಸಿಗೆ ಮಾತ್ರ ಸಾಧ್ಯ. ಉರಿಯುವ ದೀಪಕ್ಕೆರಗಿ ಸಾಯುವ ಪತಂಗಗಳೆಷ್ಟೋ. ಆದರೆ ಆರಿಹೋದ ಆರತಿಯ ಮೇಲೆ ಬಿದ್ದು ಸುಟ್ಟುಕೊಳ್ಳುವುದು ಎಲ್ಲ ಪತಂಗಗಳಿಗೂ ಸಾಧಿಸಲಾರದು ”.

ರಂಗಪಂಚಮಿ, ಎಂದರೆ, ಹೋಳೀಹಬ್ಬವೆಂದರೆ ಎಲ್ಲಿಲ್ಲದ ಉತ್ಸಾಹ ಖುಸರೂವಿಗೆ. ಅದನ್ನು ಹಿಂದುಗಳಷ್ಟೇ ಅಲ್ಲ, ಮುಸಲ್ಮಾನರೂ ಆಚರಿಸ ಬೇಕೆಂದಾತ ಬಯಸಿದ. ತನ್ನ ಗುರುವಾದ ನಿಜಾಮುದ್ದೀನ ಶಾಲಿಯಾನ ಅಪ್ಪಣೆ ಪಡೆದು ಅವನ ಆಶ್ರಮದಲ್ಲಿ ಓಕುಳಿಯಾಟವನ್ನು ಪ್ರಾರಂಭಿಸಿಯೂ ಬಿಟ್ಟ. ಅದಕ್ಕೆ ತಕ್ಕ ಹಾಡುಗಳನ್ನು ಹಿಂದವೀ ಭಾಷೆಯಲ್ಲಿ ರಚಿಸಿದ. ಅವನ್ನು ಆರಂಭಿಸಿದ ಹೋಳೀ ಹಬ್ಬದಾಚರಣೆ ದಿಲ್ಲಿ ಅಜಮೀರಗಳ ಚಿಶ್ತೀ ದರಗಾಗಳಲ್ಲಿ ಇಂದಿಗೂ ಆಚರಿಸಲ್ಪಡುತ್ತಿದೆ.

ಖುಸರೂ ಈಗಾಗಲೇ ಸಾಕಷ್ಟು ಗಜಲ ಕವಾಲಿಗಳನ್ನು ರಚಿಸಿದ್ದ. ಏಳುನೂರು ವರ್ಷಗಳ ಹಿಂದೆ ಅವನು ರಚಿಸಿದ ಕವಾಲಿಗಳು ಅಂದಿನಿಂದ ಇಂದಿನವರೆಗೂ ಜನಪ್ರಿಯವಾಗಿವೆ.

## ವಿಪ್ರಲಂಭ ಶೃಂಗಾರ

ಖುಸರೂವಿನ ಕವಾಲಿಯ ಸಾಹಿತ್ಯದಲ್ಲಿರುವುದೂ ಸತಿ-ಪತಿ ಭಾವ. ಎಂದರೆ ಮಾನವ ಅರ್ಥಾತ್ ಜೀವಾತ್ಮ ಹೆಣ್ಣು, ಪರಮಾತ್ಮ ಗಂಡು. ಪ್ರೇಯಸಿಯಾದ ಜೀವಾತ್ಮ ಪ್ರಿಯಕರನಾದ ಪರಮಾತ್ಮನೊಂದಿಗೆ ಮಿಲನ ಹೊಂದುವುದಕ್ಕಾಗಿ ಆರ್ತವಾಗಿ ಹಲಬುವುದೆ ಕವಾಲೀ ಕಾವ್ಯದ ಮುಖ್ಯ ಭಾವ. ವೀರಶೈವ ಶರಣರ ಕೀರ್ತನೆ ಹಾಗೂ ವಚನಗಳಲ್ಲಿಯೂ ಇದೇ ಭಾವ. ರಾಧೆಯೇ ಜೀವಾತ್ಮ, ಕೃಷ್ಣನೇ ಪರಮಾತ್ಮ ಎಂಬುದಾಗಿ ದಾಸರ ಉಗಾಭೋಗಗಳಲ್ಲಿದ್ದುದೂ ಇದೇ ಭಾವ. ಹೀಗಾಗಿ ಖುಸರೂ-ಗೋಪಾಲನಾಯಕರು ನಿರ್ಮಿಸಿದ ಹೊಸ ಖಯಾಲ ಸಂಗೀತದ ಕೃತಿಗಳಲ್ಲಿಯೂ ಇದೇ ಪ್ರೇಯಸಿ-ಪ್ರಿಯಕರ ವಿಪ್ರಲಂಭ ಶೃಂಗಾರ ಮುಂದುವರಿಯಿತು. ಧ್ರುಪದಕ್ಕಿಂತಲೂ ನಿಧಾನವಾಗಿದ್ದ ಗೋಪಾಲನಾಯಕನ ಉಗಾಭೋಗದ ಠಾಯೀ ಲಯವು ಇನ್ನೂ ನಿಧಾನವಾಗಿ ಅದು ವಿಲಂಬಿತ ಖಯಾಲ ಎನ್ನಿಸಿಕೊಂಡಿತು. ಲಯದ ಚಮತ್ಕಾರ ಹಾಗೂ ತಾನಗಳ ವೈವಿಧ್ಯಕ್ಕಾಗಿ ವೇಗದ ಎಂದರೆ ದ್ರುತಗತಿಯ ಇನ್ನೊಂದು ಚಿಕ್ಕ ಹಾಡನ್ನು ವಿಲಂಬಿತ ಖಯಾಲ ಮುಗಿದ ಮೇಲೆ ಅದಕ್ಕೇ ಜೋಡಿಸಿ, ಅದೇ ರಾಗದಲ್ಲಿ

ಹಾಡುವ ಕ್ರಮ ಆರಂಭವಾಯಿತು. ವಿಲಂಬಿತ ಖಯಾಲವನ್ನು ವಚನ ಅಥವಾ ಉಗಾಭೋಗಕ್ಕೂ, ದ್ರುತ ಖಯಾಲವನ್ನು ಕೀರ್ತನೆಗೂ ಹೋಲಿಸಬಹುದು.

ಖಯಾಲ ಪದ್ಧತಿ ಆರಂಭವೇನೋ ಆಯಿತು; ಆದರೆ ನೂರಾರು ವರ್ಷಗಳವರೆಗೆ ಅದು ಧ್ರುಪದದ ಸ್ಥಾನವನ್ನಾಕ್ರಮಿಸದೆ ತಲೆ ತಗ್ಗಿಸಿಯೇ ಬಾಳಬೇಕಾಯಿತು. ಅದರ ನಿರ್ಮಾಪಕರಲ್ಲೊಬ್ಬನು ಕರ್ನಾಟಕದ ಗೋಪಾಲ ನಾಯಕನಾದರೂ ಆ ಸಂಗೀತ ದಿಲ್ಲಿಯಲ್ಲಿದ್ದುದರಿಂದ ಮತ್ತು ಅಮೀರ ಖುಸುರೂವಿನ ಪ್ರತಿಷ್ಠೆ ಪ್ರಭಾವಗಳು ಹೆಚ್ಚಾಗಿದ್ದ ಕಾರಣ ಖಯಾಲ ಹಾಡಿಕೆಯಲ್ಲಿ ಬಳಸುವ ಕೃತಿಗಳ ಭಾಷೆ ಕನ್ನಡವಾಗದೆ ಖುಸರೂವಿನ ಮಾತೃಭಾಷೆಯಾದ 'ಹಿಂದವೀ' ಎಂದರೆ ಹಿಂದೂಸ್ತಾನೀ ಆಯಿತು. ಭಾರತೀಯ ಸಂಗೀತಕ್ಕೆ ದೇಶದ ಕೆಲ ಭಾಗಗಳಲ್ಲಿ ಇತ್ತೀಚೆಗೆ ಹಿಂದೂಸ್ತಾನೀ ಎಂಬ ಹೆಸರು ಬರುವುದಕ್ಕೆ ಈ 'ಹಿಂದವೀ' ಭಾಷೆಯೇ ಕಾರಣ.

## ಗೀತ ಪ್ರಬಂಧ

ಗೋಪಾಲನಾಯಕ ಗಾಯಕನಷ್ಟೇ ಆಗಿರದೆ ಪ್ರಬಂಧಕಾರನೂ ಆಗಿದ್ದ. ಚತುರ ಕಲ್ಲಿನಾಥನೆಂಬ ಪಂಡಿತನ ಬರಹದಲ್ಲಿ ಗೋಪಾಲನಾಯಕನ ರಾಗ ಕದಂಬದ ಉಲ್ಲೇಖವಿದೆ. "ತಥಾ ಹಿ ಗೋಪಾಲನಾಯಕೇನ ಗೀತ ದ್ವಾತ್ರಿಂಶದ್ಭಾಗಯುಕ್ತೇ....ರಾಗಕದಂಬೇ ಪ್ರಥಮ ಸಿಂಹನಂದನ ಕಾಲಬದ್ಧೇ ಮಾಲವಶ್ರೀ ಪದೇ" ಎಂಬುದಾಗಿ ಕಲ್ಲಿನಾಥ ಗೋಪಾಲನಾಯಕನನ್ನು ಸ್ಮರಿಸಿದ್ದಾನೆ. ಇದರ ಮೇಲಿಂದ ಗೋಪಾಲನಾಯಕನು ರಾಗ ಕದಂಬವೆಂಬ ಪ್ರಬಂಧವನ್ನು ಬರೆದಿದ್ದನೆಂಬುದಕ್ಕೆ ಸಾಕ್ಷ್ಯ ಸಿಗುತ್ತದೆ. ಆದರೀಗ ಅದು ದೊರಕಿಲ್ಲ. ಇದರಲ್ಲಿ ಸಿಂಹನಂದನ ತಾಳದಲ್ಲಿ ಗೋಪಾಲನಾಯಕ ರಚಿಸಿ ಹಾಡಿದ ಮಾಲವಶ್ರೀ ರಾಗದ ಗೀತಪ್ರಬಂಧದ ವಿಚಾರ ಬರುತ್ತದೆ. ಅತಿ ಕಠಿಣವಾದ, ಒಂದುನೂರ ಇಪ್ಪತ್ತೆಂಟು ಮಾತ್ರಾಕಾಲದ ಸಿಂಹನಂದನ ತಾಳದಲ್ಲಿ ಗೀತಪ್ರಬಂಧಗಳನ್ನು ರಚಿಸಿ ಹಾಡಬಲ್ಲವನಾಗಿದ್ದ ಕರ್ನಾಟಕದ ಗೋಪಾಲನಾಯಕ.

ಅನಂತರದ ಸಂಗೀತಜ್ಞರಲ್ಲಿ ಕಲ್ಲಿನಾಥ ಪ್ರಮುಖನಾದವನು. ಇವನ ಗ್ರಂಥದ ಹೆಸರು 'ಕಲಾನಿಧಿ'. ಇದು ಶಾರ್ಙ್ಗದೇವನ 'ಸಂಗೀತ ರತ್ನಾಕರ'ಕ್ಕೆ ಕಲ್ಲಿನಾಥ ಬರೆದ ಟೀಕೆ. ಸಂಗೀತರತ್ನಾಕರ ಸುಲಭವಾಗಿ ಅರ್ಥವಾಗುವ ಗ್ರಂಥವಲ್ಲ. ಆದರೆ ಕಲ್ಲಿನಾಥನ ಟೀಕಾಗ್ರಂಥವಾದ 'ಕಲಾನಿಧಿ'ಯ ಸಹಾಯದಿಂದ ಓದಿದರೆ 'ಸಂಗೀತರತ್ನಾಕರ'ದ ಮೂಲ ದ್ರವ್ಯವನ್ನು ಸುಲಭವಾಗಿ ಗ್ರಹಿಸಬಹುದು. ಕಲ್ಲಿನಾಥನೂ ಕರ್ನಾಟಕದವನೇ. ಇವನು ವಿಜಯನಗರದ ರಾಜ ಪ್ರೌಢದೇವರಾಜನ ಆಶ್ರಯದಲ್ಲಿ ಅಂದರೆ ಹದಿನೈದನೆಯ ಶತಮಾನದಲ್ಲಿ ಇದ್ದ. ಕಲ್ಲಿನಾಥ ಎಂಬುದು ಇವನ ಹೆಸರಿನ ಸಂಸ್ಕೃತೀಕರಣ. ಇವನ ನಿಜವಾದ ಹೆಸರು ಕಲ್ಲಪ್ಪ. ಸಂಗೀತಶಾಸ್ತ್ರ ವಿಷಯಕವಾದ ಇವನ ಪಾಂಡಿತ್ಯ ಎಷ್ಟು ಅಗಾಧವಾಗಿತ್ತೆಂದರೆ ಇವನಿಗೆ 'ಚತುರ', 'ಅಭಿನವ ಭರತಾಚಾರ್ಯ' ಮುಂತಾದ ಬಿರುದುಗಳಿದ್ದವು. ತನ್ನ ಆಶ್ರಯದಾತನಾದ ಕನ್ನಡದೊರೆ ಇಮ್ಮಡಿ ದೇವರಾಜ ಅರ್ಥಾತ್ ಪ್ರೌಢದೇವರಾಯನ ಆಜ್ಞೆಯ ಮೇರೆಗೆ ಇವನು 'ಕಲಾನಿಧಿ'ಯನ್ನು ಬರೆದೆನೆಂಬುದಾಗಿ ಹೇಳಿಕೊಂಡಿದ್ದಾನೆ.

ಹದಿಮೂರನೆಯ ಶತಮಾನದಲ್ಲಿ ಶಿವಶರಣರಂತಹ ಗಾಯಕ ಕಲಾವಿದರೂ ಸೋಮೇಶ್ವರ, ನಾನ್ಯದೇವರಂತಹ ಶಾಸ್ತ್ರಕಾರರೂ ಇದ್ದ ಕಾಲದಲ್ಲಿ ಕರ್ನಾಟಕದ ಸಂಗೀತಕ್ಕೆ ಒಂದು ಮಹಾಪೂರ ಬಂದಂತಾಗಿತ್ತು. ಮುಂದೆ ಹದಿನಾರನೆಯ ಶತಮಾನದಲ್ಲಿ ಮತ್ತೊಮ್ಮೆ ಸಂಗೀತಗಂಗೆ ತುಂಬಿ ಹರಿಯಿತು. ಅದಕ್ಕೆ ಕಾರಣಕರ್ತರು ಶ್ರೀ ಪುರಂದರದಾಸರೇ ಮೊದಲಾದ ಹರಿದಾಸರು ಮತ್ತು ಪುಂಡರೀಕ ವಿಠಲನೆಂಬ ಶಾಸ್ತ್ರಕಾರ. ಅಲ್ಲದೆ ಗ್ವಾಲಿಯರನಿಂದ ದಕ್ಷಿಣಕ್ಕೆ ಬಂದಿದ್ದ ಧ್ರುಪದ ಗಾಯಕ ವಾದಕರು.

ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಾದ ಹಂಪೆಯಲ್ಲಿ ಶ್ರೀ ವ್ಯಾಸರಾಯರ ನೇತೃತ್ವದಲ್ಲಿ ದಾಸಕೂಟ ವೈಷ್ಣವ ಭಕ್ತಿಯನ್ನು ಹಬ್ಬಿಸಿ ನೆಲೆಗೊಳಿಸುವುದರಲ್ಲಿ ನಿರತವಾಗಿತ್ತು. ಆ ಕೂಟದಲ್ಲಿ ಅಗ್ರಗಣ್ಯರು ಪುರಂದರದಾಸರು. ಅವರು ನೂರಾರು ಕೀರ್ತನೆಗಳನ್ನೂ, ಸುಳಾದಿಗಳನ್ನೂ, ಉಗಾಭೋಗಗಳನ್ನೂ ರಚಿಸಿ, ಕೈಗೆ ತಾಳ ತಂಬೂರಿಗಳನ್ನು ತೆಗೆದುಕೊಂಡು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ಭಿಕ್ಷಾಟನದ ನೆವದಲ್ಲಿ ಮನೆಮನೆಗೆ ಹೋಗಿ

ಹಾಡಿ ಕುಣಿದು, ಜನಮನಗಳಲ್ಲಿ ಹರಿಭಕ್ತಿಯನ್ನು ಬೆಳೆಸಿದರು. ಅದರೊಂದಿಗೆ ಶಾಸ್ತ್ರಶುದ್ಧವಾದ ಸಂಗೀತವನ್ನೂ, ಪ್ರಜಾಕೋಟಿಯ ಕಿವಿಗಳಲ್ಲಿ ತುಂಬಿ ನಿನದಿಸುವಂತೆ ಮಾಡಿದರು. ಭರತಮುನಿಯ ವ್ಯಾಖ್ಯೆಯಂತೆ "ವಾದ್ಯಂ ಗೀತಂ ನೃತ್ಯಂ ಸಂಗೀತಮುಚ್ಯತೇ"— ಎಂದರೆ ವಾದ್ಯ ಗೀತ ನೃತ್ಯಗಳು ಸೇರಿದಾಗ ಅದು ಸಂಗೀತವೆನ್ನಿಸಿಕೊಳ್ಳುತ್ತದೆ. ಪುರಂದರದಾಸರ ಮುಖದಿಂದ ಹಾಡು ಹೊಮ್ಮುತ್ತಿದ್ದಿತು. ಅವರ ಕೈಗಳು ವಾದ್ಯ ನುಡಿಸುತ್ತಿದ್ದುವು, ಕಾಲುಗಳು ಕುಣಿಯುತ್ತಿದ್ದುವು. ಹೀಗಾಗಿ ದಾಸರು ಮೂರ್ತಿಮಂತ ಸಂಗೀತವಾಗಿದ್ದರು.

ಪುರಂದರದಾಸರ ಕೃತಿಗಳು ಕನ್ನಡ ಸಾಹಿತ್ಯ ಭಂಡಾರಕ್ಕೆ ಅಪರಿತ್ತ ಅತ್ಯಮೂಲ್ಯವಾದ ಕಾಣಿಕೆ. ಜೊತೆಗೆ ಅವರು ಕರ್ನಾಟಕ ಸಂಗೀತಕ್ಕೂ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಆಗತಾನೇ ಪರಿಪೂರ್ಣಾವಸ್ಥೆಗೆ ಬಂದಿದ್ದ ಭಾರತೀಯ ಸಂಗೀತವನ್ನು ಕಲಿಯುವವರಿಗೋಸ್ಕರ ಪುರಂದರದಾಸರು ಸುಲಭಗೊಳಿಸಿದರು; ಸುವ್ಯವಸ್ಥಿತವಾದ ಪ್ರಾರಂಭಿಕ ಪಾಠಗಳನ್ನು ಹಾಕಿಕೊಟ್ಟರು. ಮಾಯಾಮಾಳವಗೌಳ ರಾಗವೇ ಬಾಲಪಾಠಕ್ಕೆ ಯೋಗ್ಯವೆಂದೂ, ಸರಳೆ, ಜಂಟಿವರಸೆ, ಅಲಂಕಾರಗಳನ್ನು ಅಭ್ಯಾಸ ಮಾಡಲು ಆ ರಾಗವೇ ತಕ್ಕುದೆಂದೂ ನಿರ್ಧರಿಸಿದರು. ಏಕೆಂದರೆ ಅದರಲ್ಲಿ ಕೋಮಲ ಮತ್ತು ತೀವ್ರ ಸ್ವರಗಳು ಒಂದಾದ ನಂತರ ಒಂದು ಬರುವುದರಿಂದ ಮಾಯಾಮಾಳವಗೌಳ ರಾಗವನ್ನು ಕರಗತ ಮಾಡಿಕೊಂಡರೆ ಬೇರೆ ರಾಗದ ಸ್ವರಗಳನ್ನು ಮನನಮಾಡಿಕೊಳ್ಳುವುದು ಸುಲಭವಾಗುವುದು. ಅದಕ್ಕಾಗಿ ಪುರಂದರದಾಸರು ಅಭ್ಯಾಸಿಗಳಿಗೋಸ್ಕರ ಆ ರಾಗದಲ್ಲಿ ಜನ್ಯವಾದ ಮಲಹರಿ 'ಲಂಬೋದರ ಲಕುಮಿಕರಾ' 'ಕೆರೆಯ ನೀರನು ಕೆರೆಗೆ ಚೆಲ್ಲಿ' ಮುಂತಾದ ಹಾಡುಗಳನ್ನು ರಚಿಸಿದರು. ಸಂಗೀತ ಕಲಿಯಲಾರಂಭಿಸಿದ ವಿದ್ಯಾರ್ಥಿಗಳು ಈಗಲೂ ಮೊದಲಲ್ಲಿ ಈ ಹಾಡುಗಳನ್ನೇ ಕಲಿಯುತ್ತಾರೆ; ಆಮೇಲೆ ದಾಸರ ಕೃತಿಗಳನ್ನು ಕಣ್ಣೆತ್ತಿ ನೋಡುವುದೂ ಇಲ್ಲ.

ಪುರಂದರವಿಠಲನ ಭಕ್ತರಾದ ಪುರಂದರದಾಸರ ಕಾಲದಲ್ಲೇ ಇದ್ದ ಶಾಸ್ತ್ರಜ್ಞ ಪುಂಡರೀಕವಿಠಲ. ಇವನು ತುಮಕೂರು ಜಿಲ್ಲೆಯ ಶಿವಗಂಗಾ ಬೆಟ್ಟದ ಬಳಿಯ ಸಾತನೂರಿನವನು. (ಮಾಗಡಿಯ ಹತ್ತಿರದಲ್ಲಿಯೂ ಒಂದು

ಸಾತನೂರು ಇದೆ.) ಇವನ ಬಾಲ್ಯ ಹಾಗೂ ಸಂಗೀತ ಶಿಕ್ಷಣಗಳ ಬಗೆಗಿನ ವಿವರಗಳು ತಿಳಿದಿಲ್ಲ. ಆದರೆ ಬೆಳೆದು ದೊಡ್ಡವನಾದ ಮೇಲೆ ಸಂಗೀತಜ್ಞ ನಾಗಿ ದೇವಗಿರಿಯಿಂದ ಸುಮಾರು ನೂರಿಪ್ಪತ್ತು ಮೈಲಿಗಳ ದೂರದಲ್ಲಿರುವ ಅಹಮುದ್‌ನಗರದಲ್ಲಿ ಆಳುತ್ತಿದ್ದ ಬುರಹಾನಖಾನನೆಂಬ ಸುಲ್ತಾನನ ಆಶ್ರಯದಲ್ಲಿದ್ದುದಾಗಿ ತಿಳಿದುಬರುತ್ತದೆ. ಈ ಸುಲ್ತಾನನ ಆಶ್ರಯ ದಲ್ಲಿದ್ದಾಗಲೇ ಅಂದರೆ ಸುಮಾರು ೧೫೬೦ರಲ್ಲಿ "ಸದ್ರಾಗಚಂದ್ರೋದಯ" ಎಂಬ ಗ್ರಂಥವನ್ನು ಬರೆದ. ಇದು ಸಂಸ್ಕೃತದಲ್ಲಿದೆ. ಇದಲ್ಲದೆ ಸಂಸ್ಕೃತ ದಲ್ಲಿಯೇ ಇವನು ಇನ್ನೂ ಮೂರು ಗ್ರಂಥಗಳನ್ನು ಬರೆದಿದ್ದಾನೆ. ಅವುಗಳು "ರಾಗಮಂಜರೀ", "ನರ್ತನ ನಿರ್ಣಯ" ಮತ್ತು "ರಾಗಮಾಲಾ". ಮೊದಲನೆಯ ಗ್ರಂಥದ ಕೊನೆಯಲ್ಲಿ "ಇತಿ ಶ್ರೀ ಕರ್ಣಾಟಕಜಾತೀಯ ಪುಂಡರೀಕವಿಠ್ಠಲ ವಿರಚಿತೇ ಸದ್ರಾಗಚಂದ್ರೋದಯೇ..........." ಎಂದು ಹೇಳಿದ್ದಾನೆ. ಎರಡನೆಯ ಗ್ರಂಥದಲ್ಲಿಯೂ ಹೀಗೆಯೇ ಬರೆದಿದ್ದಾನೆ. ಆದರೆ ಅದರಲ್ಲಿ ತನ್ನ ಆಶ್ರಯದಾತ ಮಾಧವಸಿಂಹನೆಂದು ಹೇಳಿ, ಅವನಿಗೆ ಶುಭ ಕೋರಿದ್ದಾನೆ. ಆಗ ಪುಂಡರೀಕ ರಾಜಸ್ಥಾನದಲ್ಲಿಯ ಜಯಪುರದ ರಾಜನ ಆಸ್ಥಾನದಲ್ಲಿದ್ದ.

ಹಿಂದೆ ಹದಿಮೂರನೆಯ ಶತಮಾನದಲ್ಲಿ ಗೋಪಾಲನಾಯಕ ದಕ್ಷಿಣ ದಿಂದ ದಿಲ್ಲಿಗೆ ಹೋದಂತೆ ಪುಂಡರೀಕವಿಠ್ಠಲನೂ ಹೋಗಬೇಕಾಯಿತು. ಅಲ್ಲಾ ಅಕಬರ ಬಾದಶಹನ ಆಸ್ಥಾನದಲ್ಲಿದ್ದುಕೊಂಡು, "ನರ್ತನ ನಿರ್ಣಯ" ಮತ್ತು "ರಾಗಮಾಲಾ" ಗ್ರಂಥಗಳನ್ನು ರಚಿಸಿದ.

ಪುಂಡರೀಕವಿಠ್ಠಲನ ಸಮಕಾಲೀನನಾದ ರಾಮಾಮಾತ್ಯನೆಂಬುವನು ವಿಜಯನಗರದ ಅಳಿಯ ರಾಮರಾಯನ ಆಶ್ರಯದಲ್ಲಿದ್ದುಕೊಂಡು "ಸ್ವರಮೇಲ ಕಲಾನಿಧಿ" ಎಂಬ ಶಾಸ್ತ್ರಗ್ರಂಥವನ್ನು ಬರೆದ. ರಾಮ ರಾಯನ ಕಾಲಕ್ಕೆ ಕರ್ನಾಟಕ ಸಾಮ್ರಾಜ್ಯದ ಮೇಲೆ ಮುಸಲ್ಮಾನರ ದಾಳಿ ಯಾಗಿ ವಿಜಯನಗರದ ಪತನವಾಯಿತು. ಹಂಪೆ ಹಾಳಾಯಿತು, ದಾಸಕೂಟ ಚೆದರಿತು. ಕನ್ನಡ ಭಾಷೆಗಿದ್ದ ರಾಜಾಶ್ರಯ ಜನಾಶ್ರಯಗಳೆರಡೂ ತಪ್ಪಿದವು. ಪುರಂದರದಾಸರೂ, ಪುಂಡರೀಕವಿಠ್ಠಲನೂ ಪೋಷಿಸಿ, ಬೆಳೆಸಿದ್ದ ಸಂಗೀತಕಲೆ ಮತ್ತು ಶಾಸ್ತ್ರಗಳು ಆಶ್ರಯದಾತರನ್ನರಸಿ ದಕ್ಷಿಣಕ್ಕೆ

ತಂಜಾವೂರಿಗೆ ಹೋದುವು. ಕರ್ನಾಟಕದಿಂದ ಬಂದುದೆಂಬ ಕಾರಣಕ್ಕಾಗಿ ದಕ್ಷಿಣದಲ್ಲಿ ಭಾರತೀಯ ಸಂಗೀತಕ್ಕೆ "ಕರ್ನಾಟಕ ಸಂಗೀತ" ಎಂಬ ಹೆಸರು ಬಂದಿತು.

## ದಕ್ಷಿಣದಲ್ಲಿ

ಹದಿನೆಂಟನೆಯ ಶತಮಾನದಲ್ಲಿ ತಂಜಾವೂರಿನ ಮರಾಠಾ ವಂಶದ ರಾಜನಾದ ತುಳಜಾಜೀ ಮಹಾರಾಜನೂ ಪುಂಡರೀಕನ ಮತವನ್ನೇ ಅನುಸರಿಸಿ "ಸಂಗೀತ ಸಾರಾಮೃತ"ವನ್ನು ಬರೆದ. ಇವನು ತನ್ನ ಪುಸ್ತಕದಲ್ಲಿ ತನ್ನ ಗುರುವಾದ ವ್ಯಾಸಪ್ಪಾಚಾರ್ಯನೆಂಬುವನು, ಪ್ರಸಿದ್ಧ ಸಂಗೀತವಿದ್ಯಾ ಸಂಪ್ರದಾಯ ಪ್ರವರ್ತಕನೆಂದೂ, ಕಲ್ಪನಾ ಚತುರಾನನನೆಂದೂ 'ಜಯ ಕರ್ನಾಟಕ ಧಾರಾ' ಎಂಬ ಪ್ರಬಂಧವನ್ನು ಬರೆದವನೆಂದೂ ಸ್ಮರಿಸಿದ್ದಾನೆ. ಸುಳಾದಿಯ ಲಕ್ಷಣವನ್ನು ಹೇಳುವಾಗ, 'ವಿಠ್ಠಲೇನ ಉದಾಹೃತಂ' ಎಂದು ಪುಂಡರೀಕನ ಅಭಿಪ್ರಾಯವನ್ನೇ ಅನುಮೋದಿಸಿದ್ದಾನೆ. ಅಲ್ಲದೆ, ತುಳಜಾಜೀ ಮಹಾರಾಜ "ಇತಿ ಸಾಲಗ ಸೂಡಸ್ಥ ಗೀತಾನಾಂ ಲಕ್ಷ್ಯ ಕೀರ್ತನಂ ಶ್ರೀ ಪುರಂದರದಾಸಾದ್ಯೈರಭಿಯುಕ್ತೈಃ ಪುರಾತನೈಃ" ಎಂಬುದಾಗಿ ಪುರಂದರದಾಸರನ್ನೂ ನೆನೆಸಿಕೊಂಡಿದ್ದಾನೆ.

೧೫೬೫ರಲ್ಲಿ ಪುರಂದರದಾಸರು ಕಾಲವಾದ ಮೇಲೆ ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ ತಾತ್ಕಾಲಿಕವಾಗಿ ನಿಂತೇಹೋಯಿತು. ಒಂದು ರೀತಿಯಲ್ಲಿ ನೋಡಿದರೆ ಕರ್ನಾಟಕ ಸಾಮ್ರಾಜ್ಯಕ್ಕೂ ಸಂಗೀತದ ಕೊಡುಗೆಗೂ ನಿಕಟ ಸಂಬಂಧವಿರುವಂತೆ ತೋರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ನಾನ್ಯದೇವ, ಚಾಲುಕ್ಯ ಸೋಮೇಶ್ವರರಂತಹ ಅಸಾಮಾನ್ಯ ಅರಸರ ಆಡಳಿತದಲ್ಲಿ ಬಂಗಾಲ, ಬಿಹಾರ, ನೇಪಾಳದವರೆಗೆ ಕನ್ನಡಿಗರ ಸಾಮ್ರಾಜ್ಯವಿದ್ದಾಗ ಆರಂಭವಾದ ಕನ್ನಡಿಗರ ಕೊಡುಗೆ ಹದಿನೇಳನೆಯ ಶತಮಾನದಲ್ಲಿ ಅಳಿಯ ರಾಮರಾಯನ ಕಾಲಕ್ಕೆ ಕರ್ನಾಟಕ ಸಾಮ್ರಾಜ್ಯ ಅಳಿಯುವವರೆಗೆ ನಿರಂತರವಾಗಿ ನಡೆದುಕೊಂಡು ಬಂತು. ಈ ಅವಧಿಯಲ್ಲಿ ಕನ್ನಡಿಗರಾದ ಶಾಸ್ತ್ರಕಾರರು ಸಂಗೀತದ ಮೇಲೆ ಸಂಸ್ಕೃತದಲ್ಲಿ ಗ್ರಂಥಗಳನ್ನು

ರಚಿಸಿದರು. ಗಾಯಕರಾದ ಶಿವಶರಣರೂ, ಹರಿದಾಸರೂ ಕನ್ನಡದಲ್ಲಿ ಕೀರ್ತನೆಗಳನ್ನೂ, ಸುಳಾದಿ ಉಗಾಭೋಗಗಳನ್ನೂ ರಚಿಸಿ ಹಾಡಿದರು.

ಹದಿನೇಳನೆಯ ಶತಮಾನದಲ್ಲಿ ಕೆಳದಿ ಸಂಸ್ಥಾನದ ಅರಸನಾದ ಹಿರಿಯ ಬಸವರಾಜನೆಂಬುವನು "ಶಿವತತ್ವರತ್ನಾಕರ" ಎಂಬ ಸಂಸ್ಕೃತ ಗ್ರಂಥವನ್ನು ಬರೆದ. ಅದು ಸೋಮೇಶ್ವರನ "ಮಾನಸೋಲ್ಲಾಸ" ದಂತೆಯೇ ರಾಜನೀತಿ, ಚಿತ್ರಕಲೆ, ವಾಸ್ತು ಶಿಲ್ಪ, ಬೇಟೆ ಮುಂತಾದ ಅನೇಕ ವಿಷಯಗಳನ್ನು ಪ್ರತಿಪಾದಿಸುವ ವಿಶ್ವಕೋಶ. ಅದರಲ್ಲಿ ಬಸವರಾಜನು ಆರನೇ ಕಲ್ಲೋಲದ ಏಳು, ಎಂಟು, ಒಂಭತ್ತನೆಯ 'ತರಂಗ' ಗಳಲ್ಲಿ ಗೀತ ವಾದ್ಯ ನೃತ್ಯಗಳ ವಿಷಯವಾಗಿ ಬರೆದಿದ್ದಾನೆ.

## ರಾಗ ರಾಗಿಣಿಗಳು

ಬಸವರಾಜನು ಕೃತಿರಚನೆಯಲ್ಲಿ ಎಂದರೆ ತನ್ನ ಗ್ರಂಥದ ಹೊಳಹು-ತಿರುಳುಗಳಲ್ಲಿ ಸೋಮೇಶ್ವರನನ್ನು ಅನುಸರಿಸಿದ್ದರೂ, ಮೊದಲು ಉದಿಸಿದುವೆಂದು ಹೇಳಲಾದ ಆರು ಪುರುಷ ರಾಗಗಳ ಹೆಸರುಗಳನ್ನು ಹೇಳುವಲ್ಲಿ ಅವನಿಂದ ಬೇರೆಯಾಗಿದ್ದಾನೆ. ಸೋಮೇಶ್ವರನು ಹೆಸರಿಸಿದ ಆರು ಪುರುಷ ರಾಗಗಳು : ಶ್ರೀ, ವಸಂತ, ಭೈರವ, ಮೇಘ ಮತ್ತು ನಟನಾರಾಯಣ. ಅಲ್ಲದೇ ಕರ್ನಾಟಕದವನೇ ಆದ ಪುಂಡರೀಕವಿಠ್ಠಲನು ಹೇಳಿರುವ ಆರು ಪುರುಷ ರಾಗಗಳ ಸಮುಚ್ಚಯವೇ ಬೇರೆಯಾಗಿದೆ. ಅದು ಹೀಗೆ : ಭೈರವ, ಹಿಂಡೋಲ, ದೇಶಿಕಾರ, ಶ್ರೀ, ಶುದ್ಧನಾಟ ಮತ್ತು ನಟನಾರಾಯಣ. ಆದರೆ ಬಸವರಾಜನು ಕರ್ನಾಟಕದವನಾದರೂ ಇವರಿಬ್ಬರನ್ನೂ ಅನುಸರಿಸಿಲ್ಲ. ಅವನು ಹೆಸರಿಸಿರುವ ಪುರುಷರಾಗಗಳು : ಭೈರವ, ಕೌಶಿಕ (ಅಥವಾ ಮಾಲವಕೌಶಿಕ ಅಂದರೆ ಮಾಲಕಂಸ), ಹಿಂಡೋಲ, ದೀಪಕ, ಶ್ರೀ ಮತ್ತು ಮೇಘ. ಆಶ್ಚರ್ಯದ ವಿಚಾರವೆಂದರೆ ಗ್ವಾಲಿಯರ ರಾಜ್ಯದ ರಾಜಾ ಮಾನಸಿಂಗ ತೋಮರನ "ಮಾನಕುತೂಹಲ"ದಲ್ಲಿ ಇವೇ ರಾಗಗಳು, ಇದೇ ಕ್ರಮದಲ್ಲಿ ಬರುತ್ತವೆ. ತಾನಸೇನನೂ ಕೂಡಾ ತನ್ನ ಒಂದು ಧ್ರುಪದದಲ್ಲಿ ಈ ರಾಗಗಳನ್ನು ಹೇಳಿ ಕೊನೆಯ ಚರಣದಲ್ಲಿ ತನ್ನ ಆಶ್ರಯ

ದಾತನಾದ ಅಕಬರ ಬಾದಶಾಹನನ್ನು ಉದ್ದೇಶಿಸಿ : "ಸುನೋ ಶಾಹ ಅಕಬರ ಏಕ ಏಕ ರಾಗ ನಾರೀ ಪಾಂಚ ಪಾಂಚ ಲಾಯೋ ಹೈರೇ" ಎಂದಿದ್ದಾನೆ. ಒಂದೊಂದು ರಾಗವೂ ಐದೈದು ಹೆಂಗಸರನ್ನು ತಂದಿತಂತೆ ! ಹಾಗೆಂದರೆ ಒಂದೊಂದು ರಾಗಕ್ಕೂ ಐದೈದು ಭಾರ್ಯಾ ರಾಗಗಳು ಅರ್ಥಾತ್ ರಾಗಿಣಿಗಳು ಎಂದರ್ಥ.

## ಸೋಮೇಶ್ವರ ಮತ ; ಹನೂಮನ್ಮತ

ಹಂಪೆಯ ಲಕ್ಷ್ಮೀಧರ ಪಂಡಿತನ ಮಗ ಚತುರ ದಾಮೋದರ. ಕನ್ನಡಿಗನಾದ ಅವನು ದಿಲ್ಲಿಯಲ್ಲಿ ಜಹಾಂಗೀರನ ಆಸ್ಥಾನಪಂಡಿತನಾಗಿದ್ದ. ಅವನ ಗ್ರಂಥ "ಸಂಗೀತ ದರ್ಪಣ". ರಾಗ ರಾಗಿಣಿಗಳ ವಿಚಾರವಾಗಿ ಇರುವ ಬೇರೆ ಬೇರೆ ಮತಗಳನ್ನು ತನ್ನ ಗ್ರಂಥದಲ್ಲಿ ಅವನು ಸಂಗ್ರಹಿಸಿ ಕೊಟ್ಟಿದ್ದಾನೆ. ಅವುಗಳಲ್ಲಿ ಸೋಮೇಶ್ವರಮತ ಹನೂಮನ್ಮತ ಮತ್ತು ರಾಗಾರ್ಣವ ಮತಗಳು ಪ್ರಸಿದ್ಧವಾಗಿವೆ. "ಮಾನಕುತೂಹಲ"ದಲ್ಲಿ ರಾಗಪರಿವಾರವನ್ನು ವಿವರಿಸುವಲ್ಲಿ ಹನೂಮನ್ಮತವನ್ನು ಅನುಸರಿಸಲಾಗಿದೆ. ಮಾನಸಿಂಗನು ಶ್ರೀರಾಗದ ರಾಗಿಣಿ ಕರ್ನಾಟಕೀ ಎಂದು ಹೇಳಿದ್ದರೆ ಬಸವ ರಾಜನು ದೀಪಕ ರಾಗದ ರಾಗಿಣಿ ಕರ್ನಾಟಿಕಾ ಎಂದು ಹೇಳಿದ್ದಾನೆ. ಮತ್ತೊಂದು ಶ್ಲೋಕದಲ್ಲಿ ಅದನ್ನೇ ಕಾನಡೀ ರಾಗವೆಂದು ಕರೆದಿದ್ದಾನೆ. ಅದೇ ಈಗ ಕಾನಡಾ ರಾಗವೆನಿಸಿಕೊಂಡಿದೆ.

ಕರ್ನಾಟಕದವನಾದ ಬಸವರಾಜ ದೂರದ ಮಧ್ಯಪ್ರದೇಶದ ಮಾನ ಸಿಂಗನ ಇಲ್ಲವೆ, ಉತ್ತರದ ತಾನಸೇನನ ಮತವನ್ನು ಅನುಮೋದಿಸಿದುದಕ್ಕೆ ಕಾರಣ, ಅವನ ಕಾಲದಲ್ಲಿ ಉತ್ತರದ್ದು ದಕ್ಷಿಣದ್ದು ಎಂಬ ಭೇದವಿಲ್ಲದೆ ಭಾರತೀಯ ಸಂಗೀತ ಒಂದೇ ಆಗಿತ್ತು. ಹದಿನೇಳನೆಯ ಶತಮಾನದ ಬಸವರಾಜ ಕರ್ನಾಟಕದವನೇ ಆದರೂ ಚಾಲುಕ್ಯ ಸೋಮೇಶ್ವರ ಕಾಲಮಾನದಿಂದ ಐದು ನೂರು ವರ್ಷ ದೂರದವನಾಗಿದ್ದ. ಆದರೆ ಗ್ವಾಲಿಯರಿನ ಮಾನಸಿಂಗ ಭೌಗೋಲಿಕವಾಗಿ, ಎರಡು ಸಾವಿರ ಮೈಲು ದೂರವಿದ್ದರೂ, ಕಾಲಮಾನದಿಂದ ಕೇವಲ ಎರಡು ನೂರು ವರ್ಷಗಳ

ಅಂತರದಿಂದಾಗಿ ಹತ್ತಿರದವನಾಗಿದ್ದ. ಅಲ್ಲದೆ ಮಾನಸಿಂಗ ಪ್ರತಿಪಾದಿಸಿದ ಶಾಸ್ತ್ರ ವಿಚಾರಗಳು ತಾನಸೇನನ ಸಂಗೀತ ರೂಪದಲ್ಲಿ ದಕ್ಷಿಣಕ್ಕೆ ಹರಿದು ಬಂದು ಪರಿಚಿತವಾಗಿದ್ದವು, ಪ್ರಭಾವ ಬೀರಿದ್ದವು. ಕೆಳದಿಯ ಬಸವ ರಾಜನಿಗೆ ನೆರೆಯ ರಾಜ್ಯವಾದ ವಿಜಾಪುರದಲ್ಲಿ ಧ್ರುಪದ ಸಂಗೀತವು ನೆಲೆ ಯೂರಿತ್ತು. ಅಲ್ಲಿಯ ರಾಜನಾದ ಇಬ್ರಾಹಿಮ ಅದಿಲಶಾಹ ಧ್ರುಪದಿನ ಆಶ್ರಯದಾತನಾಗಿದ್ದುದಲ್ಲದೆ, ಸ್ವತಃ ಧ್ರುಪದದ ರಚನಕಾರನಾಗಿದ್ದ. ಹೀಗಾಗಿ ಬಸವರಾಜನು ಮಾನಸಿಂಗನ ಮತವನ್ನು ಅನುಸರಿಸಿರುವುದು ಸಹಜವಾಗಿದೆ.

ಕರ್ನಾಟಕದ ಶಾಸ್ತ್ರಕಾರ ಸೋಮೇಶ್ವರ ಹೇಳಿರುವ ಆರೂ ಪುರುಷ ರಾಗಗಳು ಈಗ ಹಿಂದೂಸ್ತಾನೀ ಸಂಗೀತದಲ್ಲಿ ದಿನಬಳಕೆಯಲ್ಲಿವೆ. ಅವಲ್ಲದೆ ಅವನಿಗಿಂತ ಸ್ವಲ್ಪ ಬೇರೆಯಾಗಿ ಪುಂಡರೀಕ ವಿಠಲನು ಹೇಳಿದ ದೇಶಿಕಾರ ಮತ್ತು ಶುದ್ಧನಾಟ ರಾಗಗಳೂ ಹಿಂದೂಸ್ತಾನೀ ಗಾಯಕ ವಾದಕರಿಗೆ ಸುಪರಿಚಿತವಾದ ರಾಗಗಳು. ಇವೆಲ್ಲ ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ ಎನ್ನಬಹುದು.

ಮಾನಸಿಂಗನು ಕರ್ನಾಟಕೀ ಎಂದು ಹೆಸರಿಸಿರುವ ರಾಗವನ್ನು ಬಸವರಾಜನು ಕಾನಡೀ ಎಂದು ಕರೆದಿದ್ದಾನೆ. ಜಯದೇವನ 'ಗೀತ ಗೋವಿಂದ' ಪದ್ಯದ ಮೇಲ್ಗಡೆಯಲ್ಲು 'ಕರ್ಣಾಟ' ರಾಗದ ಹೆಸರಿದೆ. ಆದರೆ ಆ ಕಾವ್ಯದ ಬೇರೊಂದು ಪ್ರತಿಯಲ್ಲಿ ಆ ರಾಗದ ಹೆಸರು 'ಕಾನಡ ಗೌಡ' ಎಂದಿದೆ. ಎಂದಮೇಲೆ ಕಾನಡಾ ಕಾನಡೀ ಎಂಬ ಶಬ್ದಗಳು ಕರ್ಣಾಟ ಶಬ್ದದ ತದ್ಭವಗಳು. ಆದ್ದರಿಂದ ಹಿಂದೂಸ್ತಾನಿಯವರು ಹಾಡುವ 'ಕಾನಡಾ' ರಾಗ ಕರ್ನಾಟಕದ್ದೇ ಕೊಡುಗೆ.

ಚಾಲುಕ್ಯ ಸೋಮೇಶ್ವರ 'ಮೇಘ' ಎಂಬ ರಾಗವನ್ನು ಹೆಸರಿಸಿ ದ್ದಾನೆ. ಹಿಂದೂಸ್ತಾನೀ ಸಂಗೀತಗಾರರು ಈಗಲೂ ಮೇಘಮಲ್ಹಾರ ರಾಗವನ್ನು ಹಾಡುತ್ತಾರೆ. ಮಲ್ಹಾರ ಎನ್ನುವ ಶಬ್ದ ಎಲ್ಲಿಂದ ಬಂತು ? 'ಪಾಡಿ ಗುರ್ಜರಿ ಮಲ್ಲಾರಿ...... ....' ಎಂದು ಮಲ್ಹಾರಿ ರಾಗದ ಹೆಸರು ಶ್ರೀ ಪುರಂದರದಾಸರ ಕೀರ್ತನೆಗಳಲ್ಲಿ ಬರುತ್ತದೆ. ಮಲ್ಲಾರಿ ಎಂಬುದು ಈಶ್ವರನ ಹೆಸರು. ಮಲ್ಲನೆಂಬ ರಾಕ್ಷಸನನ್ನು ಕೊಂದವನು ಮಲ್ಲಾರಿ.

ಕರ್ನಾಟಕದ ಅನೇಕ ಬೆಟ್ಟಗಳಲ್ಲಿ ಮಲ್ಲಾರಿ ಅಥವಾ ಮೈಲಾರಲಿಂಗನ ಪೂಜೆ ನಡೆಯುತ್ತದೆ. ಈ ದೇವರ ಹೆಸರಿನಲ್ಲಿ ಮಲ್ಲಾರಿ ಅಥವಾ ಮಲ್ಹಾರ ರಾಗಕ್ಕೆ ಆ ಹೆಸರು ಬಂದಿತೆಂದೂ, ಮೇಘರಾಗಕ್ಕೆ ಅದನ್ನು ಸೇರಿಸಿದ್ದರಿಂದ ಮೇಘ ಮಲ್ಹಾರವಾಯಿತೆಂದೂ ಸುಪ್ರಸಿದ್ಧ ಸಂಗೀತಜ್ಞರಾದ ಟಿ. ಗೋಸ್ವಾಮಿ ಅವರು ತಮ್ಮ "ಸ್ಟೋರಿ ಆಫ್ ಇಂಡಿಯನ್ ಮ್ಯೂಜಿಕ್" ಗ್ರಂಥದಲ್ಲಿ ಬರೆದಿದ್ದಾರೆ. ಅಂದರೆ ಹಿಂದೂಸ್ತಾನೀ ಸಂಗೀತಗಾರರು ಮಳೆಗಾಲದಲ್ಲಿ ವಿಶೇಷವಾಗಿ ಹಾಡುವ ಮೇಘಮಲ್ಹಾರ ರಾಗವೂ ಕರ್ನಾಟಕದ ಕೊಡುಗೆಯೇ.

ವಿಜಯನಗರ ಸಾಮ್ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಕರ್ನಾಟಕ ಸಾಮ್ರಾಜ್ಯವು ಸಾಕಷ್ಟು ವಿಸ್ತೃತವಾಗಿದ್ದಾಗ, ಅದರ ಆಧಿಪತ್ಯಕ್ಕೊಳಗಾದ ತಮಿಳುನಾಡಿನ ಭಾಗಗಳನ್ನು ವಿಜಯನಗರದ ಪ್ರತಿನಿಧಿಗಳಾದ ಅಧಿಕಾರಿಗಳು ಆಳುತ್ತಿದ್ದರು. ಅಲ್ಲಿನ ಪ್ರಜೆಗಳು ಅವರನ್ನು ಕರ್ನಾಟಕರು ಎಂದು ಕರೆಯುತ್ತಿದ್ದರು. ಸಂಗೀತಕ್ಕೆ ಆಗರವೂ, ಆಶ್ರಯಸ್ಥಾನವೂ ಆಗಿದ್ದ ಹಂಪೆ ಹಾಳಾದ ಮೇಲೆ ಸಂಗೀತಗಾರರು ಆಶ್ರಯದಾತರನ್ನು ಹುಡುಕುತ್ತ ದಕ್ಷಿಣಕ್ಕೆ ಹೋದರು. ಕೆಲವರಿಗೆ ತಮಿಳುನಾಡಿನ ಈ 'ಕರ್ನಾಟಕ'ರಾದ ಅಧಿಕಾರಿಗಳ ಕೃಪಾಛತ್ರ ದೊರೆಯಿತು. ತಂಜಾವೂರಿನ ದೊರೆಗಳೂ ಅವರಿಗೆ ಆಶ್ರಯದಾತರಾದರು. ಹಂಪೆಯ ನಂತರ ತಂಜಾವೂರು ಸಂಗೀತಕ್ಕೆ ನೆಲೆಯಾಯಿತು. ಅಲ್ಲಿ ಅದು ಕರ್ನಾಟಕದಿಂದ ಬಂದ ಸಂಗೀತ ಎನ್ನಿಸಿಕೊಂಡಿತು.

## ಜಗದ್ಗುರು ಬಾದಶಾಹ

ವಿಜಯನಗರದ ಪತನಕ್ಕೆ ಕಾರಣರಾದವರಲ್ಲಿ ವಿಜಾಪುರದ ಆಲಿ ಅದಿಲಶಾಹನೂ ಒಬ್ಬ. ಅವನ ಮಗ ಎರಡನೆಯ ಇಬ್ರಾಹಿಮ ಅದಿಲ ಶಾಹ. ಇವನು ಸಮರ್ಥ ಆಡಳಿತಗಾರ, ತನ್ನ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲೂ ಶಕ್ತನಾಗಿದ್ದ. ಅಲ್ಲದೆ, ಕೊಂಕಣ ಮತ್ತು ಮೈಸೂರು ಸಂಸ್ಥಾನಗಳನ್ನು ಗೆದ್ದು ಆಳಿದ. ಜೊತೆಗೇ ಈ ಬಾದಶಾಹನಿಗೆ ಸಂಗೀತ,

ಸಾಹಿತ್ಯ, ಶಿಲ್ಪ, ಚಿತ್ರ ಮುಂತಾದ ಕಲೆಗಳಲ್ಲಿ ಆಸಕ್ತಿಯಿತ್ತು. ಸ್ವತಃ ಸಂಗೀತವನ್ನು ಕಲಿತಿದ್ದ. ದಿಲ್ಲಿಯ ಬಾದಶಾಹ ಜಹಾಂಗೀರನೊಂದಿಗೆ ನೇರವಾದ ಸಂಪರ್ಕವನ್ನಿರಿಸಿಕೊಂಡಿದ್ದ. ದಿಲ್ಲಿಯ ರಾಜಪ್ರತಿನಿಧಿಗಳೂ ರಾಯಭಾರಿಗಳೂ ಇತಿಹಾಸಕಾರ ಸಂಗೀತಗಾರರೂ ವಿಜಾಪುರದ ಆಸ್ಥಾನಕ್ಕೆ ಬಂದು ಹೋಗುತ್ತಿದ್ದರು. ಆ ಕಾಲದಲ್ಲಿ ಸಂಗೀತ, ನೃತ್ಯ ಮುಂತಾದ ಕಲೆಗಳೆಂದರೆ ಶ್ರೀಮಂತರು ಉಚ್ಚಕುಲದವರು ಎಂದು ತಿಳಿದುಕೊಂಡಿದ್ದವರು ಮೂಗು ಮುರಿಯುತ್ತಿದ್ದ ಕಾಲ. ಅಂಥ ಸ್ಥಿತಿಯಲ್ಲೂ ಇಬ್ರಾಹಿಮ ಆದಿಲಶಾಹ ತನ್ನ ಚಿಕ್ಕಪ್ಪನ ಮಗಳನ್ನೇ ತನ್ನ ಸಂಗೀತದ ಗುರುಗಳಿಗೆ ಕೊಟ್ಟು ಮದುವೆ ಮಾಡಿಸಿದ್ದ.

ಇವನ ಕಾಲದ ಚಿನ್ನದ ನಾಣ್ಯಗಳ ಮೇಲೆ "ಜಗದ್ಗುರು ಬಾದಶಾಹ ಇಬ್ರಾಹಿಮ ಆದಿಲಶಾಹ" ಎಂದು ಮುದ್ರಿಸಲಾಗಿದೆ.

ಇಬ್ರಾಹಿಮ ಆದಿಲಶಾಹನಿಗೆ ಸಂಗೀತದಷ್ಟೇ ಸಾಹಿತ್ಯದಲ್ಲೂ ಅಭಿರುಚಿ, ರಚನಾಶಕ್ತಿಗಳಿದ್ದುವು. ಇವನು ಪರ್ಶಿಯನ್ ಭಾಷೆಯಲ್ಲಿ ಕವಿತೆಗಳನ್ನು ರಚಿಸುತ್ತಿದ್ದ. ಇವನ ರಾಜ್ಯದಲ್ಲಿ ಬಳಕೆಯಲ್ಲಿದ್ದ ರಾಜಭಾಷೆಯೂ ಪರ್ಶಿಯನ. ಆದರೆ ಬಾದಶಾಹನ ಮಾತೃಭಾಷೆ ದಕ್ಖಿನೀ.

## ಉರ್ದೂ ಭಾಷೆಯ ಉಗಮಸ್ಥಾನ

ದಕ್ಖಿನೀ ಉರ್ದೂ ಎಂಬುದು ಈಗ "ಜಟಕಾಸಾಬಿ ಉರ್ದೂ", ಎಂಬ ತಿರಸ್ಕಾರಕ್ಕೊಳಗಾಗಿದೆ. ಅದು ತಪ್ಪು. ಹಾಗೆ ನೋಡಿದರೆ ಅದೇ ಸಾಹಿತ್ಯದ ಉರ್ದೂವಿನ ತಾಯಿ. ಆ ಮುನ್ನ ಉತ್ತರ ಹಿಂದೂಸ್ತಾನದಲ್ಲಿ ಉರ್ದೂ ಎಂಬುದು ಲಷ್ಕರೀ—ಎಂದರೆ ಯುದ್ಧರಂಗದ ಡೇರೆಗಳಲ್ಲಿ ಸೈನಿಕರು ಮಾತನಾಡಿಕೊಳ್ಳುವ ಒರಟು ಭಾಷೆಯಾಗಿದ್ದಿತು. ಅದು ದಕ್ಷಿಣಕ್ಕೆ ಬಂದು ದಕ್ಖಿನೀ (ದಕ್ಷಿಣ ದೇಶದ, ಎನಿಸಿಕೊಂಡಿತು. ಅದರಲ್ಲಿಯೇ ಮುಂದೆ ಸಾಹಿತ್ಯರಚನೆ ಆರಂಭವಾಯಿತು. ಉರ್ದೂವಿನಲ್ಲಿ ರಚಿತವಾದ ಮೊದಲ ಕಾವ್ಯ ರಚಿಸಿದವನು ಔರಂಗಬಾದಿನ ವಲಿ ಎಂಬ ಕವಿ. ಮೊತ್ತಮೊದಲ ಉರ್ದೂ ಗದ್ಯಗ್ರಂಥಕಾರ ಕಲಬುರ್ಗಿಯ

ಗೇಸೂ ದರಾಜ ಅಥವಾ ಬಂದೇನವಾಜನೆಂಬ ಸೂಫೀ ಸಂತ. ಹಾಗಾಗಿ ಉರ್ದೂ ಸಾಹಿತ್ಯದ ಪ್ರವರ್ತನೆ ಕರ್ನಾಟಕವೆಂದೇ ಹೇಳಬಹುದು. ಪ್ರೌಢದೇವರಾಯನ ಕಾಲಕ್ಕೆ ವಿಜಯನಗರದಲ್ಲಿ ನಡೆದ ಕವಿಸಮ್ಮೇಲನದಲ್ಲಿ ಬಂದೇನವಾಜ ಭಾಗವಹಿಸಿದ್ದ.

ಸಂಗೀತ ಸಾಹಿತ್ಯಗಳೆರಡನ್ನೂ ಬಲ್ಲವನಾಗಿದ್ದುದರಿಂದ ಇಬ್ರಾಹಿಮ ಅದಿಲಶಾಹ ದಕ್ಖಿನಿ ~~ಉರ್ದೂ~~ ಭಾಷೆಯಲ್ಲಿ ಧ್ರುಪದ ಹಾಡುಗಳನ್ನು ರಚಿಸಿದ. ಅವುಗಳನ್ನೊಳಗೊಂಡ ಅವನ ಗ್ರಂಥದ ಹೆಸರು "ಕಿತಾಬೆ ನವರಸ" ಎಂದು. ಮಿಕ್ಕ ಶಾಸ್ತ್ರಗ್ರಂಥಗಳಂತೆ ಈ ಗ್ರಂಥವೂ ಗಣಪತಿ ಮತ್ತು ಸರಸ್ವತಿ ಸ್ತುತಿಗಳಿಂದಲೇ ಆರಂಭವಾಗುತ್ತದೆ. ಇದನ್ನು ನೋಡಿದ ಮುಸಲ್ಮಾನರಿಗೆ ತಮ್ಮ ಬಾದಶಾಹ ತನ್ನ ಮತವನ್ನೇ ಬದಲಾಯಿಸುವನೆಂದು ಭಯವಾಯಿತು. ಮಕ್ಕಾದವರೆಗೆ ದೂರು ಹೋಯಿತು. ಅಲ್ಲಿಂದಲೇ ಹಿರಿಯ ಮೌಲ್ವಿಯೊಬ್ಬರು ವಿಜಾಪುರಕ್ಕೆ ಬಂದರು. ಬಾದಶಾಹನನ್ನು ಆ ಬಗ್ಗೆ ಪ್ರಶ್ನಿಸಿದರು. ಅವರ ಮಾತನ್ನು ಕೇಳಿ ಅದಿಲಶಾಹ ನಕ್ಕುಬಿಟ್ಟ. "ಸಂಗೀತಗಾರನಾದ ನಾನು ನನ್ನ ಕಂಠ ಮಧುರವಾಗಲಿ ಎಂದು ಸರಸ್ವತಿ ಗಣಪತಿಯರನ್ನು ಆರಾಧಿಸುತ್ತಿದ್ದೇನೆ" ಎಂದು ಹೇಳಿದ. ಮೌಲ್ವಿಗಳು ಸುಮ್ಮನೆ ಹಿಂತಿರುಗಬೇಕಾಯಿತು.

ಇಬ್ರಾಹಿಮ ಅದಿಲಶಾಹ ತನ್ನನ್ನು 'ಸರಸ್ವತೀ ಪುತ್ರ'ನೆಂದೇ ಕರೆದುಕೊಂಡಿದ್ದಾನೆ.

ವಿಜಾಪುರದಲ್ಲಿರುವ 'ಇಬ್ರಾಹಿಮ ರೋಜಾ' ಅತಿ ಸುಂದರವಾದ ಕಟ್ಟಡ; ತಾಜಮಹಲಿಗಿಂತ ಕಲಾತ್ಮಕವಾದದ್ದು. ಏಕಮೇವಾದ್ವಿತೀಯ. ಹಾಗೆ ನೋಡಿದರೆ ವಿಜಾಪುರದಲ್ಲಿನ ಇಬ್ರಾಹಿಮ ರೋಜಾವೇ ತಾಜ ಮಹಲಿಗೆ ಸ್ಫೂರ್ತಿ ಮತ್ತು ಮಾದರಿ ಎಂದು ಹೇಳುತ್ತಾರೆ.

ಹಿಂದೀ ಚಿತ್ರಗಳ ಹಿನ್ನೆಲೆಯ ಗಾಯಕಿಯಾಗಿ ಪ್ರಸಿದ್ಧಳಾಗಿದ್ದ ಅಮೀರಬಾಯಿ ಕರ್ನಾಟಕಿ ಮುಂಬಯಿಯಲ್ಲಿ ಸಾಯುವಾಗ, ತನ್ನ ಗೋರಿಯನ್ನು 'ಇಬ್ರಾಹಿಮರೋಜಾ'ದ ಬಳಿಯಲ್ಲಿ ನಿರ್ಮಿಸಬೇಕೆಂಬ ಕೊನೆಯಾಸೆಯನ್ನು ವ್ಯಕ್ತಪಡಿಸಿದ್ದಳು.

## ರಾಗಮಾಲಾ ಚಿತ್ರಗಳು

ಅನೇಕ ಸಂಗೀತಶಾಸ್ತ್ರಜ್ಞರ ಗ್ರಂಥಗಳಲ್ಲಿ ರಾಗ ರಾಗಿಣಿಯರ ಶಾಬ್ದಿಕ ಚಿತ್ರೀಕರಣವಿದೆ. ಕೆಳದಿಯ ಬಸವರಾಜನ ಸಂಸ್ಕೃತ ಗ್ರಂಥದಲ್ಲಿ ರಾಗರಾಗಿಣಿಯರ ರೂಪಕಲ್ಪನೆಯಿದೆ. ಶಬ್ದಗಳಲ್ಲಿದ್ದ ಕಲ್ಪನೆಯನ್ನು ವರ್ಣ ಚಿತ್ರದಲ್ಲಿ ಸೆರೆ ಹಿಡಿಯುವ ಇಚ್ಛೆ ಉಂಟಾದುದು ವಿಜಾಪುರದ ಇಬ್ರಾಹಿಮ ಆದಿಲಶಾಹನಿಗೆ. ಇಚ್ಛೆ ಉಂಟಾದುದು ಮಾತ್ರವಲ್ಲ, ಅವನದನ್ನು ಕಾರ್ಯ ರೂಪಕ್ಕೆ ತಂದ. ಅವನ ಆಸ್ಥಾನದಲ್ಲಿ ಪರ್ಶಿಯನ ಕಲಾವಿದರು ಯೂರೋಪಿಯನ ಕಲಾವಿದರು, ಜೊತೆಗೆ ವಿಜಯನಗರದ ಪತನಾನಂತರ ವಿಜಾಪುರಕ್ಕೆ ಓಡಿಬಂದಿದ್ದ ಕನ್ನಡ ಚಿತ್ರ ಕಲಾವಿದರು ಇದ್ದರು. ಜಗದ್ಗುರು ಬಾದಶಾಹ ಈ ಮೂರು ರೀತಿಯ ಚಿತ್ರಕಾರರಿಗೆ ಸಂಸ್ಕೃತ ಗ್ರಂಥಗಳಲ್ಲಿದ್ದ ರಾಗರಾಗಿಣಿಯರ ಸ್ವರೂಪಗಳನ್ನು ಓದಿ ವಿವರಿಸಿದ. ಅದೇ ಲಕ್ಷಣಗಳ ಪ್ರಕಾರ ಚಿತ್ರಗಳನ್ನು ರಚಿಸುವಂತೆ ಪ್ರೋತ್ಸಾಹಿಸಿದ. ಆಗ ಅವರು ಬರೆದ ಚಿತ್ರಗಳೇ ಮುಂದೆ ‘ ರಾಗಮಾಲಾ ’ ಚಿತ್ರಗಳೆಂದು ಅವುಗಳಲ್ಲಿ ಪ್ರಸಿದ್ಧ ವಾದುವು. ಅವುಗಳಲ್ಲಿ ಕೆಲವು ಜಹಾಂಗೀರನ ಆಸ್ಥಾನಕ್ಕೆ— ದಿಲ್ಲೀ ದರಬಾರಿಗೆ ಹೋದವು. ವಿಜಾಪುರದ ಈ ಚಿತ್ರಗಳಿಂದ ಸ್ಫೂರ್ತಿ ಪಡೆದು ಬೇರೆ ಬೇರೆ ಶೈಲಿಗಳಲ್ಲೂ ಈ ಚಿತ್ರಗಳು ಮೂಡಿ ಬಂದವು. ಈಗ ಮೊಗಲ, ಪಹಾರಿ, ಕಾಂಗಡಾ ಮತ್ತು ರಾಜಸ್ಥಾನೀ ಶೈಲಿಗಳಲ್ಲಿ ಈ ಬಗೆಯ ಚಿತ್ರಗಳು ಮೂಡಿಬಂದಿವೆ.

ಒಟ್ಟಿನಲ್ಲಿ ಶಬ್ದಗಳಲ್ಲಿ, ಅಕ್ಷರಗಳಲ್ಲಿ ಮೂಡಿದ್ದ ರಾಗಗಳಿಗೆ ಒಂದು ರೂಪ ಕೊಡಲು ಕಾರಣನಾದವನು ವಿಜಾಪುರದ ಆದಿಲಶಾಹ. ಈ ನಿಟ್ಟಿನಲ್ಲಿ ಇವನು ಭಾರತೀಯ ಸಂಗೀತಕ್ಕೆ ಸಲ್ಲಿಸಿರುವ ಸೇವೆ ಅಮೂಲ್ಯವಾದುದು. ವಿಜಾಪುರದಲ್ಲಿ ಬರೆಯಿಸಿದ ಮೊತ್ತಮೊದಲ ರಾಗಮಾಲಾ ಚಿತ್ರಗಳು ಸದ್ಯಃ ಬಿಕಾನೇರ ಅರಮನೆಯಲ್ಲಿವೆ.

ಆದರೆ ಆಗಲೂ ಹಿಂದೂಸ್ತಾನೀ ಕರ್ನಾಟಕೀ ಎಂಬ ವಿಶೇಷ ಭೇದ ವಿರಲಿಲ್ಲ. ಹದಿನೇಳನೆಯ ಶತಮಾನದಲ್ಲಿ ತಂಜಾವೂರಿನ ವಿಜಯರಾಘವ ಭೂಪಾಲನ ಆಶ್ರಯದಲ್ಲಿದ್ದು, ಕರ್ನಾಟಕ ಸಂಗೀತಗಾರರ ಕೈಪಿಡಿಯಾದ “ ಚತುರ್ದಂಡೀ ಪ್ರಕಾಶ ” ಗ್ರಂಥವನ್ನು ಬರೆದ ವೆಂಕಟಮುಖಿ ಪಂಡಿತನಿಗೆ

ಹಿಂದೂಸ್ತಾನೀ ಹಾಗೂ ಕರ್ನಾಟಕೀ ಶಿಷ್ಯರಿದ್ದರೆಂದೂ ಅವನು ಎಷ್ಟೋ ಹಿಂದೂಸ್ತಾನೀ ರಾಗ ರಾಗಿಣಿಗಳಲ್ಲಿ ಲಕ್ಷಣಗೀತೆಗಳನ್ನು ರಚಿಸಿದ್ದಾನೆಂದೂ ನ್ಯಾಯಮೂರ್ತಿ ಟಿ. ಎಲ್. ವೆಂಕಟರಾಮ ಅಯ್ಯರ್ ಅವರು ಬರೆದಿದ್ದಾರೆ. ಅಲ್ಲದೆ ಹದಿನೆಂಟನೆಯ ಶತಮಾನದಲ್ಲಿ 'ಸಂಗೀತಸಾರಾಮೃತ' ಗ್ರಂಥವನ್ನು ಬರೆದ ತುಳಜಾಜೀ ಮಹಾರಾಜ ಸುಮಾರು ಇಪ್ಪತ್ತು ರಾಗಗಳ ಲಕ್ಷಣಗಳನ್ನು ಹೇಳಿ ಅವುಗಳಿಗೆ ಕನ್ನಡದ ಹರಿದಾಸರ ಸುಳಾದಿಗಳನ್ನು ಲಕ್ಷ್ಯವಾಗಿ ಕೊಟ್ಟಿದ್ದಾನೆ. ಅವನು ತನ್ನ ಹಿಂದಿನ ಕರ್ನಾಟಕದ ಗ್ರಂಥಕಾರರು ಹೇಳದಿರುವ ಕೆಲ ರಾಗಗಳ ಹೆಸರುಗಳನ್ನೂ ಹೇಳಿದ್ದಾನೆ. ಅವುಗಳಲ್ಲಿ ಲಲಿತ, ಪಂಚಮ, ಕಾಪಿ, ಹುಸೇನಿ ಮತ್ತು ಗೌಡ ಮಲ್ಹಾರ ರಾಗಗಳು ಹಿಂದೂಸ್ತಾನೀ ಗಾಯನ ಪದ್ಧತಿಯಲ್ಲಿ ಪ್ರಚುರವಾಗಿವೆ.

## ಕರ್ನಾಟಕ ಮತ್ತು ದೇಸಿ ಸಂಗೀತಗಳು

ಹದಿನೆಂಟನೆಯ ಶತಮಾನದಲ್ಲಿ ಶಾಮಶಾಸ್ತ್ರಿ, ಮುತ್ತುಸ್ವಾಮಿ ದೀಕ್ಷಿತ ಮತ್ತು ತ್ಯಾಗರಾಜ ಎಂಬ ಮೂವರು ವಾಗ್ಗೇಯಕಾರರೆನಿಸಿ ಪ್ರಸಿದ್ಧರಾದ ಮೇಲೆ ಅವರ ತೆಲುಗು ಮತ್ತು ಸಂಸ್ಕೃತ ಕೃತಿಗಳಿಂದಾಗಿ, ಮೊದಲೇ ರಾಜಾಶ್ರಯವನ್ನು ಕಳೆದುಕೊಂಡಿದ್ದ ಕರ್ನಾಟಕದ ಸಂಗೀತ ಕನ್ನಡ ಭಾಷೆಗೂ ಎರವಾಯಿತು. ವಿಚಿತ್ರವೆಂದರೆ ಹೀಗೆ ತನ್ನ ದೇಶವನ್ನೂ ತೊರೆದು, ಭಾಷೆಯನ್ನೂ ಕಳೆದುಕೊಂಡ ಮೇಲೆ ಅದಕ್ಕೆ ಕರ್ನಾಟಕ ಸಂಗೀತವೆಂಬ ಹೆಸರು ಸ್ಥಿರವಾಯಿತು. ಇನ್ನೂ ಒಂದು ವಿಶೇಷವೆಂದರೆ ಆ ಕಾಲದಲ್ಲಿ ಶಾಸ್ತ್ರಬದ್ಧವಾಗಿದ್ದ ಸಂಗೀತಕ್ಕೆ ಕರ್ನಾಟಕ ಎಂದೂ ಅಷ್ಟು ಶಾಸ್ತ್ರಬದ್ಧವಲ್ಲದ ಲಲಿತ ಸಂಗೀತಕ್ಕೆ ದೇಸಿಯೆಂದೂ ಹೆಸರಿತ್ತು. ರಾಮಭದ್ರಾಂಬೆಯು "ರಘುನಾಥಾಭ್ಯುದಯ" ಕಾವ್ಯದಲ್ಲಿ ಈ ಪ್ರಸಂಗ ಬಂದಿದೆ. ತಂಜಾವೂರಿನ ರಘುನಾಥನಾಯಕ ತನ್ನ ಆಸ್ಥಾನದ ಕಲಾವಿದೆಯರನ್ನು ಪರೀಕ್ಷಿಸಲು ಒಂದು ವಿದ್ವತ್ಸಭೆ ಏರ್ಪಡಿಸಿದ. ಅದರಲ್ಲಿ ಭಾಗ ವಹಿಸಿದ ಸ್ಥಳೀಯ ಮತ್ತು ಹೊರನಾಡ ಕಲಾವಿದೆಯರು 'ಕರ್ನಾಟಕ' ಮತ್ತು 'ದೇಸಿ' ಎಂಬ ಎರಡು ರೀತಿಯ ಸಂಗೀತವನ್ನು ಬಲ್ಲವರಾಗಿದ್ದರು.

ಅನೇಕ ವಾದ್ಯಗಳನ್ನು ನುಡಿಸಬಲ್ಲವರಾಗಿದ್ದರು. ರಘುನಾಥ ನಾಯಕ ಇವರ ಕಲಾಪ್ರೌಢಿಮೆಗೆ ಮೆಚ್ಚಿ ಬಹುಮಾನವನ್ನಿತ್ತು ಗೌರವಿಸಿದ. ಕಾಲ ಕ್ರಮದಲ್ಲಿ ವಿಪರ್ಯಾಸ ವೈಪರೀತ್ಯಗಳು ತಲೆದೋರಿದುವು. ತಮಿಳರು ತೆಲುಗಿನಲ್ಲಿ ಹಾಡಿದುವೇ "ಕರ್ನಾಟಕ ಸಂಗೀತ"ವೆನಿಸಿಕೊಂಡು ಕರ್ನಾಟಕ ದಲ್ಲಿ ಕನ್ನಡಿಗರು ಕನ್ನಡ ಕೃತಿಗಳನ್ನು ಹಾಡಿದರೆ ಅದು "ದೇಸಿ" ಇಲ್ಲವೇ ದೇವರನಾಮ ಎನಿಸಿಕೊಂಡಿತು. ದಾಕ್ಷಿಣಾತ್ಯ ಸಂಗೀತ ಕರ್ನಾಟಕೀ ಎನಿಸಿ ಕೊಂಡ ಮೇಲೆ ಹತ್ತೊಂಭತ್ತನೆಯ ಶತಮಾನದಲ್ಲಿ ದೇಶಾಭಿಮಾನಿಗಳೂ ಸಂಗೀತಜ್ಞರೂ ಆದ ವಿಷ್ಣು ದಿಗಂಬರ ಪಲುಸಕರರಂತಹ ಗಾಯಕರು ಮತ್ತು ವಿಷ್ಣುನಾರಾಯಣ ಭಾತಖಾಂಡೆಯವರಂತಹ ಸಂಗೀತಶಾಸ್ತ್ರಜ್ಞರುಗಳಿಂ ದಾಗಿ ಉತ್ತರದ ಸಂಗೀತಕ್ಕೆ ಹಿಂದೂಸ್ತಾನೀ ಎಂಬ ಉಪಾಧಿ ದೊರೆಯಿತು. ಡಾಲಡಾ, ಧಾರಾಪುರಿಗಳು ತುಪ್ಪವೆನಿಸಿಕೊಂಡ ಮೇಲೆ ಮೂಲ ತುಪ್ಪಕ್ಕೆ "ಬೆಣ್ಣೆ ಕಾಸಿದ ತುಪ್ಪ" ಎಂದು ಹೆಸರಿಟ್ಟಂತೆ ಭರತನ ಬಳುವಳಿಯಾದ ಭಾರತೀಯ ಸಂಗೀತ ಹಿಂದೂಸ್ತಾನೀ ಸಂಗೀತವೆನಿಸಿಕೊಂಡಿತು.

"ಕನ್ನಡದ ಮಾತು"

ಕರ್ನಾಟಕ ಸಂಗೀತಶಾಸ್ತ್ರಕಾರರ ಮಾತೃಭೂಮಿಯಾಗಿತ್ತೆನ್ನುವುದಕ್ಕೆ ಇನ್ನೊಂದು ಬಲವಾದ ಆಧಾರ ಸಿಗುತ್ತದೆ. ಸಂಗೀತದ ಬಗ್ಗೆ ಬಂದಿರುವ ಫಾರಸೀ ಸಂಸ್ಕೃತ ಗ್ರಂಥದಲ್ಲಿ ಕನ್ನಡದ ಮಾತು ಎಂಬ ಶಬ್ದ ಬಳಕೆಯಲ್ಲಿ ಬಂದಿದೆ.

ಹದಿನೇಳನೆಯ ಶತಮಾನದಲ್ಲಿ ಫಕೀರುಲ್ಲಾ ಎಂಬ ಗ್ರಂಥಕರ್ತನಿದ್ದ. ಇವನು ಔರಂಗಜೇಬನ ಕೈಕೆಳಗೆ ಕಾಶ್ಮೀರದ ಸುಬೇದಾರನಾಗಿದ್ದ. ಮಾನ ಸಿಂಗನ ಮಾನಕುತೂಹಲವನ್ನು ಮೆಚ್ಚಿಕೊಂಡ ಫಕೀರುಲ್ಲಾ ಅದನ್ನು ಪರ್ಶಿಯನ ಭಾಷೆಗೆ ಅನುವಾದಿಸಿದ. ಅದರೊಂದಿಗೆ ಭರತನ "ನಾಟ್ಯ ಶಾಸ್ತ್ರ"ದಲ್ಲಿನ ಸಂಗೀತಕ್ಕೆ ಸಂಬಂಧಪಟ್ಟ ಅಧ್ಯಾಯಗಳನ್ನೂ, ಶಾರ್ಙ್ಗ ದೇವನ 'ಸಂಗೀತರತ್ನಾಕರ' ವನ್ನೂ ಅಭ್ಯಸಿಸಿ, ಅವುಗಳ ಸಿದ್ಧಾಂತಗಳ ನ್ನೊಳಗೊಂಡ 'ರಾಗದರ್ಪಣ' ಎಂಬ ಗ್ರಂಥವನ್ನು ಫಾರಸೀ ಭಾಷೆಯಲ್ಲಿ ರಚಿಸಿದ.

ತನ್ನ ಗ್ರಂಥವನ್ನೋದಿದರೆ ' ಮಾನಕುತೂಹಲ 'ವನ್ನಾಗಲಿ, " ನಾಟ್ಯಶಾಸ್ತ್ರ '' ವನ್ನಾಗಲೀ ಓದುವ ಆವಶ್ಯಕತೆ ಉಳಿಯಬಾರದೆಂದು ಫಕೀರುಲ್ಲಾ ಹೇಳಿಕೊಂಡಿದ್ದಾನೆ. ಆತನ ರಾಗದರ್ಪಣವನ್ನು ' ಹರಿಹರ ನಿವಾಸ ದ್ವಿವೇದಿ ' ಎಂಬುವ ಗ್ವಾಲಿಯರಿನ ವಿದ್ವಾಂಸರು ಹಿಂದೀ ಭಾಷೆಗೆ ಅನುವಾದಿಸಿದ್ದಾರೆ. ಅದರಲ್ಲಿ ಕನ್ನಡದ ಮಾತು ಎನ್ನುವ ಶಬ್ದ ಬರುತ್ತದೆ. ಫಕೀರುಲ್ಲಾ ತನ್ನ ಫಾರಸೀ ಗ್ರಂಥಗಳಲ್ಲಿ ಬಳಸಿರುವ '' ಮಾತ ''ನ್ನು ದ್ವಿವೇದಿಯವರು ಇದ್ದುದಿದ್ದಂತೆ ಹಿಂದೀ ಭಾಷೆಗಿಳಿಸಿದ್ದಾರೆ. ಆದರೆ ತಾವು ಪ್ರಯೋಗಿಸಿರುವುದು ಕನ್ನಡ ಶಬ್ದವೆಂಬುದು ಫಕೀರುಲ್ಲಾನಿಗಾಗಲೀ, ಹರಿಹರನಿವಾಸ ದ್ವಿವೇದಿಯವರಿಗಾಗಲೀ ತಿಳಿದಿರಲಾರದು. ಅದಕ್ಕಾಗಿ ಸಂಸ್ಕೃತ ಶಬ್ದಕೋಶವನ್ನೆಲ್ಲಾ ಶೋಧಿಸಿ ಅವರು ಹತಾಶರಾಗಿರಬೇಕು. ಕೊನೆಗೆ, ಇಲ್ಲದ ಉಸಾಬರಿ ನಮಗೇಕೆ ? ದೊಡ್ಡವರು ಬಳಸಿದ್ದಾರೆಂದ ಮೇಲೆ ತಾವೂ ಅದೇ ಪದ ಬಳಸೋಣವೆಂದು ' ಮಾತು ' ಶಬ್ದವನ್ನು ಪ್ರಯೋಗಿಸಿದ್ದಾರೆ.

ಕನ್ನಡದ ' ಮಾತು ' ವಾಗ್ಗೇಯಕಾರರ ವ್ಯಾಖ್ಯೆಯ ಸಂದರ್ಭದಲ್ಲಿ ಬರುತ್ತದೆ. ವಾಕ್ ಮತ್ತು ಗೇಯ ಎಂದರೆ ಆಡುವುದು ಮತ್ತು ಹಾಡುವುದು. ಇವೆರಡನ್ನೂ ಹೊಂದಿಸಿ ರಚಿಸಬಲ್ಲಾತ ವಾಗ್ಗೇಯಕಾರ. ಫಕೀರುಲ್ಲಾ ಇವನನ್ನು ' ವಾಣೀಕಾರ ' ಎಂದು ಕರೆದಿದ್ದಾನೆ. ಅದರ ಅರ್ಥವನ್ನು ವಿವರಿಸುತ್ತಾ ಹೀಗೆಂದಿದ್ದಾನೆ :

" ಶಬ್ದೋಂಕೋ ಗಾನವಿದ್ಯಾ ಮೇಂ ವಾಣೀ ಯಾ ಮಾತ ರಹತೇ ಹೈಂ, ಔರ ಗೀತ ಕೋ ಧಾತು ಕಹತೇ ಹೈಂ "

ಮುಂದೆ ಮಧ್ಯಮ ಶ್ರೇಣಿಯ ವಾಗ್ಗೇಯಕಾರರ ಬಗೆಗೆ ಬರೆಯುತ್ತಾ ಫಕೀರುಲ್ಲಾ ಹೇಳುತ್ತಾನೆ :

" ಜಿಸ ಕಾ ಶಬ್ದ ಪರ ಅಧಿಕಾರ ಹೋ ಔರ ಕಲಾ ಮೇ ಭೀ ಪ್ರವೀಣ ಹೋ. ನಿಜಾಂಶ ಯಃ ಹೈ ಕಿ ಮಾತ ಭೀ ಜಾನೇ ಔರ ಧಾತು ಭೀ ಸಮಝೇ ಪರಂತು ಪ್ರಬಂಧ ಕಾ ಜ್ಞಾತಾ ನ ಹೋ ''(ಎಂದರೆ ಮಧ್ಯಮ ವರ್ಗೀಯ ವಾಗ್ಗೇಯಕಾರ ಧಾತುಬಲ್ಲವನಲ್ಲದೆ ಮಾತು ಬಲ್ಲವನಾಗಿಯೂ ಇರುತ್ತಾನೆ. ಆದರೆ ಅವನು ಪ್ರಬಂಧ ರಚನೆಯನ್ನು ಅರಿಯದವನು.)

ಫಕೀರುಲ್ಲಾನಿಗೆ ಈ ಮಾತು ಶಬ್ದ ಎಲ್ಲಿಂದ ದೊರೆಯಿತು ?

" ವಾಙ್ಮಾತುರುಚ್ಯತೇ ಗೇಯಂ ಧಾತುರಿತ್ಯಭಿಧೀಯತೇ ವಾಚಂ ಗೇಯಂ ಕುರುತೇ ಯಃ ಸಃ ವಾಗ್ಗೇಯಕಾರಕಃ "

—ಎಂದು ಶಾರ್ಙ್ಗದೇವ ತನ್ನ ' ಸಂಗೀತರತ್ನಾಕರ 'ದಲ್ಲಿ ಹೇಳಿದ್ದಾನೆ. ಫಕೀರುಲ್ಲಾನಿಗೆ ಅದೇ ಆಧಾರಗ್ರಂಥಗಳಲ್ಲೊಂದಾದ್ದರಿಂದ ಅವನು ' ಮಾತು ' ಶಬ್ದವನ್ನು ಶಾರ್ಙ್ಗದೇವನಿಂದಲೇ ತೆಗೆದುಕೊಂಡಿದ್ದಾನೆಂದು ಹೇಳಬಹುದು.

ಹನ್ನೆರಡನೆಯ ಶತಮಾನದಲ್ಲಿ ಚಾಲುಕ್ಯ ಸೋಮೇಶ್ವರನು ತನ್ನ ' ಮಾನಸೋಲ್ಲಾಸ 'ದಲ್ಲಿ ವಾಗ್ಗೇಯಕಾರರ ಬಗೆಗೆ ಹೇಳುವಾಗ ಸಂಸ್ಕೃತ ಶ್ಲೋಕಗಳಲ್ಲಿ ಮಾತು ಶಬ್ದವನ್ನು ಬಳಸಿದ್ದಾನೆ.

" ಅಧಮೋ ಮಾತುಕಾರಃ ಸ್ಯಾನ್ಮಧ್ಯಮೋ ಧಾತುಕಾರಕಃ
ಧಾತುಮಾತು ಕ್ರಿಯಾಕಾರೀ ಪ್ರವರಃ ಪರಿಕೀರ್ತಿತಃ "

(ಅಂದರೆ ಕೇವಲ ಮಾತು ಬಲ್ಲವನು ಅಧಮ ! ಧಾತು ಹೆಚ್ಚಾದರೆ ಮಧ್ಯಮ ; ಎರಡನ್ನೂ ಸೂಕ್ತರೀತಿಯಲ್ಲಿ ಬಳಸಿದವನು ಉತ್ತಮ ವಾಗ್ಗೇಯಕಾರ.)

ಹೀಗೆ ಒಂದು ಕಾಲದಲ್ಲಿ ಸಂಸ್ಕೃತ ಫಾರಸೀ ಭಾಷೆಗಳ ಶಾಸ್ತ್ರಗ್ರಂಥಗಳಲ್ಲೂ ಕನ್ನಡದ ಶಬ್ದ ಬಳಕೆಯಲ್ಲಿತ್ತು. ಆದರೆ ಮುಂದೊಂದು ದಿನ ಸಂಗೀತದ ಕೃತಿಗಳಿಗೆ ಕನ್ನಡಭಾಷೆ ಪ್ರಯೋಜನವೇ ಇಲ್ಲವೆಂಬ ಭಾವನೆ ಬೆಳೆದದ್ದು ದುರದೃಷ್ಟಕರ. ಅದನ್ನು ಮೈಸೂರಿನಲ್ಲಿ ಬೆಳೆಸಿದವರು ಕನ್ನಡ ಗೋಮುಖರಾದ ಅನ್ಯಭಾಷೀಯರು.

## ಮೈಸೂರೊಡೆಯರ ಆಸ್ಥಾನದಲ್ಲಿ

ವಿಜಯನಗರ ಸಾಮ್ರಾಜ್ಯವಳಿದ ಮೇಲೆ ನೂರಾರು ವರ್ಷಗಳ ಕಾಲ ನಿರಾಶ್ರಿತವಾಗಿದ್ದ ಸಂಗೀತಕ್ಕೆ ಮೈಸೂರೊಡೆಯರ ಕೃಪಾಛತ್ರದಡಿ ಆಶ್ರಯ ದೊರಕಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮತ್ತು ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲಕ್ಕೆ ಮೈಸೂರಿನಲ್ಲಿ ಲಲಿತ

ಕಲೆಗಳಿಗೆ ಅವರಲ್ಲೂ ಭಾರತೀಯ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತು, ಗಾಯನ ವಾದನ ಕಲೆಗಳು ಉನ್ನತ ಶಿಖರವನ್ನು ಮುಟ್ಟಿದವು. ಅವರ ಆಸ್ಥಾನದಲ್ಲಿ ಬಿಡಾರದ ಕೃಷ್ಣಪ್ಪ, ವೀಣೆ ಶೇಷಣ್ಣ, ವ್ಯಾಘ್ರ ವರದಾಚಾರ್ಯ. ಸುಬ್ಬಣ್ಣ, ದೇವೇಂದ್ರಪ್ಪ, ವಾಸುದೇವಾಚಾರ್ಯ, ಚೌಡಯ್ಯ, ಮುತ್ತಯ್ಯಭಾಗವತರಂತಹ ಕರ್ನಾಟಕ ಸಂಗೀತದ ಘಟಾನು ಘಟಿಗಳಿದ್ದುದಲ್ಲದೆ, ಗೋಹರಬಾಯಿ, ಬರ್ಕತುಲ್ಲಾಖಾನ, ನತ್ಥನಖಾನ, ವಿಲಾಯತ ಹುಸ್ಸೇನ ಖಾನರಂತಹ ಹಿಂದೂಸ್ತಾನೀ ಸಂಗೀತದ ಶೀಮಾ ಪುರುಷರೂ ಇದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ ತಂದೆ ಚಾಮರಾಜ ಒಡೆಯರ ಆಶ್ರಯದಲ್ಲಿ, ಕಲ್ಕತ್ತೆಯ ಗೋಹರಜಾನ ಎಂಬ ಒಬ್ಬ ಪ್ರಸಿದ್ಧ ಠುಮರೀ ಗಾಯಕಿ ಇದ್ದಳು. ಅವಳ ಗುರು ,ಮೌಜುದ್ದೀನಖಾನರೂ ದೊಡ್ಡ ಠುಮರೀ ಗಾಯಕರು. ಗೋಹರಜಾನ ಮೈಸೂರು ರಾಜ್ಯದ ಆಸ್ಥಾನ ವಿದೂಷಿಯಾಗಿದ್ದಳು. ಇವಳಿಗೆ ಅರಮನೆಯಿಂದ ಪ್ರತಿ ತಿಂಗಳು ಸಂಬಳ ದೊರೆಯುತ್ತಿದ್ದುದಲ್ಲದೆ, ದಸರಾ, ಮಹಾರಾಜರ ವರ್ಧಂತಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಹಾಡಿದಾಗ ವಿಶೇಷ ಆದರ ಗೌರವಗಳು ದೊರೆಯು ತ್ತಿದ್ದವು. ದೊಡ್ಡ ದೊಡ್ಡ ಸಂಗೀತಗಾರರೂ ಇವಳ ಗಾಯನವನ್ನು ಕೇಳಲು ಹಾತೊರೆಯುತ್ತಿದ್ದರು. ಇವಳು ಹಾಡುತ್ತಿದ್ದ ಠುಮರಿಗಳಂತೆ ಗಜಲ ದಾದರಾಗಳೂ ಜನರ ನಾಲಿಗೆಯಮೇಲೆ ನಲಿದಾಡುತ್ತಿದ್ದವು. "ಆನ ಬಾನ ಜಯಾ ಮಿಲಾಯೆ" ಎನ್ನುವ ದಾದರಾ ಅಂತೂ ಎಷ್ಟೊಂದು ಪ್ರಸಿದ್ಧ. ವಾಯಿತೆಂದರೆ ಮುಂದೆ ಅದೇ ಧಾಟಿಯು ಕನ್ನಡ ರಂಗಗೀತೆ "ಕೊಳಲನೂದಿ ಕುಣಿವ ಪ್ರಿಯನೆ ಕುಲುಕುತ ಬಾ" ಜನಪ್ರಿಯ ವಾಯಿತು. ಮೊದಲು ಶ್ರೀಮನ್ಮಹಾರಾಜ ಕೃಪಾಪೋಷಿತ ಶ್ರೀ ಚಾಮ ರಾಜ ಕರ್ನಾಟಕ ನಾಟಕ ಸಭೆಯ ರಂಗಗೀತವಾಗಿತ್ತು. ಅನಂತರ ಗುಬ್ಬಿ ಕಂಪನಿಯ ನಾಟಕಗಳಿಗೂ ಹರಿದು ಬಂತು. (ಇತ್ತೀಚಿಗೆ ಕನ್ನಡಚಿತ್ರ 'ಸುಬ್ಬಾಶಾಸ್ತ್ರಿ'ಯಲ್ಲೂ ಇದೇ ಹಾಡು ಉಪಯೋಗಿಸಲ್ಪಟ್ಟಿತು.)

ಬಾಲ್ಯದಿಂದಲೂ ಗೋಹರಜಾನಳ ಠುಮರಿಗಳನ್ನೂ ಬರ್ಕತುಲ್ಲಾ ಖಾನರ ಸಿತಾರನ್ನೂ ಕೇಳಿದ್ದರಿಂದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರಿಗೆ

ಹಿಂದೂಸ್ತಾನೀ ಸಂಗೀತದಲ್ಲಿ ಅಭಿರುಚಿ ಹುಟ್ಟಿತ್ತು. ಒಮ್ಮೆ ಮುಂಬಯಿಗೆ ಹೋಗಿದ್ದಾಗ ಅಲ್ಲಿ ಉಸ್ತಾದ ವಿಲಾಯತ ಹುಸೇನಖಾನರ ತಂದೆ ಉಸ್ತಾದ ನತ್ಥನಖಾನರ ಸಂಗೀತ ಕೇಳುವ ಅವಕಾಶ ಅವರಿಗೆ ದೊರೆಯಿತು. ಮಹಾರಾಜರು ಅವರ ಸಂಗೀತದಿಂದ ತುಂಬಾ ಪ್ರಭಾವಿತರಾದರು. ಕಚೇರಿ ಮುಗಿಯುವವರೆಗೂ ಕುಳಿತಿದ್ದು ಖಾನಸಾಹೇಬರನ್ನು ಕಂಡು ಮಾತನಾಡಿ ಅವರನ್ನು ತಮ್ಮ ಆಸ್ಥಾನಕ್ಕೆ ಬರುವಂತೆ ಒತ್ತಾಯ ಪೂರ್ವಕವಾಗಿ ಆಹ್ವಾನಿಸಿದರು. ಅವರನ್ನು ತಮ್ಮ ಜೊತೆಯಲ್ಲಿಯೇ ಮೈಸೂರಿಗೆ ಕರೆದುಕೊಂಡು ಬಂದು ಆಸ್ಥಾನ ವಿದ್ವಾಂಸರನ್ನಾಗಿ ನಿಯಮಿಸಿದರು. ಆ ಕಾಲದಲ್ಲಿ ಅವರಿಗೆ ೧೭೫ ರೂ. ತಿಂಗಳ ಸಂಬಳ ಬರುತ್ತಿತ್ತು.

ನತ್ಥನಖಾನರು ಮೈಸೂರಿನ ಆಸ್ಥಾನಕ್ಕೆ ಬಂದದ್ದು ಹಿಂದೂಸ್ತಾನೀ ಸಂಗೀತ ಕರ್ನಾಟಕದಲ್ಲಿ ನೆಲೆಯೂರಲು ಕಾರಣವಾಯಿತು.

ನತ್ಥನಖಾನರು ಆಸ್ಥಾನದಲ್ಲಿದ್ದುದರಿಂದ ಎರಡು ರೀತಿಯ ಪರಿಣಾಮವಾಯಿತು. ಆಸ್ಥಾನದಲ್ಲಿದ್ದ ಕರ್ನಾಟಕ ಸಂಗೀತಗಾರರ ಮೇಲೆ ಹಿಂದೂಸ್ತಾನೀ ಸಂಗೀತದ ಪ್ರಭಾವ ಬಿದ್ದಿತು. ವೀಣೆ ಶೇಷಣ್ಣನವರಂತಹ ಪ್ರತಿಭಾಶಾಲಿಗಳು ತಿಲ್ಲಾನಾಗಳನ್ನು ರಚಿಸಿದರು. ಅಲ್ಲದೆ ಇಲ್ಲಿ ಅನೇಕ ತರುಣ ಕಲಾವಿದರಿಗೆ ಹಿಂದೂಸ್ತಾನೀ ಸಂಗೀತ ಕಲಿಯಲು ಸ್ವತಃ ಮಹಾರಾಜರೇ ಪ್ರೋತ್ಸಾಹಿಸುತ್ತಿದ್ದರು.

ಅನೇಕ ಜನ ಬೇರೆ ಹಿಂದೂಸ್ತಾನೀ ಗಾಯಕರು ಈ ಕಾಲದಲ್ಲಿ ಮೈಸೂರಿಗೆ ಬಂದು ತಮ್ಮ ವಿದ್ವತ್ತನ್ನು ಪ್ರದರ್ಶಿಸಿ ಹೋದರು. ವಿಶೇಷವಾಗಿ ಮಹಾರಾಜರ ವರ್ಧಂತಿ ಉತ್ಸವದಲ್ಲಿ ಮತ್ತು ದಸರಾ ಉತ್ಸವಗಳ ಸಂದರ್ಭದಲ್ಲಿ ಮಹಾರಾಜರೇ ದೇಶದ ಬೇರೆ ಬೇರೆ ಭಾಗಗಳಿಂದ ಹಿಂದೂಸ್ತಾನಿ ಸಂಗೀತಗಾರರನ್ನು ಆಹ್ವಾನಿಸಿ ರಾಜಸಭೆಯಲ್ಲಿ ಹಾಡಿಸಿ ಸನ್ಮಾನಿಸುತ್ತಿದ್ದರು.

ಹೀಗೆ ಬಂದವರಲ್ಲಿ ಸೂರಶ್ರೀ ಎಂದು ಪ್ರಖ್ಯಾತಳಾಗಿದ್ದ ಕೇಸರಬಾಯಿ ಕೇರಕರ ಒಬ್ಬಳು. ಈಕೆ ಮೊದಲು ಬರ್ಕತುಲ್ಲಾಖಾನರ ಶಿಷ್ಯೆಯಾಗಿದ್ದಳು. ಅನಂತರ ಅಲ್ಲಾದಿಯಾಖಾನರ ಶಿಷ್ಯಳಾದಳು. ವಾಸಿಸುತ್ತಿದ್ದುದು ಮುಂಬಯಿಯಲ್ಲಿ. ಆಕೆಯ ಕೀರ್ತಿ ಇಡೀ ದೇಶದಲ್ಲಿ ಹಬ್ಬಿತ್ತು.

ಮೈಸೂರಿಗೆ ಬಂದು ಆಸ್ಥಾನದಲ್ಲಿ ಹಾಡಿದಾಗ ಮಹಾರಾಜರು ಈಕೆಗೆ ಆ ಕಾಲದಲ್ಲಿ ಸಾವಿರ ರೂಪಾಯಿಗಳ ಸಂಭಾವನೆ ಕೊಟ್ಟರಂತೆ! ಈಕೆಯ ಬಗ್ಗೆ ಪ್ರಸಿದ್ಧ ಪಿಟೀಲು ವಿದ್ವಾಂಸರಾದ ಟಿ. ಚೌಡಯ್ಯನವರು ತಮ್ಮ ಸ್ನೇಹಿತರುಗಳಿಗೆ ಹೇಳುತ್ತಿದ್ದ ಕತೆ ಹೀಗಿದೆ:

ಬಿಡಾರದ ಕೃಷ್ಣಪ್ಪನವರು ಮೈಸೂರಿನಲ್ಲಿ ರಾಮಮಂದಿರವನ್ನು ಕಟ್ಟಿಸಲು ನಿಧಿ ಸಂಗ್ರಹಿಸುವ ಉದ್ದೇಶದಿಂದ ಮುಂಬಯಿಗೂ ಬಂದರು. ಜತೆಯಲ್ಲಿ ಚೌಡಯ್ಯನವರೂ ಇದ್ದರು. ಇಬ್ಬರೂ ಕೇಸರಬಾಯಿಯ ಮನೆಗೆ ಹೋಗಿ ಭೇಟಿಯಾದರು. ಕೇಸರಬಾಯಿ ತುಂಬಾ ಆದರದಿಂದ ಅವರನ್ನು ಸ್ವಾಗತಿಸಿದಳು, ಉಪಚರಿಸಿದಳು. ಕೃಷ್ಣಪ್ಪನವರು ತಾವು ಬಂದ ಉದ್ದೇಶವನ್ನು ತಿಳಿಸಿ, "ನಾಳೆ ನಾನು ನಿಮ್ಮ ಮನೆಯಲ್ಲಿ ಹಾಡುತ್ತೇನೆ. ಸಂಗೀತವನ್ನು ಕೇಳಿ ಇಷ್ಟ ಬಂದಷ್ಟು ಕಾಣಿಕೆಯನ್ನು ಕೊಡಬೇಕು" ಎಂದರು. ಕೇಸರಬಾಯಿ ವಿಸ್ಮಯದಿಂದ ಹೇಳಿದಳು: "ನಿಮ್ಮಂತಹ ಘನ ವಿದ್ವಾಂಸರು ನಮ್ಮ ಮನೆಗೆ ಬಂದು ಹಾಡಬೇಕೇ? ನಾಳೆ ನಾನೇ ನೀವಿರುವ ಜಾಗಕ್ಕೆ ಬಂದು ನಿಮ್ಮ ಸಂಗೀತವನ್ನು ಕೇಳುತ್ತೇನೆ. ಈ ದಿನ ಇಷ್ಟು ದೂರ ದಯಮಾಡಿಸಿದ್ದೀರಿ; ನಾನೇ ಹಾಡುತ್ತೇನೆ, ಕೇಳಬೇಕು."

ಕೇಸರಬಾಯಿ ಮೂರು ಗಂಟೆಗಳ ಕಾಲ ಹಾಡಿದಳು. ಅನಂತರ ಕೃಷ್ಣಪ್ಪನವರಿಗೆ ಸಾವಿರ ರೂಪಾಯಿಗಳ ಕಾಣಿಕೆಯನ್ನು ಸಲ್ಲಿಸಿದಳು.

ಆವಳ ಸಂಗೀತವನ್ನು ಕೇಳಿ ಮೂಗರಾಗಿದ್ದ ಕೃಷ್ಣಪ್ಪನವರು ಹಿಂತಿರುಗಿ ಹೋಗುತ್ತಾ ಚೌಡಯ್ಯನವರಿಗೆ ಹೇಳಿದರು:

"ಏನು ಸಂಗೀತವಯ್ಯ ಈಕೆಯದು! ಎಂಥ ಶ್ರುತಿ ಶುದ್ಧತೆ! ಈಕೆಯ ಮುಂದೆ ನಾಳೆ ನಾನು ಬಾಯಿಬಿಡೋದಾದರೂ ಹೇಗಯ್ಯಾ? ಇವಳ ಸಂಗೀತ ಕೇಳ್ತಾ ಇದ್ರೆ, ಸಂಗೀತವೂ ಬೇಡ, ಆಸ್ಥಾನವೂ ಬೇಡ, ಹಾಯಾಗಿ ಇವಳ ಮನೇಲೇ ಸೇವೆ ಮಾಡ್ಕೊಂಡು ಇದ್ದುಬಿಡೋಣ ಅನ್ನಿಸುತ್ತೆ."

ಮಾರನೆಯ ದಿನ ಕೇಸರಬಾಯಿ ಕೃಷ್ಣಪ್ಪನವರ ಬಿಡಾರಕ್ಕೆ ಬಂದುದೂ ಆಯಿತು. ಅವರ ಸಂಗೀತವನ್ನು ಕೇಳಿ ಆನಂದಿಸಿ ಮೆಚ್ಚುಗೆ

ಸೂಚಿಸಿದುದೂ ಆಯಿತು. ಅದು ಬೇರೆ ವಿಚಾರ. ಬಿಡಾರದ ಕೃಷ್ಣಪ್ಪನವರೇನೂ ಸಾಮಾನ್ಯ ವ್ಯಕ್ತಿಯಲ್ಲ. ಕರ್ನಾಟಕ ವಿದ್ವಾಂಸರಲ್ಲಿ ಶ್ರುತಿ ಶುದ್ಧತೆಗೆ ಹೆಸರಾದವರು. ದಾಸರ ಕೃತಿಗಳನ್ನು ಹಾಡಿಯೇ ಗಂಟೆಗಟ್ಟಲೆ ಸಂಗೀತ ಕಚೇರಿಗಳನ್ನು ಮಾಡಬಲ್ಲ ಸಮರ್ಥರಾಗಿದ್ದರು. ಮೈಸೂರಿನ ರಾಜ ಪ್ರಜೆಗಳಿಬ್ಬರ ಆದರಕ್ಕೂ ಪ್ರೀತಿಗೂ ಪಾತ್ರರಾಗಿದ್ದವರು. ಇಂತಹವರು ಕೇಸರಬಾಯಿಯ ಸಂಗೀತವನ್ನು ಅಷ್ಟೊಂದು ಮೆಚ್ಚಿಕೊಂಡ ಮೇಲೆ ಆಕೆಯ ವಿದ್ವತ್ತು, ರಾಗಮಾಧುರ್ಯ, ತಾನಗಳ ವೈಖರಿ ಉನ್ನತ ಮಟ್ಟದ್ದಾಗಿರಬಹುದು.

ಮೈಸೂರೊಡೆಯರ ಆಹ್ವಾನದ ಮೇಲೆ ಇಲ್ಲಿಗೆ ಬಂದಿದ್ದ ಇನ್ನೊಬ್ಬ ವಿದ್ವಾಂಸರು ಮಿರ್ಜಿಯ ಅಬ್ದುಲ ಕರೀಂಖಾನರು. ಶಾಸ್ತ್ರೀಯ ಸಂಗೀತವನ್ನು ಹಾಡುವುದರ ಜತೆಗೆ ಕರ್ನಾಟಕ ಕೃತಿಗಳ ಆಧಾರದ ಮೇಲೆ ಬಾಲಗಂಧರ್ವರ ನಾಟಕಗಳಿಗೆ ಅಣ್ಣಾಸಾಹೇಬ ಕಿರ್ಲೋಸ್ಕರರು ರಚಿಸಿದ್ದ ಮರಾಠಿ ರಂಗ ಗೀತೆಗಳನ್ನು ಹಾಡುತ್ತಿದ್ದರು.

ಠುಮರಿಯಲ್ಲಿ ಕಲ್ಪನಾ ಸ್ವರಗಳನ್ನು ಸೇರಿಸಿ ಹಾಡುವ ಅಭ್ಯಾಸವನ್ನು ಬೆಳೆಸಿದರು.

ಈಗ ಚಲನಚಿತ್ರ ಪ್ರಪಂಚದಲ್ಲಿ ಅತಿ ಪ್ರಸಿದ್ಧಳಾಗಿರುವ ಲತಾ ಮಂಗೇಶ್ಕರಳ ಗುರುಗಳಾದ ಅಮಾನಲಿ ಖಾನ ಭೇಂಡೀ ಬಜಾರವಾಲೇ ಎನ್ನುವವರು ಇದೇ ಸಮಯದಲ್ಲಿ ವೀಣೆ ಶೇಷಣ್ಣನವರ ಹತ್ತಿರ ಕೆಲವು ಕೃತಿಗಳನ್ನು ಕಲಿತರು. 'ಹಂಸಧ್ವನಿ' ರಾಗವನ್ನು ಹಿಂದೂಸ್ತಾನೀ ಸಂಗೀತಕ್ಕೆ ಅಳವಡಿಸಿ ಕೃತಿ ರಚಿಸಿದ ಕೀರ್ತಿ ಅವರದು. "ವಾತಾಪಿ ಗಣಪತಿಂ ಭಜೇಹಂ" ಕೃತಿಯ ಧಾಟಿಯಲ್ಲಿ ಅಮಾನಲಿ ಖಾನರು "ಲಾಗೀ ಲಗನಪತಿ ಸಂಗ ಸಖಿ" ಎಂದು ಹಾಡಿದರು. ಮುಂದೆ ಲತಾ ಒಂದು ಹಿಂದೀ ಚಿತ್ರದಲ್ಲಿ "ಜಾ ತೋಸೆ ನಾಹೀಂ ಬೋಲೂ ಕನ್ಹಯ್ಯಾ" ಎಂದು ಹಾಡಿದಳು. ಮುಂಬಯಿಯ ನಾರಾಯಣರಾವ್ ವ್ಯಾಸ್ ಅವರು ಮೈಸೂರಿಗೆ ಬರುತ್ತಿದ್ದರು. ಬಂದಾಗ ವಾಸುದೇವಾಚಾರ್ಯರಲ್ಲಿ ಕೆಲವು ಕೀರ್ತನೆಗಳನ್ನು ಕಲಿತಿದ್ದರು. ಒಮ್ಮೆ ಧಾರವಾಡ ಆಕಾಶವಾಣಿಯಲ್ಲಿ



ನತ್ಥನ ಖಾನ

ಕಚೇರಿ ಮಾಡುವಾಗ ಸಾಮರಾಗದ "ಪರಾಕೇಲನಯ್ಯಾ ರಾಪಾ" ಎಂಬ ಕೀರ್ತನೆಯನ್ನು ಹಾಡಿದರು.

## ಯುವರಾಜರಿಂದ ಪ್ರೋತ್ಸಾಹ

ನಾಲ್ವಡಿ ಕೃಷ್ಣರಾಜ ಒಡೆಯರ ತಮ್ಮಂದಿರಾದ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರಿಗೂ ಹಿಂದೂಸ್ತಾನೀ ಸಂಗೀತದಲ್ಲಿ ಅಭಿರುಚಿಯಿತ್ತು. ನತ್ಥನಖಾನರ ಶಿಷ್ಯರಾಗಿದ್ದ ಹಾರ್ಮೋನಿಯಂ ವಾದಕ ಗೋವಿಂದರಾವ್ ಟೇಂಬೆಯವರು ಅವರಿಗೆ ಆಪ್ತ ಸ್ನೇಹಿತರಾಗಿದ್ದರು. ಅವರು ಅನೇಕ ಹಿಂದೂಸ್ತಾನೀ ಸಂಗೀತಗಾರರನ್ನು ಮೈಸೂರು ಬೆಂಗಳೂರುಗಳಿಗೆ ಕರೆಸುತ್ತಿದ್ದರು. ಆಗ್ರಾ ಘರಾನೆಯ ಮೋಹನ ಚಿಕ್ಕರಮನೆಯವರೂ ಒಮ್ಮೆ ಬೆಂಗಳೂರಿಗೆ ಬಂದು ಹಾಡಿದರು. ಯುವರಾಜರು ಕಚೇರಿಯನ್ನು ಕೇಳಿ ಆನಂದಿಸಿ ಸಂಭಾವನೆಯಿತ್ತು ಗೌರವಿಸಿದರು. ಇದೇ ಸಮಯದಲ್ಲಿ ಗುಳ್ಳೇದಗುಡ್ಡ ಗಂಗೂಬಾಯಿಯವರ ನಾಟಕ ಕಂಪನಿಯೂ ಬೆಂಗಳೂರಿಗೆ ಬಂದಿತ್ತು. ಯುವರಾಜರು ಗೋವಿಂದರಾವ್ ಅವರೊಡನೆ ನಾಟಕಗಳಿಗೆ ಹೋಗುತ್ತಿದ್ದರು.

## ತೋಡಾ ಎಲ್ಲಿ ಹೋಯಿತು ?

ಹೀಗೆ ನತ್ಥನಖಾನರು ಆಸ್ಥಾನವಿದ್ವಾಂಸರಾಗಿದ್ದ ಕಾಲದಲ್ಲಿ ಅನೇಕ ಜನ ಹಿಂದೂಸ್ತಾನೀ ಸಂಗೀತಗಾರರು ಮೈಸೂರಿಗೆ ಬಂದು ಹಾಡಿ ತಮ್ಮ ಪ್ರತಿಭೆಯನ್ನು ತೋರಿಸಿ ಹೋಗುತ್ತಿದ್ದರು. ಕೃಷ್ಣರಾಜ ಒಡೆಯರಿಗಂತೂ ನತ್ಥನಖಾನರ ಬಗ್ಗೆ ಅಪಾರ ಅಭಿಮಾನ. ಒಂದು ಸಲ ನತ್ಥನಖಾನರ ಸಂಗೀತವನ್ನು ಬಹಳವಾಗಿ ಮೆಚ್ಚಿ ಮಹಾರಾಜರು ಅವರಿಗೆ ರತ್ನಖಚಿತ ಚಿನ್ನದ ತೋಡಾವನ್ನು ಬಹುಮಾನವಾಗಿ ಕೊಟ್ಟರು. ಕೆಲವು ದಿನಗಳ ನಂತರ ಒಂದು ದಿನ ಮಹಾರಾಜರ ಸಮ್ಮುಖದಲ್ಲಿ ಹಾಡುತ್ತಿದ್ದಾಗ ತೋಡಾ ಸಾಹೇಬರ ಕೈಯಲ್ಲಿರಲಿಲ್ಲ. ಕಚೇರಿ ಮುಗಿದು ಎಲ್ಲರೂ ಹೊರಟು

ಹೋದ ಮೇಲೆ ಖಾನಸಾಹೇಬರಿಗೆ ಮಹಾರಾಜರು, 'ತೋಡಾ ಏನಾಯಿತು ?' ಎಂದು ಕೇಳಿದರು. ನತ್ಥನಖಾನರು ಮುಗ್ಧತೆಯಿಂದ "ಮಕ್ಕಳ ಹೊಟ್ಟೆಗೆ ಹೋಯಿತು ಮಹಾಸ್ವಾಮಿ" ಎಂದರು. ನಡೆದಿದ್ದಿಷ್ಟು : ನತ್ಥನಖಾನರದು ದೊಡ್ಡ ಸಂಸಾರ. ಏನೋ ತಾಪತ್ರಯಕ್ಕೆ ಸಿಕ್ಕು, ಮಹಾರಾಜರು ಕೊಟ್ಟಿದ್ದ ತೋಡಾವನ್ನು ಮಾರಿಬಿಟ್ಟಿದ್ದರು. ಇದನ್ನು ಕೇಳಿ ಮಹಾರಾಜರಿಗೆ ತುಂಬಾ ಬೇಸರವಾಯಿತು. ಅವರು ನೊಂದುಕೊಂಡು, "ಅಲ್ಲಾ ಖಾನಸಾಹೇಬರೇ, ನಿಮಗೆ ಏನಾದರೂ ತಾಪತ್ರಯವಾಗಿದ್ದರೆ ನನಗೆ ತಿಳಿಸಬಾರದಾಗಿತ್ತೇ ? ತೋಡಾ ಬೆಲೆಬಾಳುವ ವಸ್ತು ಎನ್ನುವುದಕ್ಕಾಗಿ ಹೇಳುತ್ತಿಲ್ಲ, ವಿಶ್ವಾಸದಿಂದ ಕೊಟ್ಟಿದ್ದೆ ; ಅದರ ಬೆಲೆಯನ್ನು ನೀವು ಅರಿತಿರಬೇಕಾಗಿತ್ತು" ಎಂದರು. ಅದಕ್ಕೆ ನತ್ಥನ ಖಾನರು ವಿನಯದಿಂದ 'ಕ್ಷಮಿಸಬೇಕು ತಿಳಿಯಲಿಲ್ಲ' ಎಂದರು. ಮಹಾರಾಜರು ಮತ್ತೊಮ್ಮೆ ಅಂತಹುದೇ ಇನ್ನೊಂದು ತೋಡಾ ಮಾಡಿಸಿ ಕೊಟ್ಟರು.

ನತ್ಥನಖಾನರ ಮಗ ಅಬ್ದುಲ್ಲಾಖಾನ. ಅವನನ್ನು ಎಲ್ಲರೂ, ಸಲುಗೆಯಿಂದ ದುಲ್ಲೇಖಾನ ಎಂದು ಕರೆಯುತ್ತಿದ್ದರು. ಒಂದು ಸಲ ದರಬಾರಿನಲ್ಲಿ ಕಚೇರಿ ನಡೆದಾಗ ದುಲ್ಲೇಖಾನ ತಂದೆಯೊಡನೆ 'ಸಾಥಿ' ಮಾಡುತ್ತಿದ್ದ. ಅವನ ಗಾಯನ ಕೇಳಿ ಅವನೂ ಒಬ್ಬ ಉಸ್ತಾದನೇ ಎಂದು ಮಹಾರಾಜರು ಮನಗಂಡು ತಂದೆಗಲ್ಲದೆ ಮಗನಿಗೂ ಪ್ರತ್ಯೇಕ ಸಂಬಳವನ್ನು ಗೊತ್ತುಮಾಡಿದರು. ಮುಂದೆ ದುಲ್ಲೇಖಾನ ಕೆಲವು ವರ್ಷಗಳು ಬಾಗಲಕೋಟೆಯಲ್ಲಿದ್ದು ಅನೇಕ ಶಿಷ್ಯರಿಗೆ ಪಾಠ ಹೇಳಿಕೊಡುತ್ತಿದ್ದರು. ಒಂದು ಸಲ ಅವರು ಉತ್ತರ ದೇಶದಲ್ಲಿ ತಮ್ಮೂರಿಗೆ ಹೋದಾಗ ಅಲ್ಲಿ ಹಿಂದೂ ಮುಸಲ್ಮಾನ ದಂಗೆಯಾಯಿತು. ಆ ದಂಗೆಯಲ್ಲಿ ದುಲ್ಲೇಖಾನ ಹಿಂದೂಗಳ ಪರವಾಗಿ ಹೋರಾಡುತ್ತ ಹುತಾತ್ಮರಾದರು. ಅವರ ಅನೇಕ ಜನ ಶಿಷ್ಯರಲ್ಲಿ ಪ್ಯಾರಾಬಾಯಿ ಬೀಳಗಿ ಮುಖ್ಯರು.



ಅಬ್ದುಲ್ಲಾಖಾನ

## ಗುಣಗ್ರಾಹಿ

ನತ್ಥನಖಾನರು ದೊಡ್ಡ ವಿದ್ವಾಂಸರಾಗಿದ್ದುದಷ್ಟೇ ಅಲ್ಲದೆ ನಿಗರ್ವಿಗಳೂ ಆಗಿದ್ದರು. ಬೇರೆಯವರ ಸಂಗೀತವನ್ನು ಕೇಳಿ ಸಂತೋಷಪಡುವ, ಮುಕ್ತ ಕಂಠದಿಂದ ಹೊಗಳುವ ಸಹೃದಯತೆ ಅವರಲ್ಲಿತ್ತು. ಆ ಕಾಲದಲ್ಲಿ ಅಲ್ಲಾದಿಯಾ ಖಾನರು ತುಂಬಾ ದೊಡ್ಡ ಉಸ್ತಾದರು. ಮೂರು ಸಪ್ತಕಗಳಲ್ಲಿ ಕಠಿಣ ತಾನಗಳನ್ನು ಲೀಲಾಜಾಲವಾಗಿ ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಒಮ್ಮೆ ಅವರು ಹಾಡುವುದನ್ನು ಕೇಳಿ ನತ್ಥನಖಾನರು : "ಭಯ್ಯಾ ಜಂಹಾ ತಕ ತುಮ್ಹಾರಾ ಗಲಾ ಪಹೋಂಚತಾ ಹೈ ವಹಾಂ ತಕ ಹಮಾರೀ ನಜರ ಭೀ ನಹೀಂ ಪಹೋಂಚತೀ" ಎಂದುದ್ಗರಿಸಿದರು. (ಅಣ್ಣಯ್ಯಾ, ನಿನ್ನ ಧ್ವನಿಯೇರಿದೆತ್ತರಕ್ಕೆ ನಮ್ಮ ದೃಷ್ಟಿಯೂ ಏರಲಾರದು.) ಈ ಮಾತಿನಲ್ಲಿ ಹೃದಯವೈಶಾಲ್ಯವಿದೆ. ಅಲ್ಲದೆ ಕವಿತ್ವವೂ ಇದೆ.

ನತ್ಥನಖಾನರಿಗೆ ಅಬ್ದುಲ್ಲಾಖಾನರಲ್ಲದೆ ವಿಲಾಯತ ಹುಸೇನಖಾನ ಮತ್ತು ನತ್ಥೂಖಾನರೆಂಬ ಬೇರೆ ಇಬ್ಬರು ಗಂಡು ಮಕ್ಕಳೂ ಇದ್ದರು. ಇವರೂ ಹಿಂದೂಸ್ತಾನೀ ಸಂಗೀತ ಪ್ರಪಂಚದಲ್ಲಿ ಪ್ರಸಿದ್ಧರಾದವರೇ. ಮುಂದೆ ಅವರೂ ಮುಂಬಯಿಗೆ ಹೋಗಿ ನೆಲೆಸಿದರು. ನತ್ಥೂಖಾನರ ಶಿಷ್ಯರಲ್ಲಿ ಪ್ರಸಿದ್ಧರಾದವರು, ಸಮಾರ ಗೋವಿಂದರಾವ್ ಯಲ್ಲಾಪುರಕರ ಮುಂತಾದ ಮುಂಬಯಿಯ ಕನ್ನಡಿಗರೇ.

ನತ್ಥನಖಾನರು ಮಾತ್ರ ಕೊನೆಯವರೆಗೆ ಮೈಸೂರಿನಲ್ಲೇ ಇದ್ದರು. ಅವರು ದೇಹವಿಟ್ಟುದೂ ಕನ್ನಡನಾಡಿನಲ್ಲಿಯೇ.

## ಧಾರವಾಡದಲ್ಲಿ ಭಾಸ್ಕರಬುವಾ

ಆ ಕಾಲದಲ್ಲಿ ಧಾರವಾಡ ಮತ್ತು ಉತ್ತರ ಕರ್ನಾಟಕ ಪ್ರದೇಶ ಮುಂಬಯಿ ಇಲಾಖೆಗೆ ಸೇರಿದ್ದುವು. ಆಗಿನ ಬ್ರಿಟಿಷ್ ಸರಕಾರ ಭಾಸ್ಕರಬುವಾ ಬಖಲೆ ಎನ್ನುವ ಹಿಂದೂಸ್ತಾನೀ ಸಂಗೀತ ವಿದ್ವಾಂಸರನ್ನು ಧಾರವಾಡದ "ಗಂಟ್ರೇಕಾ"— ಎಂದರೆ ಗಂಡುಮಕ್ಕಳ ಟ್ರೈನಿಂಗ್ ಕಾಲೇಜಿಗೆ ಸಂಗೀತ ಶಿಕ್ಷಕರನ್ನಾಗಿ ನೇಮಿಸಿದ್ದಿತು. ಮೊದಲು ಬುವಾ ಅವರು

ಪುಣೆಯಲ್ಲಿ 'ಗಂಧರ್ವ ನಾಟಕ ಕಂಪನಿ'ಯಲ್ಲಿ ಸಂಗೀತ ನಿರ್ದೇಶಕರಾಗಿದ್ದರು. ಅಲ್ಲದೆ ಪುಣೆಯಲ್ಲಿಯೇ ಭಾರತೀಯ ಸಂಗೀತ ಸಮಾಜ ಎನ್ನುವ ಸಂಸ್ಥೆಯನ್ನು ಸ್ಥಾಪಿಸಿದರು. ಅದು ಈಗಲೂ ನಡೆಯುತ್ತಿದೆ. ಅದರ ಸಂಚಾಲಕರಲ್ಲೊಬ್ಬರು ಧಾರವಾಡದ ಮಾಧವ ಪಿತ್ರೇ. ಸಂಗೀತ ಪಾಠಗಳನ್ನು ನಡೆಸುವುದು ದೊಡ್ಡ ದೊಡ್ಡ ಸಂಗೀತ ವಿದ್ವಾಂಸರನ್ನು ಕರೆಸಿ ಕಚೇರಿ ಮಾಡಿಸುವುದು ಈ ಸಂಸ್ಥೆಯ ಉದ್ದೇಶ.

ಮಾಧವ ಪಿತ್ರೇಯವರ ತಂದೆ ಪಿತ್ರೇ ವಕೀಲರು ಭಾಸ್ಕರಬುವಾ ಅವರಿಗೆ ಒಳ್ಳೆಯ ಮಿತ್ರರು. ಜೊತೆಗೆ ಅವರಿಂದ ಸಂಗೀತವನ್ನು ಕಲಿತಿದ್ದರು. ಬುವಾ ಅವರು ಧಾರವಾಡಕ್ಕೆ ಬಂದು ನೆಲಸಿದ ಮೇಲೆ ಆಪ್ತಮಿತ್ರರ ಪುನರ್ಮಿಲನವಾಯಿತು.

ಬಂದ ಹೊಸದರಲ್ಲಿ ಧಾರವಾಡದಲ್ಲಿ ಯಾರಿಗೂ ಭಾಸ್ಕರಬುವಾ ಬಗ್ಗೆಯಾಗಲೀ ಅವರ ಸಂಗೀತದ ಬಗ್ಗೆಯಾಗಲೀ ಆಸಕ್ತಿ ಇರಲಿಲ್ಲ. ಆದರೆ ನತ್ಥನಖಾನರು ಮೈಸೂರಿನ ಆಸ್ಥಾನಕ್ಕೆ ಬಂದ ಮೇಲೆ ಪರಿಸ್ಥಿತಿ ಬದಲಾಯಿತು. ನತ್ಥನಖಾನರು ಭಾಸ್ಕರಬುವಾ ಅವರ ಸಂಗೀತ ಗುರುಗಳು. ಅವರು ಆಗಾಗ ಧಾರವಾಡಕ್ಕೆ ಬಂದು ಅಲ್ಲಿ ಬುವಾ ಅವರ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದರು. ಬುವಾ ಅವರಿಗೆ ಗುರುಗಳನ್ನು ಕಂಡರೆ ಪರಮ ಭಕ್ತಿ. ತುಂಬಾ ಶ್ರದ್ಧೆಯಿಂದ ಅವರ ಸೇವೆ ಮಾಡುತ್ತಿದ್ದರು. ಅದರಿಂದ ಸಂತೋಷಗೊಂಡ ನತ್ಥನಖಾನರು ಶಿಷ್ಯನಿಗೆ ಹೊಸ ರಾಗರಾಗಿಣಿಗಳನ್ನು ಹೇಳಿಕೊಡುತ್ತಿದ್ದರು. ಭಾಸ್ಕರಬುವಾ ಆಗಾಗ ಧಾರವಾಡದಲ್ಲಿ ಗುರುಗಳ ಸಂಗೀತ ಕಚೇರಿಯನ್ನು ಏರ್ಪಡಿಸಿ ಊರಿನ ರಸಿಕರನ್ನು ಆವಾಹಿಸುತ್ತಿದ್ದರು. ಮೊದಮೊದಲು ಜನ ಹೆಚ್ಚಾಗಿ ಬರುತ್ತಿರಲಿಲ್ಲ. ಆದರೆ ಧಾರವಾಡದ ಜನರಿಗೆ ಮೈಸೂರಿನ ಮಹಾರಾಜರೆಂದರೆ ವಿಶೇಷ ಭಕ್ತಿ. ನತ್ಥನಖಾನರು ಮೈಸೂರಿನ ಆಸ್ಥಾನ ವಿದ್ವಾಂಸರು ಎಂದು ತಿಳಿದ ಕೂಡಲೇ ಹಾಗಾದರೆ ಅವರು ದೊಡ್ಡ ಗವಯಿಗಳಿರಲೇಬೇಕು. ಹೇಗೆ ಹಾಡುತ್ತಾರೋ ಕೇಳೋಣ ಎನ್ನುವ ಕುತೂಹಲದಿಂದ ಬರತೊಡಗಿದರು. ಕ್ರಮೇಣ ಉಸ್ತಾದರ ಸಂಗೀತದ ಸಮ್ಮೋಹನ ಶಕ್ತಿಗೆ ಜನ ಮರುಳಾದರು. ಅವರ ರುಚಿ ಹತ್ತಿದ ಮೇಲೆ ಹೆಚ್ಚು ಹೆಚ್ಚಾಗಿ ಭಾಸ್ಕರಬುವಾ ಅವರ ಸಂಗೀತವನ್ನು ಕೇಳಿ ಆನಂದ



ಭಾಸ್ಕರ ಬುವಾ ಬಖಲೆ

ಪಡುವುದಕ್ಕೆ ಆರಂಭಿಸಿದರು. ಆಮೇಲೆ ಪ್ರತಿವರ್ಷ ದಸರಾ ಉತ್ಸವಕ್ಕೆ ಉತ್ತರ ಹಿಂದೂಸ್ತಾನದಿಂದ ಮೈಸೂರಿಗೆ ಹೋಗುತ್ತಿದ್ದ ಹಿಂದೂಸ್ತಾನೀ ಗಾಯಕರನ್ನೂ, ವಾದಕರನ್ನೂ ಧಾರವಾಡ ಹುಬ್ಬಳ್ಳಿಯ ಜನ ತಮ್ಮಲ್ಲಿ ಇಳಿಸಿಕೊಂಡು ಅವರ ಕಾರ್ಯಕ್ರಮ ಏರ್ಪಡಿಸಿ ಕೇಳಿ ಆನಂದಪಟ್ಟು ಹಣ ಕೊಟ್ಟು ಕಳುಹಿಸಲು ಆರಂಭಿಸಿದರು. ಹೀಗೆ ಹಿಂದೂಸ್ತಾನೀ ಸಂಗೀತದಲ್ಲಿ ಆಸಕ್ತಿ ಬೆಳೆದಮೇಲೆ ಧಾರವಾಡದಲ್ಲಿ ಭಾಸ್ಕರಬುವಾ ಅವರಿಗೆ ಶಿಷ್ಯರು ಜಾಸ್ತಿಯಾದರು. ವಕೀಲ ಪಿತ್ರೆಯವರು ತಮ್ಮ ಮನೆಯ ಮಹಡಿಯನ್ನೇ ಬುವಾ ಅವರಿಗೆ ಸಂಗೀತ ಪಾಠ ಮಾಡಲು ತೆರವು ಮಾಡಿಕೊಟ್ಟರು.

ಬುವಾ ಅವರಲ್ಲಿ ಮೊದಲು ಸಂಗೀತವನ್ನು ಕಲಿತವರು ಶಂಕರ ದೀಕ್ಷಿತ ಜಂತಲಿ. ಇವರನ್ನು ಬಂಕಾಪುರದ ದೀಕ್ಷಿತರು ಎನ್ನುತ್ತಿದ್ದರು. ಚೆನ್ನಬಸವರಾಜ ಹಡಗಲಿ ಈ ಬಂಕಾಪುರ ದೀಕ್ಷಿತರ ಶಿಷ್ಯರು. ಒಳ್ಳೆಯ ಸಂಗೀತಗಾರರು. ಆಗ ಪ್ರಸಿದ್ಧವಾಗಿದ್ದ ವಾಮನರಾವ ಮಾಸ್ತರ ಕಂಪನಿ, ಶಿರಹಟ್ಟಿ ವೆಂಕೋಬರಾಯರ ಕಂಪನಿಗಳಲ್ಲಿ ನಟರಾಗಿದ್ದು ಸ್ತ್ರೀ ಪಾತ್ರ ಗಳನ್ನು ವಹಿಸುತ್ತಿದ್ದರು. ಅವರಿಗೆ "ನಾಟ್ಯನಾಯಕಿ" ಎಂಬ ಬಿರುದಿದ್ದು, ಕಾರಣಾಂತರದಿಂದ ಅವರು ಕವಲೀ ಚೆನ್ನಬಸವಪ್ಪ ಎಂದು ಪ್ರಸಿದ್ಧ ರಾಗಿದ್ದಾರೆ. ತಮ್ಮ ಗುರುಗಳನ್ನು ನೆನೆಸಿಕೊಂಡು ಅವರು ಹೇಳಿದ ಮಾತಿದು : ಶಂಕರ ದೀಕ್ಷಿತರು ತುಂಬಾ ಶ್ರದ್ಧೆಯಿಂದ ಸಂಗೀತದ ಅಭ್ಯಾಸ ಮಾಡುತ್ತಿದ್ದರು. ಸಂಗೀತವನ್ನು ಕಲಿತು ತಾವು ಶಿಷ್ಯರಿಗೆ ಹೇಳಿಕೊಡು ವಂತಾದಮೇಲೂ ಇವರ ಸಾಧನೆ ನಿಲ್ಲಲಿಲ್ಲ. ದಿನದ ಇಪ್ಪತ್ತನಾಲ್ಕು ಗಂಟೆಯೂ ಇವರಿಗೆ ಸಂಗೀತದ್ದೇ ಧ್ಯಾನ. ಇವರು ಮಲಗಿದಾಗ ನಿದ್ದೆ ಹತ್ತುವ ತನಕ ಒಬ್ಬ ಶಿಷ್ಯ ತಂಬೂರಿಯ ಶ್ರುತಿ ಹಾಕುತ್ತಲೇ ಇರುತ್ತಿದ್ದ. ನಿದ್ದೆ ಹತ್ತಿದಮೇಲೂ ಅವರ ಬಲಗಾಲ ಹೆಬ್ಬೆರಳು ಒಂದೇ ಲಯದಲ್ಲಿ ತಾಳ ಹಾಕುವಂತೆ ಮಿಡಿಯುತ್ತಲೇ ಇರುತ್ತಿತ್ತು.

ಈಗ ಪ್ರಸಿದ್ಧ ಸಂಗೀತ ವಿದ್ವಾಂಸರಾಗಿರುವ ಗುರುರಾವ ದೇಶಪಾಂಡೆ ಯವರೂ ಮೊದಲು ಶಂಕರ ದೀಕ್ಷಿತರೊಟ್ಟಿಗೆ ಪಿತ್ರೆಯವರಲ್ಲಿಯೇ ಸಂಗೀತಾ ಭ್ಯಾಸ ಮಾಡುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ಸಂಗೀತಗಾರರಿಗೆ ನಾಟಕ ಕಂಪನಿಗಳಿಂದಲೂ ದೊಡ್ಡ ಆಶ್ರಯ ಸಿಕ್ಕಿತ್ತು. ಆಗಿನ ಸಂಗೀತಗಾರರು ಒಳ್ಳೆಯ ನಟರೂ ಆಗಿರುತ್ತಿದ್ದರು. ಅವರಿಗೆ ಸಂಗೀತ ಪ್ರಧಾನವಾದ ಪಾತ್ರಗಳನ್ನು ಕೊಡುತ್ತಿದ್ದರು. ಒಮ್ಮೊಮ್ಮೆ ನಾಟಕ ಕಂಪನಿ ಬೀಡುಬಿಟ್ಟಿದ್ದ ಊರಿಗೆ ಅಕಸ್ಮಾತ್ತಾಗಿ ಯಾರಾದರೂ ಗವಯಿಗಳು ಬಂದರೆ ಅಂದು ಅವರಿಗಾಗಿ ಸಂಪೂರ್ಣ ರಾಮಾಯಣದಂತಹ ನಾಟಕವನ್ನಿಟ್ಟು ಅದರಲ್ಲಿ ಅವರಿಗೆ ರಾಮನ ಪಾರ್ಟು ಕೊಟ್ಟು ಆ ಊರಿನ ಜನರಿಗೆ ಅವರ ಸಂಗೀತ ಕಲೆಯ ಪರಿಚಯವಾಗುವಂತೆ ಮಾಡುತ್ತಿದ್ದರು. ಇಲ್ಲವೆ ನಾಟಕದ ಮಧ್ಯದಲ್ಲಿ ಅವರನ್ನು ಗವಯಿಗಳಾಗಿಯೇ ರಂಗದ ಮೇಲೆ ತಂದು ಎರಡು ಗಂಟೆ ಪಕ್ಕಾ ಬೈಠಕವನ್ನೇ ಮಾಡಿಸಿ ಸಂಭಾವನೆ ಕೊಟ್ಟು ಕಳಿಸುತ್ತಿದ್ದರು. ನಾಟಕದ ನಡುವೆ ದೊರೆತ ಈ ಹೆಚ್ಚಿನ ರಸದೌತಣವನ್ನು ಪ್ರತ್ಯೇಕವಾಗಿ ಅನುಭವಿಸಿ ಆನಂದಿಸುವ ಯೋಗ್ಯತೆ ಅಂದಿನ ಪ್ರೇಕ್ಷಕರಿಗಿರುತ್ತಿತ್ತು. ಇದರಿಂದಾಗಿ ಸಂಗೀತಗಾರರಿಗೆ ಪ್ರಚಾರಾವಕಾಶಗಳು ದೊರೆಯುತ್ತಿದ್ದುದಲ್ಲದೆ ಧನ ಸಹಾಯವೂ ಆಗುತ್ತಿತ್ತು. ಉತ್ತರ ಕರ್ನಾಟಕದ ರಂಗಭೂಮಿಯ ಮೇಲೆ ಹಿಂದೂಸ್ತಾನೀ ಸಂಗೀತ ಜನಪ್ರಿಯವಾಗಲು ಕಾರಣ ನೆರೆಯ ನಾಡಾದ ಮಹಾರಾಷ್ಟ್ರ ರಂಗಭೂಮಿಯ ಮತ್ತು ಮೈಸೂರಿನ ನತ್ಥನಖಾನರ ಪ್ರಭಾವಗಳು.

ನತ್ಥನಖಾನರು ತೀರಿಕೊಂಡಮೇಲೆ ಮೈಸೂರಿನ ಆಸ್ಥಾನದಲ್ಲಿ ಬರ್ಕತುಲ್ಲಾಖಾನ ಎಂಬ ಸಿತಾರ ವಾದಕರು ಮಾತ್ರ ಉಳಿದರು. ಆದರೆ ಒಬ್ಬರು ಗಾಯಕರೂ ಇರಬೇಕೆಂಬುದು ಮಹಾರಾಜರ ಬಯಕೆಯಾಗಿದ್ದಿತು.

ದಸರಾ ಉತ್ಸವದಲ್ಲಿ ಉತ್ತರದಿಂದ ಬಂದು ರಾಜದರ್ಬಾರಿನಲ್ಲಿ ಹಾಡಿ ಪ್ರಭುಗಳ ಮತ್ತು ಜನರ ಮನ್ನಣೆಗಳಿಸಿದವರಲ್ಲಿ ಉಸ್ತಾದ ಫಯ್ಯಾಜ ಖಾನರೂ ಒಬ್ಬರು. ಇವರು ಬರೋಡಾ ಸಂಸ್ಥಾನದ ಆಸ್ಥಾನ ವಿದ್ವಾಂಸ ರಾಗಿದ್ದರು. ಅಲ್ಲದೆ, ದೇಶದ ನಾನಾ ಭಾಗಗಳಲ್ಲಿ ಕಚೇರಿ ಮಾಡಿ ರಾಜ ರಿಂದ, ಜನತೆಯಿಂದ ಅನೇಕ ಬಿರುದುಗಳನ್ನು ಸಂಪಾದಿಸಿದ್ದರು. ಮೈಸೂರಿನ ಮಹಾರಾಜರೂ ಇವರ ಗಾಯನ ಪ್ರತಿಭೆಗೆ ಮೆಚ್ಚಿ ಇವರಿಗೆ "ಆಫ್ತಾಬೆ ಮೂಸಿಕೀ" ಅಂದರೆ "ಸಂಗೀತ ಸೂರ್ಯ" ಎಂಬ ಬಿರುದನ್ನು

ಮಯಪಾಲಿಸಿದ್ದರು. ಫಯ್ಯಾಜಖಾನರ ಬೇರೆ ಬಿರುದುಗಳಿಗಿಂತ ಇದೇ ಹೆಚ್ಚು ಪ್ರಸಿದ್ಧವಾಗಿರುವುದು. ಆದರೆ ಅದು ಮೈಸೂರ ಮಹಾರಾಜರು ಕೊಟ್ಟ ಬಿರುದೆಂದು ಅನೇಕರಿಗೆ ಗೊತ್ತಿಲ್ಲ. ನತ್ಥನಖಾನರ ಮರಣಾನಂತರ ಮಹಾರಾಜರು ಫಯ್ಯಾಜಖಾನರನ್ನೇ ತಮ್ಮ ಆಸ್ಥಾನದ ವಿದ್ವಾಂಸರಾಗಿರು ವಂತೆ ಕೇಳಿಕೊಂಡರು. ಆದರೆ ಉಸ್ತಾದರು ಈ ಮೊದಲೇ ಬಡೋದೆ ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿದ್ದುದರಿಂದ ಮೈಸೂರಿಗೆ ಬರಲು ಒಪ್ಪಲಿಲ್ಲ. ಆದರೆ ತಮ್ಮ ಬದಲಿಗೆ ನತ್ಥನಖಾನ ಸಾಹೇಬರ ಮಗ ಉಸ್ತಾದ ವಿಲಾಯತ ಹುಸೇನಖಾನರನ್ನು ಮೈಸೂರಿನ ಆಸ್ಥಾನ ವಿದ್ವಾಂಸ ರನ್ನಾಗಿ ಮಾಡಿಕೊಳ್ಳುವಂತೆ ಸೂಚಿಸಿದರು. ಅದರಂತೆ ಕೃಷ್ಣರಾಜ ಒಡೆಯರು ವಿಲಾಯತ ಹುಸೇನಖಾನರನ್ನು ಮುಂಬಯಿಯಿಂದ ಕರೆಸಿ ನೇಮಿಸಿಕೊಂಡರು.

ಆಸ್ಥಾನ ವಿದ್ವಾಂಸರಾದಮೇಲೆ ವಿಲಾಯತ ಹುಸೇನಖಾನರಿಗೆ, ಮಹಾರಾಜರೇ ಕರ್ನಾಟಕ ಸಂಗೀತವನ್ನು ಕಲಿತಿರುವ ಕೆಲವು ಚೂಟಿಯಾದ ಬಾಲಕರನ್ನು ಶಿಷ್ಯರನ್ನಾಗಿ ಒಪ್ಪಿಸಿ, ಅವರಿಗೆ ಹಿಂದೂಸ್ತಾನೀ ಸಂಗೀತ ಕಲಿಸುವಂತೆ ತಿಳಿಸಿದರು. ಹಾಗೆ ಹಿಂದೂಸ್ತಾನೀ ಸಂಗೀತವನ್ನು ಕಲಿತವರಲ್ಲಿ ಮೈಸೂರಿನ ಡಾ॥ ವೀಣೆ ದೊರೆಸ್ವಾಮಿ ಅಯ್ಯಂಗಾರ್ ಅವರೂ ಒಬ್ಬರು.

ವಿಲಾಯತ ಹುಸೇನಖಾನರ ಶಿಷ್ಯರು ದೇಶದ ನಾನಾ ಭಾಗಗಳಲ್ಲಿ ದ್ದಾರೆ. ಧಾರವಾಡದಲ್ಲೂ ಇವರ ಒಬ್ಬ ಶಿಷ್ಯರಿದ್ದರು. ವಾಳ್ವೇಕರ ಹನುಮಂತರಾಯರೆಂದು ಅವರ ಹೆಸರು. ಅವರ ಶಿಷ್ಯರು ಈಗ ಬೆಂಗಳೂರು ಆಕಾಶವಾಣಿಯಲ್ಲಿ ವಯಲಿನ ವಾದಕರಾಗಿರುವ ಜೆ. ಎಲ್. ಕೆ. ಶಾಸ್ತ್ರಿಗಳು. ಇವರು ಹಿಂದೂಸ್ತಾನೀ, ಕರ್ನಾಟಕೀ ಎರಡೂ ಸಂಪ್ರದಾಯಗಳನ್ನು ಬಲ್ಲರು.

ಉಸ್ತಾದ ಫಯ್ಯಾಜಖಾನರು ಮೈಸೂರಿಗೆ ಬಂದಾಗ ಅವರ ಗಾಯನ ವಿದ್ಯೆಗೆ ಮಾರುಹೋದವರನೇಕರಲ್ಲಿ ಬೆಂಗಳೂರಿನ ಪಂಡಿತ ರಾಮರಾವ ನಾಯಕರೊಬ್ಬರು. ಅವರು ಮೊದಲು ಕರ್ನಾಟಕ ಸಂಗೀತವನ್ನು ಕಲಿತು ಗುಬ್ಬಿ ಕಂಪನಿಯಲ್ಲಿ ನಟರಾಗಿ ಸೇರಿದ್ದರು. ಆಮೇಲೆ ಬೆಂಗಳೂರಿನಲ್ಲಿ ಬಂದು ನೆಲೆಸಿದ್ದ ವಿಷ್ಣು ದಿಗಂಬರ ಪಲೂಸಕರರ ಶಿಷ್ಯ ಕೆ. ವಿ. ಭಾವೆ

ಯವರ (ಶ್ಯಾಮಲಾ ಭಾವೆಯವರ ತಂದೆ) ಸಂಗೀತ ಶಾಲೆಯಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದರು. ಫಯ್ಯಾಜಖಾನರ ಸಂಗೀತ ಕೇಳಿದ ಮೇಲೆ ಅವರಿಗೆ ಹಿಂದೂಸ್ತಾನೀ ಸಂಗೀತ ಕಲಿಯುವ ಇಚ್ಛೆ ಬಲವಾಯಿತು. ಬೆಂಗಳೂರನ್ನೇ ಬಿಟ್ಟು ನೇರವಾಗಿ ಮುಂಬಯಿಗೆ ಹೋದರು. ಅಲ್ಲಿ ಫಯ್ಯಾಜ ಖಾನರ ಶಿಷ್ಯರಾಗಿದ್ದ ಸ್ವಾಮಿ ವಲ್ಲಭದಾಸರು ಆರಂಭಿಸಿದ್ದ "ವಲ್ಲಭ ಸಂಗೀತ ವಿದ್ಯಾಲಯ"ದಲ್ಲಿ ಅಭ್ಯಾಸ ಮಾಡಿದರು. ಅನಂತರ ಬಡೋದೆಗೆ ಹೋಗಿ ಫಯ್ಯಾಜಖಾನ ಸಾಹೇಬರಲ್ಲಿಯೇ ಶಿಕ್ಷಣವನ್ನು ಮುಂದು ವರಿಸಿದರು. ಕೆಲವು ಕಾಲ ಆಗ್ರಾ ಘರಾನೆಯ ಅತಾ ಹುಸೇನಖಾನರಲ್ಲೂ ಖಯಾಲ ಗಾಯನ ಕಲಿತರು.

ಹೀಗೆ ಹಿಂದೂಸ್ತಾನೀ ಗಂಗೆ ಕರ್ನಾಟಕೀಯ ಕಾವೇರಿಯೊಂದಿಗೆ ಸಂಗಮಿಸಿತು ಮೈಸೂರಿನಲ್ಲಿ. ಪ್ರತಿಯಾಗಿ ಕರ್ನಾಟಕೀ ಕಾವೇರಿ ಉತ್ತರಕ್ಕೆ ಹೋಗಿ ಹಿಂದೂಸ್ತಾನೀ ಗಂಗೆಯೊಂದಿಗೆ ಸಂಗಮಹೊಂದಿತು ಪುಣೆಯಲ್ಲಿ.

ಅಣ್ಣಾಸಾಹೇಬ ಕಿರ್ಲೋಸ್ಕರ ಮರಾಠಿಯ ದೊಡ್ಡ ನಾಟಕಕಾರರು. ಕರ್ನಾಟಕದ ಗುರ್ಲಹೊಸೂರಿನವರು. ಅವರು ಕರ್ನಾಟಕ ಸಂಗೀತದ ಒಳ್ಳೊಳ್ಳೆಯ ಧಾಟಿಗಳನ್ನು ತೆಗೆದುಕೊಂಡು, ಆ ಧಾಟಿಯಲ್ಲಿ ಮರಾಠಿ ಹಾಡುಗಳನ್ನು ರಚಿಸಿ, ತಮ್ಮ ನಾಟಕಗಳಲ್ಲಿ ಜೋಡಿಸುತ್ತಿದ್ದರು. ಆ ಮೇಲ್ಪಂಕ್ತಿಯನ್ನು ಇತರ ಮರಾಠೀ ನಾಟಕಕಾರರೂ ಅನುಸರಿಸಿದರು. ಬಾಲಗಂಧರ್ವರು ತಮ್ಮ ನಾಟಕ ಕಂಪನಿಯಲ್ಲಿ ಈ ಬಗೆಯ ಹಾಡುಗಳನ್ನು ಬಳಕೆಗೆ ತಂದು ಮತ್ತಷ್ಟು ಪ್ರಚಲಿತಗೊಳಿಸಿದರು. ಬಾಲಗಂಧರ್ವರ ಹುಟ್ಟು ಹೆಸರು ನಾರಾಯಣರಾವ ರಾಜಹಂಸ ಎಂದು. ಅವರ ತಾಯಿಯ ತವರೂರು ಕರ್ನಾಟಕದ ಗುರ್ಲಹೊಸೂರು. ನಾರಾಯಣ ಚಿಕ್ಕ ವಯಸ್ಸಿನಿಂದಲೂ ನಾಟಕ ಕಂಪನಿಗಳಲ್ಲಿ ಪಾತ್ರ ವಹಿಸುತ್ತಿದ್ದ. ಚಿಕ್ಕಂದಿನಿಂದಲೂ ಇವನದು ಮಧುರವಾದ ಕಂಠ. ಒಮ್ಮೆ ಈತ ನಾಟಕದಲ್ಲಿ ಹಾಡಿದ್ದನ್ನು ಬಾಲಗಂಗಾಧರ ತಿಲಕರು ಕೇಳಿ ಬಹಳ ಮೆಚ್ಚಿಕೊಂಡರು. ಕಂಪನಿಯ ಯಜಮಾನರನ್ನು "ಈ ಬಾಲಗಂಧರ್ವ ಯಾರು?" ಎಂದರು. "ಬಿರುದು" ಎಂದು ಕೊಡದಿದ್ದರೂ ಲೋಕಮಾನ್ಯ ತಿಲಕರ ಬಾಯಿಂದ ಬಂದ ಬಾಲಗಂಧರ್ವ ಎಂಬ ಹೆಸರೇ ಸ್ಥಿರವಾಗಿ ನಾರಾಯಣರಾವ ಎನ್ನುವ



ಉಸ್ತಾದ ಫಯ್ಯಾಜ ಖಾನ

ಅವರ ಮೂಲ ಹೆಸರೇ ಜನಕ್ಕೆ ಮರೆತುಹೋಗಿ ಅವರು ಬಾಲಗಂಧರ್ವ ಎಂದೇ ಪ್ರಖ್ಯಾತರಾದರು.

ಪುಣೆಯ ಮರಾಠೀ ರಂಗಭೂಮಿಯ ಮೇಲೆ ಬೆಳಕು ಕಂಡಿದ್ದ ಇನ್ನೊಬ್ಬ ಕನ್ನಡ ನಟ ರಾಮಭಾವು ಕುಂದಗೋಳ್ಕರರು. ಸ್ತ್ರೀ ಪಾತ್ರಗಳನ್ನು ನಟಿಸುವುದರಲ್ಲಿ ಪ್ರಸಿದ್ಧರಾಗಿದ್ದರು. ಅವರು ಒಂದು ದಿನ ಹೀಗೆಯೇ ಸ್ತ್ರೀವೇಷ ಧರಿಸಿ ರಂಗದಮೇಲೆ ಬಂದರು. ಅವರನ್ನು ಕಂಡ ಕೂಡಲೇ ಕೆಲವರು ಕುಹಕಿಗಳು ಕಾನಡೀ ಅಪ್ಪಾ ಆಲಾರೇ ಕಾನಡಿ ಅಪ್ಪಾ (ಎಂದರೆ 'ಕನ್ನಡದವನು ಬಂದ, ಕನ್ನಡದವನು ಬಂದ') ಎಂದು ಕೂಗಿ ಕೊಂಡರು. ಇದನ್ನು ಕೇಳಿ ರಾಮಭಾವು ಅವರಿಗೆ ಅವಮಾನವಾದಂತಾಯಿತು. ಕೋಪದಿಂದ ಅವರು ತಾವು ಎಲ್ಲಿರುವೆನೆಂಬುದನ್ನೇ ಮರೆತರು. ನೇರವಾಗಿ ಪ್ರೇಕ್ಷಕರನ್ನು ಉದ್ದೇಶಿಸಿ ಆಹ್ವಾನ ಕೊಟ್ಟರು: "ನನ್ನನ್ನು ಕನ್ನಡದವನು ಎಂದು ತಮಾಷೆ ಮಾಡುತ್ತಿದ್ದೀರಲ್ಲವೇ ? ನನ್ನ ಹಾಗೆ ಹಾಡುವವರು ನಿಮ್ಮ ಮಹಾರಾಷ್ಟ್ರದಲ್ಲಿ ಯಾರಿದ್ದಾರೆ ? ಧೈರ್ಯವಿದ್ದರೆ ಮುಂದೆ ಬನ್ನಿ" ಎಂದು ಹೇಳಿ, ಅಭಿನಯವನ್ನು ಅಲ್ಲಿಗೇ ನಿಲ್ಲಿಸಿ, ತಲೆಯ ಮೇಲಿದ್ದ ಟೋಪನ್ ಕಿತ್ತೊಗೆದು, ಉಟ್ಟಿದ್ದ ಸೀರೆಯ ಸೆರಗನ್ನು ಸೊಂಟಕ್ಕೆ ಬಿಗಿದು ಬೈಠಕ್ಕಿಗೆ ಕುಳಿತರು. ನಾಟಕವನ್ನು ಸ್ಥಗಿತಗೊಳಿಸಿ ರಾಮಭಾವು ಎರಡು ಗಂಟೆಗಳ ಕಾಲ ಹಾಡಿದರು. ಆ ಸಂಗೀತದಲ್ಲಿ ತನ್ಮಯರಾಗಿದ್ದ ಪ್ರೇಕ್ಷಕರಿಗೆ ನಾಟಕ ನಿಂತುಹೋದುದೇ ಗೊತ್ತಾಗಲಿಲ್ಲ. 'ಕಾನಡೀ ಅಪ್ಪ' ಎಂದು ಕೂಗಿದ್ದ ಕುಹಕಿಗಳೆಲ್ಲಾ ಪಶ್ಚಾತ್ತಾಪಪಟ್ಟರು. ಕುಂದಗೋಳಕರರ ಕಲಾಪ್ರತಿಭೆಯನ್ನು ಮೆಚ್ಚಿದ ರಸಿಕ ವಿದ್ವಾಂಸರು ಒಬ್ಬೊಬ್ಬರಾಗಿ ವೇದಿಕೆಯ ಮೇಲೆ ಬಂದು ಅವರಿಗೆ ಹೂವಿನ ಹಾರಗಳನ್ನು ಹಾಕಿದರು. ಆಗಲೇ ಅವರೆಲ್ಲ ಸೇರಿ ರಾಮಭಾವುರವರಿಗೆ ಸವಾಯಿ ಗಂಧರ್ವ ಎಂದರೆ ಗಂಧರ್ವನಿಗಿಂತ ಹೆಚ್ಚಿನವ ಎನ್ನುವ ಬಿರುದನ್ನು ಕೊಟ್ಟರು.

ಕೆಲವು ವರ್ಷಗಳ ನಂತರ ಸವಾಯಿ ಗಂಧರ್ವ ಅವರು ಪುಣೆಯನ್ನು ಬಿಟ್ಟು ತಮ್ಮ ಊರಾದ ಕುಂದಗೋಳಕ್ಕೆ ಬಂದು ನೆಲಸಿದರು. ಅಲ್ಲಿ ಸಂಗೀತಾಭ್ಯಾಸ ಅಧ್ಯಾಪನಗಳಲ್ಲಿ ನಿರತರಾದರು. ಈ ಸಮಯದಲ್ಲಿ ಅವರಲ್ಲಿ

ಕಲಿತು ಕಿರಾನಾ ಘರಾನೆಯ ಅಧ್ವರ್ಯುಗಳೆಂದು ಇಡೀ ಭಾರತದಲ್ಲಿ ಖ್ಯಾತರಾಗಿರುವವರು ಭೀಮಸೇನ ಜೋಶಿ.

ಗರುಡಧ್ವನಿ ರಾಗದ ಕರ್ನಾಟಕೀ ಕೃತಿಯು ಧಾಟಿಯಲ್ಲಿ ಮರಾಠೀಯಲ್ಲಿ ರಚಿತವಾದ ಹಾಡೊಂದು ಸವಾಯಿ ಗಂಧರ್ವರಿಂದಾಗಿ ಮರಾಠಿ ರಂಗಭೂಮಿಯಲ್ಲಿ ಪ್ರಚಲಿತವಾಗಿತ್ತು. ಆಮೇಲೆ ಅದು ಮತ್ತೆ ಕನ್ನಡಕ್ಕೆ ಭಾಷಾಂತರವಾಗಿ ಉತ್ತರ ಕರ್ನಾಟಕದ ರಂಗಭೂಮಿಗೆ ಬಾದಿಳಿಯಿತು. ವೆಂಕಟರಾವ ರಾಮದುರ್ಗ ಎಂಬ ಒಬ್ಬ ಕಲಾವಿದರು 'ಸಂಶಯ ಸಾಮ್ರಾಜ್ಯ' ಎನ್ನುವ ಒಂದು ನಾಟಕದಲ್ಲಿ "ಕರ ಪಿಡಿದೆ ನಾ ಕರದೊಳ್ ಶುಭಾಂಗಿಯಾ" ಎನ್ನುವ ಹಾಡನ್ನು ಇದೇ ಧಾಟಿಯಲ್ಲಿ ಹಾಡುತ್ತಿದ್ದರು. ಒಂದು ರೀತಿಯಲ್ಲಿ ಕರ್ನಾಟಕದಿಂದ ಹೋದ ನಾಟಕ ಮತ್ತು ಸಂಗೀತಗಳೆರಡೂ ಮತ್ತೆ ಧಾರವಾಡಕ್ಕೆ ಬಂದವು. ಅವು ತಮ್ಮವೇ ಎಂಬುದನ್ನು ಮರೆತಿದ್ದ ಕನ್ನಡದ ಜನ ತಾವದನ್ನು ಮರಾಠಿಯಿಂದ ತೆಗೆದುಕೊಂಡೆವು ಎಂದು ಭಾವಿಸಿದರು.

ವೆಂಕಟರಾವ ರಾಮದುರ್ಗ ಅವರೂ ಸವಾಯಿ ಗಂಧರ್ವರ ಶಿಷ್ಯರೇ. ಇವರು "ವಿಶ್ವಕಲಾರಂಜನೀ" ನಾಟಕ ಸಂಸ್ಥೆಯಲ್ಲಿ "ಉಷಾ ಸ್ವಯಂವರ" ನಾಟಕದ ಅನಿರುದ್ಧನಾಗಿಯೂ, ಸೋನೂಬಾಯಿಯವರ ಕಂಪನಿಯ ನಾಟಕಗಳಲ್ಲಿ ನಾಯಕಪಾತ್ರಗಳನ್ನೂ ಅಭಿನಯಿಸುತ್ತಿದ್ದರು.

ಇವರಲ್ಲದೆ ಬೆಳಗಾವಿಯ ವಿ. ಎ. ಕಾಗಲಕರ ಅವರೂ ಸವಾಯಿ ಗಂಧರ್ವರ ಶಿಷ್ಯರೇ.

ಸವಾಯಿ ಗಂಧರ್ವರು ಕುಂದಗೋಳಕ್ಕೆ ಬಂದಿದ್ದರಿಂದ ನೆರೆಯೂರಾದ ಹುಬ್ಬಳ್ಳಿಯಲ್ಲಿದ್ದ ಗಂಗೂಬಾಯಿ ಹಾನಗಲ್ಲ ಅವರಿಗೆ ಹಿಂದೂಸ್ತಾನೀ ಸಂಗೀತ ಕಲಿಯುವುದು ಸಾಧ್ಯವಾಯಿತು.

ಗಂಗೂಬಾಯಿಯವರ ತಾಯಿ ಅಂಬಕ್ಕನವರೂ ಸಂಗೀತ ವಿದೂಷಿ. ಅವರು ಹಾಡುತ್ತಿದ್ದುದು ಕರ್ನಾಟಕ ಸಂಗೀತವನ್ನು. ಅನೇಕ ಕಚೇರಿಗಳನ್ನು ಯಶಸ್ವಿಯಾಗಿ ಮಾಡಿ ಕೀರ್ತಿ ಪಡೆದಿದ್ದರು. ಈಗ ಗಂಗೂಬಾಯಿ ಹಾನಗಲ್ಲರಿಗೆ ತಬಲಾ ಸಾಥಿಯಾಗಿರುವ ಶೇಷಗಿರಿ ಹಾನಗಲ್ಲರ ತಂದೆ ಅಂಬಕ್ಕನವರ ಸಂಗೀತಕ್ಕೆ ಮೃದಂಗ ಪಕ್ಕವಾದ್ಯ ನುಡಿಸುತ್ತಿದ್ದರು.

ಗಂಗೂಬಾಯಿಗೆ ಚಿಕ್ಕವಯಸ್ಸಿನಲ್ಲಿ ತಾಯಿ ಅಂಬಕ್ಕನವರೇ ಕರ್ನಾಟಕ ಸಂಗೀತವನ್ನು ಕಲಿಸಿದರು. ಧಾರವಾಡದಲ್ಲಿ ಹಿಂದುಸ್ತಾನೀ ಸಂಗೀತ ಹೆಚ್ಚು ಹೆಚ್ಚು ಪ್ರಚಲಿತವಾದಂತೆ ಅಂಬಕ್ಕನವರಿಗೂ ಅದರಲ್ಲಿ ಆಸಕ್ತಿ ಮೂಡಿತು. ತಮ್ಮ ಮಗಳಿಗೆ ಹಿಂದೂಸ್ತಾನೀ ಸಂಗೀತವನ್ನೇ ಕಲಿಸಬೇಕೆಂದು ಅವರು ನಿಶ್ಚಯಿಸಿದರು. ಗಂಗೂಬಾಯಿಯ ಕಂಠವೂ ಮಧುರವಾಗಿತ್ತು. ಗ್ರಾಮೊಫೋನ್ ರೆಕಾರ್ಡುಗಳ ಅಂಗಡಿಗೆ ಹೋಗಿ ಬಾಲಕಿ ಗಂಗೂಬಾಯಿ ಉಸ್ತಾದ ಕರೀಂಖಾನ ಮುಂತಾದ ಹಿಂದೂಸ್ತಾನೀ ಗಾಯಕರ ರೆಕಾರ್ಡುಗಳನ್ನು ಹಾಕು ವಂತೆ ಕೇಳಿಕೊಳ್ಳುತ್ತಿದ್ದರು. ಅಂಗಡಿಯವರು ಹುಡುಗಿಯ ಮುಗ್ಧತೆಗೆ ಮಧುರಕಂಠಕ್ಕೆ ಮಾರುಹೋಗಿದ್ದರು. ನೀನು ಒಂದು ಹಾಡು ಹೇಳಿದರೆ ನಾವು ನಿನಗೊಂದು ರೆಕಾರ್ಡ್ ಕೇಳಿಸುತ್ತೇವೆ ಎನ್ನುತ್ತಿದ್ದರು. ಆಗ ಗಂಗೂಬಾಯಿ ತಾನು ಕಲಿತಿದ್ದ ಕರ್ನಾಟಕದ ಕೃತಿಗಳನ್ನು ಹಾಡುತ್ತಿದ್ದಳು. ಅನಂತರ ಹಿಂದೂಸ್ತಾನಿ ಗಾಯಕರ ಧ್ವನಿಮುದ್ರಿಕೆ ಕೇಳಿ ಅದನ್ನೇ ಗುಣಗುಣಿ ಸುತ್ತಾ ಹಿಂತಿರುಗುತ್ತಿದ್ದಳು.

ಆಗ ಹುಬ್ಬಳ್ಳಿಯಲ್ಲಿ ಹುಲಗೂರು ಕೃಷ್ಣಾಚಾರ್ಯ ಎನ್ನುವವರು ರೇಲವೇಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಮೈಸೂರಿನವರು. ಕರ್ನಾಟಕ ಸಂಗೀತ ವಿದ್ವಾಂಸರು. ಸಂಗೀತದ ಬಗ್ಗೆ ಗ್ರಂಥವನ್ನೂ ಬರೆದಿದ್ದಾರೆ. ಕಿನ್ನರವೀಣಾ ವಾದ್ಯವನ್ನು ನುಡಿಸುತ್ತಿದ್ದರು. ಕೆಲಕಾಲ ಮೈಸೂರಿನ ಆಸ್ಥಾನ ವಿದ್ವಾಂಸರಾಗಿದ್ದರು. ಅವರು ಒಂದು ಸಲ ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಅಬ್ದುಲ ಕರೀಂಖಾನರ ಸಂಗೀತ ಕೇಳಿ ಆ ಸ್ವರಮಾಧುರ್ಯಕ್ಕೆ ಮನಸೋತರು. ಕರ್ನಾಟಕ ಸಂಗೀತವನ್ನು ಬಿಟ್ಟು ಕರೀಂಖಾನ ಸಾಹೇಬರ ಹತ್ತಿರ "ಗಂಡಾ" ಕಟ್ಟಿಸಿಕೊಂಡು ಅವರ ಶಿಷ್ಯ ರಾದರು. ಆಮೇಲೆ ಅಂಬಕ್ಕನವರು ಹುಲಗೂರು ಕೃಷ್ಣಾಚಾರ್ಯರಲ್ಲಿಯೇ ಗಂಗೂಬಾಯಿಯವರಿಗೆ ಹಿಂದೂಸ್ತಾನೀ ಸಂಗೀತವನ್ನು ಹೇಳಿಸಿದರು. ಆದರೆ ಕೃಷ್ಣಚಾರ್ಯರು ಕೇವಲ ಖಯಾಲ ಚೀಜುಗಳನ್ನು ಮಖ್ಖಿಕಾಮಖ್ಖೀ ಎನ್ನುವಂತೆ ತ್ಯಾಗರಾಜ ಕೀರ್ತನೆಗಳನ್ನು ಹಾಡುವ ಮಾದರಿಯಲ್ಲೇ ಕಲಿಸು ತ್ತಿದ್ದರು. ಇದು ಹಿಂದೂಸ್ತಾನೀ ಸಂಗೀತವನ್ನು ಕಲಿಸುವ ಸರಿಯಾದ ರೀತಿಯಲ್ಲ ಎಂದು ಅಂಬಕ್ಕನವರಿಗನ್ನಿಸಿತು. ಇಷ್ಟರಲ್ಲಿ ಸವಾಯಿ

ಗಂಧರ್ವರು ಕುಂದಗೋಳಕ್ಕೆ ಬಂದು ನೆಲಸಿದ್ದರು. ಗಂಗೂಬಾಯಿಯವರು ಆಗ ಅವರಲ್ಲಿ ಸಂಗೀತಾಭ್ಯಾಸವನ್ನು ಮುಂದುವರಿಸಿದರು. ಗಂಗೂಬಾಯಿಯವರಿಗೆ ಸಂಗೀತವಲ್ಲಿ ಆಸಕ್ತಿ ಎಷ್ಟಿತ್ತೆಂದರೆ ಹುಬ್ಬಳ್ಳಿಯಿಂದ ಕುಂದಗೋಳಕ್ಕೆ ಪ್ರತಿನಿತ್ಯ ರೈಲಿನಲ್ಲಿ ಹೋಗಿ ಬರುತ್ತಿದ್ದರು. ಅಂಬಕ್ಕನವರಾದರೂ ಮಗಳಿಗಾಗಿ ದೊಡ್ಡ ತ್ಯಾಗವನ್ನೇ ಮಾಡಿದರು. ತಾವು ಕರ್ನಾಟಕ ಸಂಗೀತ ಹಾಡುವುದು, ಮಗಳು ಹಿಂದೂಸ್ಥಾನೀ ಅಭ್ಯಾಸ ಮಾಡುವುದು ; ಇದರಿಂದ ಮಗಳ ಸಾಧನೆಯಲ್ಲಿ ತೊಡಕುಂಟಾಗಬಹುದೆಂಬ ಭಯದಿಂದ ಆಕೆ ಸಂಗೀತ ಕಛೇರಿ ಮಾಡುವುದನ್ನು—ಕಡೆಗೆ ಮನೆಯಲ್ಲಿ ಹಾಡಿಕೊಳ್ಳುವುದನ್ನೂ ನಿಲ್ಲಿಸಿಬಿಟ್ಟಳು. ತಾಯಿಯ ತ್ಯಾಗ, ಗಂಗೂಬಾಯಿಯ ಸಾಧನೆ ಫಲ ಕೊಟ್ಟಿತು. ಇಡೀ ಹಿಂದೂಸ್ಥಾನೀ ಸಂಗೀತಪ್ರಪಂಚದಲ್ಲಿ ಇಂದು ಗಂಗೂಬಾಯಿ ಹಾನಗಲ್ಲರ ಹೆಸರು ಪ್ರಖ್ಯಾತವಾಗಿದೆ. ಕಳೆದ ವರ್ಷ ಬಜ್ಮೆರೂಯೆ ಗಜಲೆ, ಎಂಬ ಸಂಗೀತಸಂಸ್ಥೆ ಗಾನವಿದ್ಯೆಯಲ್ಲಿ ಪರಿಣತಿ ಪಡೆದಿರುವ ಈ ಕಲಾವಿದೆಗೆ ಬೇಗಂ ಅಖ್ತರ ಪ್ರಶಸ್ತಿಯನ್ನು ಕೊಡಮಾಡಿತು.

ಮೈಸೂರು ಮಹಾರಾಜರು ಒಂದು ಸಲ ದಸರಾ ಉತ್ಸವಕ್ಕೆ ಪುಣೆಯಿಂದ ಉಸ್ತಾದ ರೆಹಮತಖಾನರೆಂಬ ಬೀನ ವಾದನಕಾರರನ್ನು ಕರೆಸಿದ್ದರು. ಅವರು ಬೀನವಾದ್ಯ ನುಡಿಸುವುದರಲ್ಲಿ ಪ್ರವೀಣರಾಗಿದ್ದುದಷ್ಟೇ ಅಲ್ಲ, ಆಧುನಿಕ ಸಿತಾರವಾದ್ಯವನ್ನು ಪರಿಷ್ಕಾರಗೊಳಿಸಿದ್ದರು. ಯಾರೆಂತಹ ದೊಡ್ಡ ವಿದ್ವಾಂಸರಾದರೂ ಮೈಸೂರಿಗೆ ಬಂದ ಮೇಲೆ ಅರಮನೆಯ ಪದ್ಧತಿಯಂತೆ ವೀಣೆ ಶೇಷಣ್ಣನವರ ಮುಂದೆ ನುಡಿಸಲೇಬೇಕಾಗುತ್ತಿತ್ತು. ಆ ಮೇರೆಗೆ ರೆಹಮತಖಾನರು ಶೇಷಣ್ಣನವರ ಮುಂದೆ ಬೀನ ಮತ್ತು ಸಿತಾರ ವಾದ್ಯಗಳನ್ನು ನುಡಿಸಿದರು. ಶೇಷಣ್ಣನವರು ಮೆಚ್ಚಿದ ಮೇಲೆ ಮಹಾರಾಜರ ಸಮ್ಮುಖದಲ್ಲಿ ನುಡಿಸಲು ಅವಕಾಶ ದೊರೆಯಿತು. ಉಸ್ತಾದರ ವಾದನದಿಂದ ಮಹಾರಾಜರಿಗೆ ಅಸಾಧಾರಣ ಸಂತೋಷವಾಯಿತು. ಅವರನ್ನೂ ಕೂಡ ತಮ್ಮ ಆಸ್ಥಾನ ವಿದ್ವಾಂಸರಾಗಿರುವಂತೆ ಕೇಳಿಕೊಂಡರು. ಆದರೆ ರೆಹಮತಖಾನರಿಗೆ ಅರಮನೆಯ ಕಟ್ಟುಪಾಡುಗಳಿಗೆ ಒಳಪಡುವುದು ಬೇಕಾಗಿರಲಿಲ್ಲ. ಆದ್ದರಿಂದ ಅವರು ಆಸ್ಥಾನ ವಿದ್ವಾಂಸರಾಗಿರಲು ಒಪ್ಪಲಿಲ್ಲ. ಗುಜರಾತಿನ ಭಾವನಗರದವರಾದರೂ ಪುಣೆಯಲ್ಲಿ ನೆಲಸಿದ್ದ ಅವರು ಅಲ್ಲಿಗೇ ಹಿಂತಿರುಗಲು

ಇಚ್ಛಿಸಿದರು. ಮಹಾರಾಜರು ಆದರ ಸತ್ಕಾರಗಳೊಂದಿಗೆ ಬೇಕಾದಷ್ಟು ಹಣವನ್ನೂ ಆಭರಣಗಳನ್ನೂ ಬಹುಮಾನವಾಗಿ ಕೊಟ್ಟರು. ಖಾನ ಸಾಹೇಬರು ಪುಣೆಗೆ ಗಾಡಿ ಹತ್ತಿದರು.

ಯಥಾಪ್ರಕಾರ ಧಾರವಾಡ ಹುಬ್ಬಳ್ಳಿಯ ಜನ ರೆಹಮತಖಾನರನ್ನು ತಮ್ಮಲ್ಲಿ ಇಳಿಸಿಕೊಂಡು ಸಂಗೀತ ಕಚೇರಿ ಏರ್ಪಡಿಸಿದರು.

ಧಾರವಾಡದ ಸೃಷ್ಟಿಸೌಂದರ್ಯ ಶಾಂತವಾತಾವರಣ ಹಿತಕರವಾದ ಹವಾಗುಣ ಅಲ್ಲಿನ ಜನಗಳ ಸ್ನೇಹಪರತೆ, ಕಲಾರಸಿಕತೆ ಇವುಗಳನ್ನು ಮೆಚ್ಚಿಕೊಂಡ ರೆಹಮತಖಾನರು ಕೆಲವು ದಿನ ಅಲ್ಲಿಯೇ ಉಳಿದರು. ಮುಂದೆ ಅವರು ಧಾರವಾಡ ಬಿಟ್ಟು ಹೋಗಲೇ ಇಲ್ಲ. ಅಂದಿನಿಂದ ಅವರಿಗೆ ಧಾರವಾಡದ ರೆಹಮತಖಾನರೆಂದೇ ಹೆಸರಾಯಿತು. ಅವರು ಸಹಿ ಮಾಡುತ್ತಿದ್ದುದು ರೆಹಮತಖಾನ ಧಾರವಾಡಕರ ಎಂದು. ಅವರ ವಂಶಜರು ಈಗಲೂ ಅಲ್ಲಿಯೇ ಇದ್ದುಕೊಂಡು ತಮ್ಮ ಘರಾಣೆಯ ಸಿತಾರವಾದನ ವಿದ್ಯೆಯನ್ನು ಶಿಷ್ಯರಿಗೆ ದಾನ ಮಾಡುತ್ತಿದ್ದಾರೆ. ರೆಹಮತಖಾನರ ಮೊಮ್ಮಗ ಬಾಲೇಖಾನರು ಧಾರವಾಡ ಆಕಾಶವಾಣಿಯ ನಿಲಯದಲ್ಲಿ ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ.

ಸವಾಯಿ ಗಂಧರ್ವರ ಗುರುಗಳಾಗಿದ್ದ ಅಬ್ದುಲ ಕರೀಮಖಾನರೂ, ಅನೇಕ ವರ್ಷಗಳ ಕಾಲ ಧಾರವಾಡದಲ್ಲಿ ನೆಲೆಸಿದ್ದರು. ಇವರು ಧಾರವಾಡಕ್ಕೆ ಬಂದುದೇ ಒಂದು ಕಥೆ.

ಅಬ್ದುಲ ಕರೀಮಖಾನರು ದಿಲ್ಲಿಯ ಸಮೀಪದ ಕಿರಾನಾ ಎನ್ನುವ ಊರಿನವರು. ಪ್ರವಾಸ ಮಾಡುತ್ತಾ ಇವರು ಬಡೋದೆಗೆ ಬಂದರು. ಆಗ ಅಲ್ಲಿ ಗಾಯಕವಾಡ ಮಹಾರಾಜರ ಆಳ್ವಿಕೆಯಿತ್ತು. ಕರೀಮಖಾನರು ಕೆಲಕಾಲ ಬಡೋದೆಯಲ್ಲಿಯೇ ಇದ್ದುಕೊಂಡು ಅನೇಕ ಕಚೇರಿಗಳನ್ನು ಮಾಡಿದರು. ರಾಜರ ಆಸ್ಥಾನದಲ್ಲೂ ಇವರ ಗಾಯನವಾಯಿತು. ಇವರ ಸಂಗೀತವನ್ನು ಕೇಳಿ ರಾಜಮನೆತನದ ಒಬ್ಬ ಹುಡುಗಿ — ತಾರಾಬಾಯಿ ಎಂದು ಅವಳ ಹೆಸರು — ಕರೀಮಖಾನರಲ್ಲಿ ಮೋಹಿತಳಾದಳು. ವಿಷಯ ತಿಳಿದ ರಾಜಪರಿವಾರದವರು ಕರೀಮಖಾನರನ್ನು ಸೆರೆಹಿಡಿಯಲು ಪ್ರಯತ್ನಿಸಿದರು. ಸುಳಿವು ತಿಳಿದ ಕರೀಮಖಾನರು, ತಾರಾಬಾಯಿಯೊಂದಿಗೆ ಪುಣೆಗೆ ಓಡಿ

ಬಂದರು. ಅಲ್ಲಿಂದ ಮಿರ್ಜಿಗೆ. ಅಲ್ಲಿಯೂ ಅಪಾಯದಿಂದ ಪಾರಾಗುವ ಸೂಚನೆ ಕಾಣಬರದಿದ್ದಾಗ ಹುಬ್ಬಳ್ಳಿಗೆ ಬಂದರು. ಮಿರ್ಜಿಯಿಂದ ಓಡಿ ಬಂದಾಗ ಕರೀಮಖಾನರು ಎಂತಹ ಸ್ಥಿತಿಯಲ್ಲಿದ್ದರೆಂದರೆ, ಅವರ ಮೈಮೇಲೆ ಹಾಕಿಕೊಳ್ಳಲು ಶರಟೂ ಇರಲಿಲ್ಲ! ಎಲೆ ಮಾರುವ ಅಂಗಡಿಯವನೊಬ್ಬ ಶರಟು ಹೊಲಿಸಿಕೊಟ್ಟು ಅವರನ್ನು ಹುಬ್ಬಳ್ಳಿಯ ಸಿದ್ಧಾರೂಢರ ಆಶ್ರಮಕ್ಕೆ ಕರೆದುತಂದ.

ಆಗ ಕರ್ನಾಟಕಕ್ಕೆ ಹಿಂದೂಸ್ತಾನೀ ಸಂಗೀತಗಾರರು ಯಾರೇ ಬರಲಿ, ಪಂಡಿತನಾಗಲಿ, ಉಸ್ತಾದನಾಗಲಿ, ಮೊಟ್ಟಮೊದಲು ಸಿದ್ಧಾರೂಢ ಮಠದಲ್ಲೇ ಹಾಡುವುದು ಪದ್ಧತಿಯಾಗಿತ್ತು. ಸಿದ್ಧಾರೂಢರ ಪಟ್ಟ ಶಿಷ್ಯರೊಬ್ಬರು, ಕಬೀರದಾಸರು, ಆ ಮಠದಲ್ಲಿಯೇ ಇದ್ದರು. ಅವರೊಬ್ಬ ಸಂತರು, ಜ್ಞಾನಿಗಳು. ಜೊತೆಗೆ ದೊಡ್ಡ ಸಂಗೀತಗಾರರು. ಅವರು ಯಾರು, ಎಲ್ಲಿಯವರು, ಯಾವಾಗ ಮಠಕ್ಕೆ ಬಂದರು ಎನ್ನುವ ಒಂದು ವಿಷಯವೂ, ಒಬ್ಬರಿಗೂ ತಿಳಿದಿರಲಿಲ್ಲ. ಅವರನ್ನು ಮೆಚ್ಚಿಸಿ, ಅವರಿಂದ ಆಶೀರ್ವಾದ ಪಡೆಯಲು, ಹಿಂದೂಸ್ತಾನೀ ಗಾಯಕರೆಲ್ಲ ಮೊಟ್ಟಮೊದಲು ಸಿದ್ಧಾರೂಢ ಮಠದಲ್ಲಿ ಹಾಡುತ್ತಿದ್ದರು. ಈ ಪರಿಪಾಠಕ್ಕೆ ಅನುಗುಣವಾಗಿ ಉಸ್ತಾದ ಅಬ್ದುಲ್ಲ ಕರೀಮಖಾನರೂ ಮಠದಲ್ಲಿ ಹಾಡಿದರು.

ಕರೀಮಖಾನರು ಸತತವಾಗಿ ಎರಡು ಗಂಟೆಗಳ ಕಾಲ ವಿದ್ವತ್ಪೂರ್ಣವಾಗಿ ಗಾಯನ ಮಾಡಿದರು. ಅನಂತರ ತಮ್ಮ ಗಾಯನದ ಬಗ್ಗೆ ಕಬೀರದಾಸರ ಪ್ರತಿಕ್ರಿಯೆ ಏನೆಂದು ತಿಳಿಯಲು ತಲೆ ಎತ್ತಿ ನೋಡಿದರು. ಆದರೆ ಅಷ್ಟು ಹೊತ್ತೂ ಕಬೀರದಾಸರ ಪಕ್ಕದಲ್ಲಿ ತಲೆ ತಗ್ಗಿಸಿಕೊಂಡು ಕುಳಿತಿದ್ದ ಒಬ್ಬ ವ್ಯಕ್ತಿ ಒಂದೇ ಒಂದು ಮಾತನ್ನು ಹೇಳಿದ : "ಗಲಾ ಅಚ್ಛಾ ಹೈ!" ಅಂದರೆ, 'ಕಂಠ ಚೆನ್ನಾಗಿದೆ' ಎಂದು. ಅವರು ಮತ್ತಾರೂ ಅಲ್ಲ, ಭೂಗಂಧರ್ವ ಎಂದು ಪ್ರಸಿದ್ಧರಾಗಿದ್ದ ಅವಧೂತ ರೆಹಮತಖಾನರು. (ಈ ಮುನ್ನ ಪರಿಚಿತರಾದ ಸಿತಾರಿಯಾ ರೆಹಮತಖಾನ ಧಾರವಾಡಕರರು ಇವರಲ್ಲ.)

ಭೂಗಂಧರ್ವ ರೆಹಮತಖಾನರು ಕೇವಲ 'ಕಂಠ ಚೆನ್ನಾಗಿದೆ' ಎಂದದ್ದು ಕರೀಮಖಾನರಿಗೆ ತುಂಬಾ ನೋವನ್ನುಂಟುಮಾಡಿತು. ಆದರೆ



ಭೂಗಂಧರ್ವ ರಹಮತಖಾನ

ರೆಹಮತಖಾನರ ಸಂಗೀತ ಕೇಳಿದಮೇಲಂತೂ ತಮ್ಮ ಹಾಡುಗಾರಿಕೆ ತೀರಾ ಸಪ್ಪೆ ಎನ್ನಿಸಿತು. ಆರು ತಿಂಗಳು ತಂಬೂರಿಯನ್ನೇ ಹಿಡಿಯಲಿಲ್ಲ. ಜೊತೆಯಲ್ಲಿದ್ದ ತಾರಾಬಾಯಿ ಕರೀಮಖಾನರ ಈ ಔದಾಸೀನ್ಯಕ್ಕೆ ಕಾರಣವನ್ನು ಕೇಳಿದರು. ಕರೀಮಖಾನರು ನಿಟ್ಟುಸಿರುಬಿಟ್ಟರು. ರೆಹಮತಖಾನರಂತೆ ಭೂಪ ರಾಗದ ಒಂದು ಗಾಂಧಾರ ಹಿಡಿಯಲು ನನ್ನಿಂದ ಸಾಧ್ಯವಿಲ್ಲ. ನನ್ನಂತಹವರಿಗೆ ಸಂಗೀತವೇಕೆ? ಎಂದರು. ಆದರೆ ಕಲಾವೈರಾಗ್ಯವು ಬಹುಕಾಲ ನಿಲ್ಲದು. ಆರು ತಿಂಗಳ ನಂತರ ಕರೀಮಖಾನರು ತಮ್ಮ ಸಂಗೀತದ ಸ್ವರೂಪವನ್ನೇ ಬದಲಾಯಿಸಿಕೊಂಡರು. ತಾನಗಳಿಗಿಂತ ರಾಗಾಲಾಪನೆಯಲ್ಲಿ ಹೆಚ್ಚು ಆಸಕ್ತಿ ವಹಿಸಿದರು.

ಕೆಲವು ವರ್ಷಗಳ ನಂತರ ತಾರಾಬಾಯಿ ಕರೀಮಖಾನರನ್ನು ಬಿಟ್ಟು ಹೊರಟುಹೋದಳು. ಈ ಆಘಾತವನ್ನು ಸಹಿಸಿಕೊಳ್ಳಲು ಅವರು ಅಸಮರ್ಥರಾದರು. ಹೊಟ್ಟೆ ಬಟ್ಟೆಗಳ ಕಡೆ ಗಮನವಿಲ್ಲದೆ ಹುಚ್ಚರಂತೆ ಸುತ್ತಾಡಲಾರಂಭಿಸಿದರು. ಹೀಗೆ ಸುತ್ತಾಡುತ್ತಾ ಅವರು ಸಿರ್ಸಿಗೆ ಬಂದಾಗ ಅಲ್ಲಿ ಗರುಡ ಸದಾಶಿವರಾಯರ ನಾಟಕ ಕಂಪನಿ ಬೀಡುಬಿಟ್ಟಿತ್ತು. ಸದಾಶಿವರಾಯರು ಕರೀಮಖಾನರನ್ನು ನೋಡಿದರು. ಒಬ್ಬ ಒಳ್ಳೆಯ ಕಲಾವಿದ ಹೀಗೆ ಗೊತ್ತುಗುರಿಯಿಲ್ಲದೆ ಅಲೆದಾಡುತ್ತಿರುವುದನ್ನು ನೋಡಿ ಅವರಿಗೆ ದುಃಖವಾಯಿತು. ಕರೀಮಖಾನರನ್ನು ಮೊದಲ ಸ್ಥಿತಿಗೆ ತರುವ ಜವಾಬ್ದಾರಿ ಹೊತ್ತರು ಸದಾಶಿವರಾಯರು. ಅವರನ್ನು ಒಂದು ಕೊಠಡಿಯಲ್ಲಿ ಕೂರಿಸಿ, ಬೇರೆಲ್ಲೂ ಹೋಗಲಾರದಂತೆ ಬೀಗ ಹಾಕಿದರು. ಅಚ್ಚುಕಟ್ಟಾದ ಊಟ ತಿಂಡಿಯ ವ್ಯವಸ್ಥೆ ಮಾಡಿದರು. ಬೇಜಾರಾದಾಗ ಹಾಡಿಕೊಳ್ಳಲು ಒಂದು ತಂಬೂರಿಯನ್ನು ಒದಗಿಸಿದರು. ಆಗಾಗ ತಮ್ಮ ನಾಟಕಗಳಿಗೆ ಕರೆದುಕೊಂಡು ಹೋಗುತ್ತಿದ್ದರು.

ಸದಾಶಿವರಾಯರ ವಿಶ್ವಾಸಪೂರ್ವಕವಾದ ಆರೈಕೆಯಲ್ಲಿ ಉಸ್ತಾದ ಕರೀಮಖಾನರು ಮತ್ತೆ ಮೊದಲಿನಂತಾದರು. ಸಂಗೀತದಲ್ಲಿ ಮನಸ್ಸನ್ನು ತೊಡಗಿಸಿದರು. ಕೆಲವು ದಿನಗಳ ನಂತರ ಮುಂಬಯಿಗೆ ಹೊರಟುಹೋದರು. ಅನೇಕ ಗ್ರಾಮೋಫೋನ್ ರಿಕಾರ್ಡುಗಳಿಗೆ ಧ್ವನಿ ನೀಡಿದರು.

ಕರ್ನಾಟಕ ಪದ್ಧತಿಯಂತೆ ಸ್ವರಪ್ರಸ್ತಾರ ಹಾಕಿ ಖಯಾಲ, ಠುಮರೀ ಮತ್ತು ಮರಾಠೀ ರಂಗಗೀತೆಗಳನ್ನು ಹಾಡಿದರು.

ಕರೀಮಖಾನರ ಶಿಷ್ಯರು ಸವಾಯಿ ಗಂಧರ್ವ. ಅವರ ಶಿಷ್ಯ ಗಾಡಗೋಳ ನೀಲಕಂಠಬುವಾ. ರಾಮನ ಪಾರ್ಟು ಮಾಡಿ ಒಂದೊಂದು ಹಾಡನ್ನೂ ಸವಿಸ್ತಾರವಾಗಿ ಹಾಡುತ್ತಿದ್ದರು. ಅವರೊಮ್ಮೆ ಗರುಡರ ನಾಟಕದಲ್ಲಿ ಪಾತ್ರ ವಹಿಸಿದರು. ಸಂಗೀತದ ವಿಷಯದಲ್ಲಿ ಗರುಡರದು ತುಂಬಾ ಕಟ್ಟುನಿಟ್ಟು. ಯಾರೇ ಆಗಲಿ ಒಂದು ಹಾಡನ್ನು ಐದು ಮಿನಿಟಿಗಿಂತ ಹೆಚ್ಚಿಗೆ ಹಾಡುವಂತಿಲ್ಲ. ಆದರೆ ಅಂದು ಗಾಡಗೋಳಿಯವರಿಗೆ ಮನೋಧರ್ಮ ಚೆನ್ನಾಗಿ ಕುದುರಿತ್ತು. ಐದು ಮಿನಿಟುಗಳಾದಮೇಲೆ ಗರುಡರು ಒಳಗೆ ಇದ್ದುಕೊಂಡು ಸೀಟಿ ಊದಿದರು. ಗಾಡಗೋಳಿಯರು ಹಾಡನ್ನು ನಿಲ್ಲಿಸ ಲಿಲ್ಲ. ಅವರ ಮುಂದಿನ ಪರದೆಯಿಳಿಸಲು ಆಜ್ಞೆ ಮಾಡಿದರು ಗರುಡರು. ಆ ಸೂಚನೆ ತಿಳಿದವರೇ ಗಾಡಗೋಳಿಯವರು ಎರಡು ಹೆಜ್ಜೆ ಮುಂದೆ ಬಂದರು. ಗರುಡರು ಅದಕ್ಕೆ ಮುಂದಿನ ಪರದೆ ಬಿಡಿಸಲೆಳಸಿದರು. ಬುವಾ ಅದನ್ನೂ ದಾಟಿದರು. ಹೀಗೆ ನಾಲ್ಕಾರು ಪರದೆಗಳ ಆಳವನ್ನು ಮೀರಿ ಗಾಡಗೋಳಿಯವರು ಅಂಕದ ಪರದೆಗೂ ಮುಂದೆ ಬಂದು ಹಾಡತೊಡಗಿ ದರು. ಆಗ ಗರುಡರ ಕೋಪ ನಗುವಾಗಿ ಪರಿವರ್ತಿತವಾಯಿತು. ಗಾಯಕ–ನಟ ತನಗೆ ತೃಪ್ತಿಯಾಗುವಷ್ಟು ಹಾಡಲೆಂದುಕೊಂಡು ಪ್ರೇಕ್ಷಕ ರೊಂದಿಗೆ ತಾವೂ ತಲೆದೂಗುತ್ತ ನಿಂತರು.

ಶಿರಹಟ್ಟಿ ವೆಂಕೋಬರಾಯರ ಮತ್ತು ಸವಣೂರ ವಾಮನರಾಯರ ಕಂಪನಿಗಳಲ್ಲಿ ಮಾತ್ರ ಸಂಗೀತಕ್ಕೆ ತುಂಬಾ ಅವಕಾಶವಿತ್ತು. ವೆಂಕೋಬ ರಾಯರ ಕಂಪನಿಯಲ್ಲಿ ಮರೋಳ ನೀಲಪ್ಪ ಎನ್ನುವವರೊಬ್ಬರಿದ್ದರು. ಅವರು ಸಂಗೀತದ ಘನ ವಿದ್ವಾಂಸರು. ಗಾಯನ ವಾದನಗಳೆರಡರಲ್ಲೂ ಎತ್ತಿದ ಕೈ. ಅವರ ತಮ್ಮ ಮರೋಳ ರಾಮಣ್ಣನವರು ನಾಟಕದಲ್ಲಿ ಪಾತ್ರ ವಹಿಸುತ್ತಿದ್ದರು. ಇವರೂ ಒಳ್ಳೆಯ ಸಂಗೀತಗಾರರು. ಒಂದು ಹಾಡನ್ನು ಆರಂಭಿಸಿದರೆ ಅರ್ಧಗಂಟೆ, ಮುಕ್ಕಾಲುಗಂಟೆ ತಡೆಯಿಲ್ಲದೆ ಹಾಡು ತ್ತಿದ್ದರು. ಜನ ಆನಂದದಿಂದ ಅವರ ಸಂಗೀತವನ್ನು ಕೇಳುತ್ತಿದ್ದರು. ಮುಂದಾಚೆ ರಂಗನಾಥಭಟ್ಟರ ಕಂಪನಿಯಲ್ಲಿ ಪಾಂಡೇಶ್ವರ ಕಾಳಿಂಗ ಎಂಬ

ಬಾಲನಟನಿದ್ದ. ಆತ ಮರೋಳ ರಾಮಣ್ಣನವರ ಶಿಷ್ಯ. ಭಾವಗೀತೆ ಹಾಡುವುವರಲ್ಲಿ ಪ್ರಸಿದ್ಧರಾಗಿರುವ ಪಿ. ಕಾಳಿಂಗರಾಯರೆ ಆ ಪಾಂಡೇಶ್ವರ ಕಾಳಿಂಗ. ಅವರೊಂದು ಕಾಲಕ್ಕೆ ಶಾಸ್ತ್ರೀಯ ಸಂಗೀತ ಕಚೇರಿಗಳನ್ನು (ಹಿಂದೂಸ್ತಾನೀ) ಮಾಡುತ್ತಿದ್ದರು.

ಶಿರಹಟ್ಟಿ ನಾಗಪ್ಪ ಎಂಬವರು ಒಳ್ಳೆಯ ತಬಲಾ ವಾದಕರು. ಇವರ ವಿದ್ವತ್ತು ಎಷ್ಟಿತ್ತೆಂದರೆ ಇವರ ತಬಲಾ ಸಾಥಿಯೊಂದಿಗೆ ಹಾಡಲು ದೊಡ್ಡ ದೊಡ್ಡ ಸಂಗೀತ ವಿದ್ವಾಂಸರೂ ಹೆದರುತ್ತಿದ್ದರು. ನಾಗಪ್ಪನವರು "ದಕ್ಷಿಣಾದಿ" ಪದ್ಧತಿಯಲ್ಲಿ ತಬಲಾ ನುಡಿಸುತ್ತಿದ್ದರು. ಅಬ್ದುಲ ಕರೀಮಖಾನರಂತಹವರನ್ನು ತಾಳದಲ್ಲಿ ಉರುಳಿಸಿದ್ದ ಘಟ್ಟಿಗರಿವರು. ೧೯೩೫ ರಿಂದ ರಾಣೆಬೆನ್ನೂರಿನಲ್ಲಿ ವಾಸಿಸುತ್ತಿದ್ದರು. ಶಿರಹಟ್ಟಿ ಕಂಪನಿಯಲ್ಲಿ ಕೆಲ ಕಾಲ ಕವಿ-ನಟರಾಗಿದ್ದ ಪಂಡಿತ ಕವಲಿಯವರೂ ಆಗ ರಾಣೆಬೆನ್ನೂರಿನಲ್ಲಿಯೇ ಇದ್ದರು. ಮಲ್ಲಿಕಾರ್ಜುನ ಮನಸೂರರು ಅವರ ಮನೆಗೆ ಬಂದಾಗ, ಅವರ ಸಂಗೀತ ಕಚೇರಿಯ ಏರ್ಪಾಡಾಯಿತು. ಶಿರಹಟ್ಟಿ ನಾಗಪ್ಪ ಮನಸೂರರೊಂದಿಗೆ ತಬಲಾ ನುಡಿಸಿದರು. ಏನೇ ಮಾಡಿದರೂ ಮನಸೂರರ ತಾಳ ತಪ್ಪಿಸುವುದು ಸಾಧ್ಯವಾಗಲಿಲ್ಲ. ಆಗ ನಾಗಪ್ಪನವರು ಮೆಚ್ಚಿಗೆಯಿಂದ "ಹಿಂದೂಸ್ತಾನೀ ಸಂಗೀತಗಾರರಲ್ಲಿ ತಾಳದಲ್ಲಿ ಗಂಡೆಂದರೆ ನೀನೊಬ್ಬನೇ" ಎಂದು ಮನಸೂರರನ್ನು ಮುಕ್ತಕಂಠದಿಂದ ಹೊಗಳಿದರು.

ಮನಸೂರರು ಆಗ ಗ್ವಾಲಿಯರ ಘರಾಣೆಯ ಗಾಯಕರು ಮಾತ್ರವಾಗಿದ್ದರು. ಆ ಮುನ್ನ ನತ್ಥನಖಾನರಿಂದಾಗಿ ಆಗ್ರಾ, ಸವಾಯಿ ಗಂಧರ್ವರಿಂದಾಗಿ ಕಿರಾನಾ ಘರಾಣೆಗಳು ಕರ್ನಾಟಕದಲ್ಲಿ ಪ್ರವೇಶ ಮಾಡಿದ್ದುವು. ಇನ್ನು ಗ್ವಾಲಿಯರ ಘರಾಣೆ ಪ್ರವೇಶ ಮಾಡಿದ ಕತೆಯೂ ಸ್ವಾರಸ್ಯಕರವಾಗಿದೆ.

ಹಿಂದೂಸ್ತಾನೀ ಸಂಗೀತಕ್ಕೆ ಕಾರಣಪುರುಷ ತಾನಸೇನ. ಅವನು ಗ್ವಾಲಿಯರಿನವನು ; ಪ್ರಸಿದ್ಧ ಧ್ರುಪದ ಗಾಯಕ. ಅವನ ಅನಂತರ ಅವನ ಸಂತತಿಯಲ್ಲಿ ಕೆಲವರು ಗಾಯಕರಾದರು, ಕೆಲವರು ವಾದಕರಾದರು. ಸರಸ್ವತಿ ತಾನಸೇನನ ಮಗಳು. ಅಳಿಯ ನೌಬತಖಾನ ಒಳ್ಳೆಯ ಬೀನಕಾರ. ಬಿಲಾಸಖಾನ, ಸೂರತಸೇನ, ತಾನತರಂಗಖಾನ ಇವರೆಲ್ಲ ತಾನಸೇನನ

ಗಂಡು ಮಕ್ಕಳು. ಇವರೆಲ್ಲ ಮುಂದೆ ಉತ್ತಮ ಗಾಯಕರೆನ್ನಿಸಿಕೊಂಡರು ಸದಾರಂಗ ತಾನಸೇನನ ಮಗಳ ಕಡೆಯಿಂದ ಎಂಟನೇ ತಲೆಯುವನು. ಅಮೀರ ಖುಸ್ರೂವಿನಿಂದ ಹುಟ್ಟಿದ ಖಯಾಲ ಸಂಗೀತಕ್ಕೆ ಸದಾರಂಗನ ಕಾಲದಲ್ಲಿ ಒಂದು ನಿಶ್ಚಿತರೂಪ ಬಂತು. ಶೈಲಿಗೆ ಹೆಚ್ಚಿನ ಒನಪು, ಒಯ್ಯಾರಗಳು ಬಂದವು. ಸದಾರಂಗ ಮತ್ತು ಅವನ ಶಿಷ್ಯ ಅದಾರಂಗ ಇಬ್ಬರೂ ದಿಲ್ಲಿಯ ಮಹಮ್ಮದಶಾ ರಂಗೀಲೆಯ ಆಸ್ಥಾನದಲ್ಲಿದ್ದರು. ನತ್ಥನ ಪೀರಭಕ ಎನ್ನುವವ ಈ ಪರಂಪರೆಯಲ್ಲಿ ಬಂದವನು. ಗ್ವಾಲಿಯರ ಘರಾಣೆಗೆ ಇವನೇ ಮೂಲಪುರುಷ. ಇವನ ಮಕ್ಕಳು, ಶಿಷ್ಯರು, ಆ ಘರಾನೆಯ ಸಂಗೀತವನ್ನು ಬೆಳೆಸಿದರು. ಈ ಶೈಲಿಯ ಸಂಗೀತಗಾರರಲ್ಲಿ ಹದ್ದೂಖಾನ, ಹಸ್ಸೂಖಾನ, ನತ್ಥೂಖಾನರೆಂಬ ಸೋದರರು ಮುಖ್ಯರು.

ಈ ಸೋದರರಲ್ಲಿ ಹದ್ದೂಖಾನ ಹಸ್ಸೂಖಾನರು ಗ್ವಾಲಿಯರಿನ ರಾಜದರ್ಬಾರಿನಲ್ಲಿ ಗಾಯಕರಾಗಿದ್ದರು. ರಾಜನಷ್ಟೇ ವೈಭವದಿಂದ ಬಾಳುತ್ತಿದ್ದವರು. ಆಸ್ಥಾನಕ್ಕೆ ಆನೆಯ ಮೇಲೆ ಅಂಬಾರಿಯಲ್ಲಿ ಬರುತ್ತಿದ್ದರು. ಇವರದು ಭಾರೀ ವ್ಯಕ್ತಿತ್ವ. ಕಡಾಯಿಯಲ್ಲಿ ಹಾಲು ಕಾಯಿಸಿ ಕೆನೆಯನ್ನು ಮಾತ್ರ ತಿಂದು ಹಗಲಿರುಳೂ ಸಂಗೀತಾಭ್ಯಾಸ ಮಾಡುತ್ತಿದ್ದರು. ತಾನಗಳು ಕಾಳು ಸುರಿದ ಹಾಗೆ ಅಡೆತಡೆಯಿಲ್ಲದೆ ಒಂದೇ ಸಮನೆ ಬರಬೇಕು (ದಾನೇದಾರ ತಾನ) ಎನ್ನುತ್ತಿದ್ದರು. ಒಂದು ಸಲ ಹದ್ದೂಖಾನರು ಆಗ್ರಾಕ್ಕೆ ಹೋಗಿದ್ದರು. ಆಗ್ರಾದ ಆಸ್ಥಾನ ಗವಾಯಿಯ ಜೊತೆ ತಾಜಮಹಲ ನೋಡಲು ಹೋದರು. ಬೆಳುದಿಂಗಳಿನಲ್ಲಿ ಅದರ ಗುಮ್ಮಟವನ್ನು ಕಂಡವರೇ ಹೀಗೆ ಉದ್ಗರಿಸಿದರು —ಹದ್ದೂಖಾನ : ವಾಹ ಭಯೀ ವಾಹ. ಯಃ ತಾಜಮಹಲ ಕೀ ಗುಂಬಜ ಭೀ ಕ್ಯಾ ಹೈ. ಯಃ ತೋ ಹಮಾರೀ ತಾನ ಕಾ ಏಕ ದಾನಾ ಹೈ. (ಈ ತಾಜಮಹಲಿನ ಗುಮ್ಮಟವೊ, ನಾನು ಹಾಡುವ ತಾನಗಳ ಒಂದು ಕಾಳಿನಂತಿದೆ.) ಇಂಗ್ಲಿಷಿನಲ್ಲಿ ಆರ್ಕಿಟೆಕ್ಚರ ಈಜ ಫ್ರೋಜನ ಮ್ಯೂಜಿಕ್—ಎಂದು ಹೇಳುವುದುಂಟು. ಎಂದರೆ ವಾಸ್ತುಶಿಲ್ಪ ಹೆಪ್ಪುಗಟ್ಟಿದ ಸಂಗೀತವೆಂದು. ಆದರೆ ಹದ್ದೂಖಾನರು ತಾಜಮಹಲನ್ನು ತಮ್ಮ ಇಡೀ ಸಂಗೀತವೆನ್ನದೆ ತಮ್ಮ ತಾನೊಂದರ ಒಂದು ಕಾಳು ಮಾತ್ರವೆಂದರು. ಎಂತಹ ಆತ್ಮವಿಶ್ವಾಸ.

ಈ ಹದ್ದೂಖಾನರ ಮಗ ರಹಮತಖಾನ. ವಂಶಪಾರಂಪರ್ಯವಾಗಿ ಬಂದ ಸಂಗೀತದ ಜೊತೆ ದೈವದತ್ತವಾದ ಕಂಠವೂ ಇತ್ತು. ಇವರು ಭೂಗಂಧರ್ವ ಎಂದೇ ಖ್ಯಾತರಾಗಿದ್ದರು. ರಹಮತಖಾನರಿಗೆ ಮೊದಲಿನಿಂದಲೂ ಸಾಧು ಸಂತರ ಸಹವಾಸದ ಕಡೆ ಆಕರ್ಷಣೆ ಹೆಚ್ಚು. ಸನ್ಯಾಸಿಗಳು ಎಲ್ಲಿದ್ದರೂ ಹೋಗಿ ಭೇಟಿಯಾಗಿ ಬರುವ ಅಭ್ಯಾಸ. ಒಂದು ಸಲ ಹೀಗೆ ಸುತ್ತಾಡುತ್ತಿರುವಾಗ, ಗ್ವಾಲಿಯರಿನ ಸಮೀಪದ ಗುಹೆಯೊಂದರಲ್ಲಿ ಒಬ್ಬ ಸಾಧು ಇದ್ದಾರೆಂಬ ಸುದ್ದಿ ತಿಳಿಯಿತು. ಅವರಿಗೆ ಗಾಯನ ಕೇಳಿಸಲೆಂದು ತಂಬೂರಿಯೊಂದಿಗೆ ಗುಹೆಯೊಳಗೆ ಹೋದವರು ನಾಲ್ಕು ಗಂಟೆ ಈಚೆಗೆ ಬರಲಿಲ್ಲ. ಒಳಗಡೆ ಏನಾಯಿತೋ ಯಾವ ಮಾತು ಕಥೆ ನಡೆಯಿತೊ ಯಾರಿಗೂ ತಿಳಿಯದು, ಹೊರಗಡೆ ಬಂದಮೇಲೆ ರಹಮತಖಾನರ ನಡವಳಿಕೆಯೇ ಬದಲಾಯಿತು. ತಂಬೂರಿಯನ್ನು ಚರಂಡಿಗೆಸೆದರು. ಮೈಮೇಲೆ ಎಚ್ಚರವಿಲ್ಲದವರಂತೆ ಮನೆ, ಮಡದಿ, ಮಕ್ಕಳು—ಎಲ್ಲವನ್ನೂ ಬಿಟ್ಟು ಹೊರಟು ಹೋದರು. ಇಪ್ಪತ್ತು ವರ್ಷ ಪತ್ತೆಯಿರಲಿಲ್ಲ. ಅವರ ಪತ್ತೆಯಾದದ್ದು ಆಕಸ್ಮಿಕವೇ.

ವಿಜಾಪುರದ ವಿಷ್ಣುಪಂತ ಛತ್ರೆ ಹದ್ದೂಖಾನರ ಶಿಷ್ಯ. ರಹಮತಖಾನರ ಸಮವಯಸ್ಕ. ಗುರುಗಳಲ್ಲಿ ಸಂಗೀತ ಕಲಿಯುತ್ತಿದ್ದಾಗ ಛತ್ರೆ ರಹಮತಖಾನರನ್ನು ಕರೆಯುತ್ತಿದ್ದುದು 'ಭಯ್ಯಾ' (ಅಣ್ಣ) ಎಂದೇ. ಹಿಂದೂಸ್ತಾನದಲ್ಲಿಯೇ ಮೊಟ್ಟಮೊದಲ ಸರ್ಕಸ್ ಕಂಪನಿಯನ್ನು ಆರಂಭಿಸಿ ಅದ್ಧೂರಿಯಿಂದ ನಡೆಸಿಕೊಂಡು ಬಂದ ಸಾಹಸಿ ಛತ್ರೆ.

ಒಂದು ಸಲ ಬನಾರಸಿನಲ್ಲಿ ಛತ್ರೆಯ ಸರ್ಕಸ ಕಂಪನಿ ಇತ್ತು. ಕಸರತ್ತಿನ ಹುಡುಗಿಯರಿಗೆ ಫ್ರಾಕ ಹೊಲಿಸಲು ಬಟ್ಟೆ ಕೊಳ್ಳಲೆಂದು ಅಂಗಡಿಗೆ ಹೋಗಿದ್ದ ಛತ್ರೆ ರಸ್ತೆಯಲ್ಲಿ ಹುಚ್ಚನಂತೆ ಹೋಗುತ್ತಿದ್ದ ವ್ಯಕ್ತಿಯನ್ನು ಕಂಡ. ಅವರೇ ರಹಮತಖಾನರೆಂದು ಗುರುತಿಸಿದ. ಕಾಡಿ ಬೇಡಿ ತನ್ನೊಂದಿಗೆ ಕರೆತಂದ. ಅಂದಿನಿಂದ ರಹಮತಖಾನರು ಸರ್ಕಸ ಕಂಪನಿಯಲ್ಲಿಯೇ ಇರತೊಡಗಿದರು. ಛತ್ರೆ ತನ್ನ ಸರ್ಕಸ್ಸಿನ ಇತರ ಹುಲಿಗಳೊಂದಿಗೆ ಇದೊಂದು ಸಂಗೀತದ ಹುಲಿಯನ್ನು ಸಾಕಿಕೊಂಡಿದ್ದ. ಛತ್ರೆ

ತಮ್ಮೂರಾದ ವಿಜಾಪುರಕ್ಕೆ ಬಂದ, ಮುಂದೆ ಹುಬ್ಬಳ್ಳಿಗೆ. ಸಿದ್ಧಾರೂಢರ ಪರಮಭಕ್ತ ಆತ.

ಛತ್ರೆ ಕಂಪನಿಯಲ್ಲಿ ಒಂದು ಹುಲಿ ಇತ್ತು. ಜನರಿಗೆ ಅದರ ಆಟ ಒಂದು ವಿಶೇಷ ಆಕರ್ಷಣೆ ಜನ ಮುಖ್ಯವಾಗಿ ಅದರ ಕೆಲಸ ನೋಡುವುದಕ್ಕೆ ಸರ್ಕಸ್ಸಿಗೆ ಬರುತ್ತಿದ್ದರು. ಅದನ್ನು ಕಂಡರೆ ಛತ್ರೆಗೆ ವಿಶೇಷ ಪ್ರೇಮ. ಒಂದು ಸಲ ಅದು ಹೇಗೋ ಆ ಹುಲಿ ಪಂಜರದಿಂದ ತಪ್ಪಿಸಿಕೊಂಡು ಓಡಿ ಹೋಯಿತು. ಎಷ್ಟು ಹುಡುಕಿದರೂ ಸಿಗಲಿಲ್ಲ. ಛತ್ರೆಗೆ ಚಿಂತೆಯಾಯಿತು. ಆಗ ಅವನು ಹೋಗಿ ಸಿದ್ಧಾರೂಢರ ಪಾದಕ್ಕೆ ಬಿದ್ದ. 'ನನ್ನ ಹುಲಿಯನ್ನು ನನಗೆ ಕೊಡಿಸಿರಿ' ಎಂದು ಅಂಗಲಾಚಿದ. ಸಿದ್ಧಾರೂಢರು ಕ್ಷಣಕಾಲ ಕಣ್ಣುಮುಚ್ಚಿ ದಿವ್ಯದೃಷ್ಟಿಯಿಂದ ನೋಡಿದರು. ಅನಂತರ ತಿಳಿಸಿದರು. "ನಿನ್ನ ಹುಲಿ ಇಲ್ಲಿಂದ ಎಂಬತ್ತು ಮೈಲಿ ದೂರದ ದಾಂಡೇಲಿ ಕಾಡಿನಲ್ಲಿದೆ. ಮೂರು ಹರಳು ಮಂತ್ರಿಸಿ ಕೊಡುತ್ತೇನೆ. ಅವನ್ನು ತೆಗೆದುಕೊಂಡು ಹೋಗಿ ನೀನು ಆ ಕಾಡಿನಲ್ಲಿ ಇಂತಹದೊಂದು ಜಾಗದಲ್ಲಿ ಮರದ ಕೆಳಗೆ ನಿಂತುಕೊಂಡು, 'ಆರೂಢ ಆರೂಢ' ಎಂದು ಕೂಗು. ಆಗ ಹುಲಿ ಕಾಡಿನೊಳಗಿಂದ ಬಂದು ಕಾಣಿಸಿಕೊಳ್ಳುತ್ತದೆ. ಒಂದು ಹರಳನ್ನೊಗೆ. ನಿನ್ನ ಮೇಲೆ ಬೀಳಲು ಹವಣಿಸುತ್ತದೆ. ಆಗ ಇನ್ನೊಂದು ಹರಳನ್ನೊಗೆ, ಶಾಂತವಾಗುತ್ತದೆ. ಮುಖದ ಮೇಲೆ ಮೂರನೆಯ ಹರಳನ್ನೊಗೆದು "ಆರೂಢಪ್ಪನವರು ಕರೆಯಲಿಕ್ಕೆ ಹತ್ತಿದ್ದಾರೆ ಬಾರಪ್ಪಾ" ಎಂದು ಹೇಳಿ ಹೊರಟು ಬಿಡು. ನಾಯಿಯಂತೆ ನಿನ್ನನ್ನು ಹಿಂಬಾಲಿಸಿ ಬರುವುದು"—ಎಂದು. ಛತ್ರೆ ಹಾಗೆಯೇ ಮಾಡಿದನಂತೆ, ಅವನ ಹುಲಿ ಸಿಕ್ಕಿತಂತೆ. ಸಿದ್ಧಾರೂಢರ ಮಹಿಮೆಯನ್ನು ಮನಗಂಡಿದ್ದ ರಹಮತಖಾನರು ಸ್ವಾಮಿಗಳು ಯಾವಾಗ ಕೇಳಬೇಕೆಂದರೂ ಮನದಣಿಯೇ ಹಾಡುತ್ತಿದ್ದರು. ಇಲ್ಲವಾದರೆ ತಮಗೆ ಲಹರಿ ಬಂದಾಗಲಲ್ಲದೆ ಯಾರು ಹೇಳಿದರೂ ಹಾಡುತ್ತಿರಲಿಲ್ಲ.

ರಹಮತಖಾನರು ಗಾಯನದಂತೆಯೇ ಅಧ್ಯಾತ್ಮದಲ್ಲಿಯೂ ಮೇಲಿನ ಸ್ವರವನ್ನು ತಲುಪಿದ್ದವರು. ಲೌಕಿಕದ ಕಡೆ ಅವರಿಗೆ ಗಮನವೇ ಇರಲಿಲ್ಲ. ಸದಾ ಸಂಗೀತದಲ್ಲಿ ತನ್ಮಯರಾಗಿರುತ್ತಿದ್ದರು. ಒಂದು ರೀತಿಯಲ್ಲಿ ಇವರೊಬ್ಬ ಜಾಲಿಯಾ, ಎಂದರೆ ಅವಧೂತ. ಯಾವ ರಾಜಮಹಾರಾಜರು ಎಷ್ಟು

ಸಂಬಳ ಕೊಡುತ್ತೇನೆಂದರೂ ಆಸ್ಥಾನ ವಿದ್ವಾಂಸರಾಗಿ ಹೋಗಲು ಒಪ್ಪಲಿಲ್ಲ. ಸದಾ ಛತ್ರೆಯ ಸರ್ಕಸ ಕಂಪನಿಯೊಂದಿಗೇ ದೇಶವಲ್ಲೆಲ್ಲ ಸುತ್ತಾಡುತ್ತಿದ್ದರು. ಸದಾ ಅಫೀಮನ್ನು ಸೇವಿಸಿ ಅಮಲಿನಲ್ಲಿಯೇ ಇರುತ್ತಿದ್ದರು. ತಾನೇ ಅಂಗಡಿಗೆ ಹೋಗಿ ಗೋಧಿ ತಂದು ತಾವೇ ಬೀಸಿ ರೊಟ್ಟಿ ಮಾಡಿ, ಚೀಲದ ಲ್ಲಿಟ್ಟು ನೇತುಹಾಕಿರುತ್ತಿದ್ದರು. ಇಷ್ಟಬಂದಾಗ ತಿನ್ನುವುದು, ಹಾಲು ಕುಡಿ ಯುವುದು, ಹಾಡುವುದು. ರೊಟ್ಟಿ ಒಣಗಿದರೂ ಅದರ ಕಡೆ ಲಕ್ಷ್ಯವಿರಲಿಲ್ಲ. ಹದಿನೈದು ದಿನವಾಗಲಿ, ತಿಂಗಳಾಗಲಿ, ಮುಗಿಯುವವರೆಗೆ ಆ ರೊಟ್ಟಿಯೇ ಇವರ ಹೊಟ್ಟೆಗಾಧಾರ. ಇವರೊಂದಿಗೆ ಇಲಿ ಜೊಂಡಿಂಗಗಳಿಗೂ ಅದೇ ಆಹಾರ.

ತಮ್ಮ ಬಗ್ಗೆ ಸ್ವಲ್ಪವೂ ಲಕ್ಷ್ಯವಿಲ್ಲದಿದ್ದ ರಹಮತಖಾನರು, ಸ್ವಲ್ಪ ವಾದರೂ ಲೌಕಿಕದ ಕಡೆ ದೃಷ್ಟಿ ಹರಿಸಲಿ ಎನ್ನುವ ಉದ್ದೇಶದಿಂದ ಛತ್ರೆ, ಗೋವದಿಂದ ಒಬ್ಬ ಹೆಂಗಸನ್ನು ಕರೆದುಕೊಂಡು ಬಂದು ರಹಮತಖಾನರ ಸೇವೆಗೆ ನಿಲ್ಲಿಸಿದ. ಆಕೆಗೆ ತಿಂಗಳಿಗೆ ೧೦೦೦ ರೂಪಾಯಿಗಳ ಸಂಬಳ ಗೊತ್ತುಮಾಡಿದ. ಆದರೆ ರಹಮತಖಾನರಿಗೆ ಆಕೆಯ ಕಡೆ ಗಮನವೇ ಹೋಗಲಿಲ್ಲ. ಆಕೆಯಿಂದ ಸೇವೆ ಮಾಡಿಸಿಕೊಳ್ಳುವುದು ಹಾಗಿರಲಿ, ಆಕೆ ತಮ್ಮ ಮನೆಯಲ್ಲೇ ಇದ್ದಾಳೆ ಎನ್ನುವ ಗಮನವೂ ಅವರಿಗೆ ಬರಲಿಲ್ಲ. ಆರು ತಿಂಗಳ ನಂತರ ಆಕೆ ಛತ್ರೆಗೆ ಹೇಳಿ ತಮ್ಮ ಊರಿಗೆ ಹೊರಟುಹೋದಳು. ರಹಮತಖಾನರು ನಿಜವಾದ ವಿರಾಗಿ ಎಂಬುದನ್ನು ಛತ್ರೆ ಅರ್ಥಮಾಡಿ ಕೊಂಡ.

ರಹಮತಖಾನರು ರಾಗಗಳಲ್ಲಿ ಮಗ್ನರಾಗಿದ್ದೂ ವಿರಾಗಿಯೇ; ಹೆಣ್ಣು, ಹೊನ್ನು ಯಾವುದರ ಕಡೆಯೂ ಅವರ ಲಕ್ಷ್ಯವಿರಲಿಲ್ಲ. ಕೆಲವೊಮ್ಮೆ ಛತ್ರೆಯ ಬಲವಂತಕ್ಕೆ ಅವರು ಶ್ರೀಮಂತರ ಮನೆಗಳಲ್ಲಿ ಹಾಡಿದ್ದುಂಟು. ಶ್ರೀಮಂತರು ಆ ಸಂಗೀತವನ್ನು ಮೆಚ್ಚಿ ತಟ್ಟೆಯ ತುಂಬ ಸಾವಿರ ಸಾವಿರ ಬೆಳ್ಳಿಯ ರೂಪಾಯಿ ನಾಣ್ಯವನ್ನಿಟ್ಟು ತಂದೊಪ್ಪಿಸುತ್ತಿದ್ದರು. ರಹಮತ ಖಾನರು ಅದರಲ್ಲಿ ಎರಡು ನಾಣ್ಯಗಳನ್ನು ಮಾತ್ರ ತೆಗೆದುಕೊಂಡು ಟೊಂಕಕ್ಕೆ ಸಿಕ್ಕಿಸಿಕೊಂಡು ಮಿಕ್ಕವನ್ನು ಛತ್ರೆಗೇ ಕೊಡುವಂತೆ ತಿಳಿಸಿಬಿಡುತ್ತಿದ್ದರು. ಆ ಎರಡು ರೂಪಾಯಿ ತೆಗೆದುಕೊಳ್ಳುತ್ತಿದ್ದುದು ಅಫೀಮಿಗಾಗಿ. ಉಳಿದ

ಹಣವನ್ನು "ಉಸ್ ಬೊಮ್ಮನ ಕೋ ದೇದೊ ; ಉಸೇ ದಾನ ಲೇನೇ ಕಾ ಹಕ್ ಹೈ"—ಎಂದು ಹೇಳಿ ಲಕ್ಷಾಧೀಶ್ವರ ಛತ್ರೆಗೆ 'ದಾನ' ಕೊಡಿಸುತ್ತಿದ್ದರು.

ಅಫೀಮಿನ ಚಟ ಮಾತ್ರ ರಹಮತಖಾನರಿಗೆ ಬಹಳವಾಗಿಯೇ ಇತ್ತು. ಇದರಿಂದ ಅವರ ದೇಹಾರೋಗ್ಯ ಕೆಡಬಹುದೆಂಬ ಭಯದಿಂದ ಒಮ್ಮೆ ಛತ್ರೆ ಅವರಿಗೆ ಅಫೀಮಿಗೆ ದುಡ್ಡು ಕೊಡಲಿಲ್ಲ. ಸಿಟ್ಟಿನಿಂದ ಖಾನರು ಹುಲಿಯ ಬೋನಿನೊಳಗೇ ನುಗ್ಗಲು ಪ್ರಯತ್ನಿಸಿದರು. ಛತ್ರೆ ಬಂದು ಅವರನ್ನು ಸಮಾಧಾನಪಡಿಸಬೇಕಾಯಿತು.

ಒಮ್ಮೆ ಛತ್ರೆ ಕಂಪನಿ ಕೊಲ್ಲಾಪುರಕ್ಕೆ ಹೋಗಿತ್ತು. ದೊಡ್ಡ ವಿದ್ವಾಂಸರಾದ ಅಲ್ಲಾದಿಯಾಖಾನರು ಅಲ್ಲಿ ಆಸ್ಥಾನ ಸಂಗೀತಗಾರರು. ಛತ್ರೆ ಕಂಪನಿ ಕೊಲ್ಲಾಪುರಕ್ಕೆ ಹೋಗಿದ್ದಾಗ ಅಲ್ಲಾದಿಯಾಖಾನರಿಗೆ ಆರೋಗ್ಯ ಸರಿಯಿಲ್ಲದೆ ಅವರು ತಮ್ಮ ಊರಾದ 'ಉನಿಯಾರಾ'ಕ್ಕೆ ಹೋಗಿದ್ದರು. ಛತ್ರೆ ಕೊಲ್ಲಾಪುರ ಮಹಾರಾಜರನ್ನು ಕಂಡು 'ನನ್ನ ಹುಲಿ (ರಹಮತಖಾನ) ಬಂತೆಂದು ನಿಮ್ಮ ಹುಲಿ ಹೆದರಿ ಓಡಿಹೋಯಿತು' ಎಂದು ತಮಾಷೆ ಮಾಡಿದ. ಮಹಾರಾಜನಿಗೆ ಅಸಮಾಧಾನವಾಯಿತು. ಕಾಗದ ಬರೆದು ಕೂಡಲೇ ಹೊರಟುಬರುವಂತೆ ಅಲ್ಲಾದಿಯಾಖಾನರಿಗೆ ತಿಳಿಸಿದ. ರಾಜಾಜ್ಞೆಯಂತೆ ಅವರು ಕೊಲ್ಲಾಪುರಕ್ಕೆ ಬಂದರು. ಅಲ್ಲಾದಿಯಾಖಾನರು ರಹಮತಖಾನರು ಇಬ್ಬರೂ ರಾಜದರ್ಬಾರಿನಲ್ಲಿ ತಮ್ಮ ತಮ್ಮ ವಿದ್ವತ್ತನ್ನು ಪ್ರದರ್ಶಿಸಿದರು. ಇಬ್ಬರೂ ಶ್ರೇಷ್ಠ ಗಾಯಕರು ಪರಸ್ಪರರನ್ನು ಮೆಚ್ಚಿಕೊಂಡು ಗೌರವಿಸಿದರು. ಮಹಾರಾಜ ತನ್ನ ಶಾಲನ್ನೇ ಹೊದಿಸಿ ರಹಮತಖಾನರನ್ನು ಗೌರವಿಸಿದ. ದರಬಾರಿನಿಂದ ಹೊರಟಾಗ ಮಳೆ ಸುರಿಯುತ್ತಿತ್ತು. ಹೊರಗಡೆಯಲ್ಲಿ ಛತ್ರೆಯ ಕುದುರೆ ಗಾಡಿ ನಿಂತಿತ್ತು. ಆದರೆ ಅಲ್ಲಿಯವರೆಗೆ ಕೆಸರು ತುಳಿಯುತ್ತ ನಡೆದುಹೋಗ ಬೇಕಲ್ಲ! ಛತ್ರೇ ಅಂದೇ ರಹಮತಖಾನರಿಗೆ ಹೊಸ ಚಪ್ಪಲಿ ಕೊಡಿಸಿದ್ದ. ಅವು ಕೆಡಬಾರದೆಂದು ಭೂಗಂಧರ್ವರು ಮಹಾರಾಜರು ಹೊದಿಸಿದ್ದ ಶಾಲನ್ನು ಹಾಸಿ ಅದರ ಮೇಲೆ ನಡೆದುಕೊಂಡು ಹೋದರು !

ಛತ್ರೆ ಬದುಕಿರುವವರೆಗೆ ರಹಮತಖಾನರು ಸರ್ಕಸ್ ಕಂಪನಿಯಲ್ಲಿಯೇ ಇದ್ದರು. ಅವನು ಸತ್ತಮೇಲೆ ಕುರಂದವಾಡ ಸಂಸ್ಥಾನದ ಮಹಾರಾಜ ತುಂಬಾ ಒತ್ತಾಯ ಮಾಡಿ ತಮ್ಮ ಆಸ್ಥಾನಕ್ಕೆ ಕರೆದುಕೊಂಡು ಹೋದ. ಅಲ್ಲಾದರೂ ಅವರು ಸ್ವೇಚ್ಛೆಯಾಗಿಯೇ ಇರುತ್ತಿದ್ದರು. ಮನಸ್ಸು ಬಂದರೆ ಹಾಡುತ್ತಿದ್ದರು. ಇಲ್ಲವಾದರೆ ಇಲ್ಲವೇ ಇಲ್ಲ. ಮಹಾರಾಜನೇ ಅವರಿದ್ದಲ್ಲಿಗೆ ಬಂದು ಅವರು ಹಾಡಿದಾಗ ಕೇಳಿಕೊಂಡು ಹೋಗುತ್ತಿದ್ದ. ಕಾಲಕ್ರಮೇಣ ಮಹಾರಾಜ ತೀರಿಕೊಂಡ. ಅನಂತರ ಪಟ್ಟಕ್ಕೆ ಬಂದ ಯುವರಾಜನಿಗೆ ಸಂಗೀತದಲ್ಲಿ ಅಷ್ಟಾಗಿ ಅಭಿಮಾನವಿರಲಿಲ್ಲ. ರಹಮತಖಾನರಿಗಾಗಿ ವ್ಯರ್ಥವಾಗಿ ಹಣ ಖರ್ಚು ಮಾಡುವುದು ಅವನಿಗೆ ಇಷ್ಟವಾಗಲಿಲ್ಲ. ಅವರನ್ನು ಕರೆಸಿ, ಇನ್ನು ನಿಮ್ಮ ವ್ಯವಸ್ಥೆ ನೀವು ಮಾಡಿಕೊಳ್ಳಿ—ಎಂದ. ರಹಮತಖಾನರು ಕ್ಷಣಕಾಲ ಕಣ್ಣು ಮುಚ್ಚಿ ಧ್ಯಾನಿಸಿ, ಏನನ್ನೋ ಕಂಡವರಂತೆ ಕಣ್ಣುಬಿಟ್ಟು ನಾಳೆ ಮಧ್ಯಾಹ್ನ ಮೂರು ಗಂಟೆಗೆ ಹೊರಟುಹೋಗುತ್ತೇನೆ ಎಂದರು. ರಾತ್ರಿಯೆಲ್ಲಾ ಯೋಚನೆ ಮಾಡಿದ ಯುವರಾಜ. ಮಾರನೆಯ ದಿನ ಅವರನ್ನು ಕರೆಸಿ, ಹೋಗಲಿ, ಇಲ್ಲೇ ಇದ್ದುಬಿಡಿ—ಎಂದ. ಆದರೆ ರಹಮತಖಾನರೊಪ್ಪಲಿಲ್ಲ. ಅಷ್ಟರಲ್ಲಿ ಅವರನ್ನು ಕರೆಯಲು ಮಿರಜಿಯ ಆಸ್ಥಾನದಿಂದ ಪಲ್ಲಕ್ಕಿ ಬಂದಿತು. ಭೂಗಂಧರ್ವರು ಅಲ್ಲಿಗೆ ಹೊರಟುಹೋದರು.

## ಬೇಗಡೆಯ ಕೆಂಪೇಗೌಡ

ರಹಮತಖಾನರ ಸಮಕಾಲೀನರಾಗಿದ್ದು ಸ್ವಭಾವವೈಚಿತ್ರ್ಯದಲ್ಲಿ ಅವರ ಸಮಾನರಾಗಿದ್ದ ಬೆಂಗಳೂರ ಕೆಂಪೇಗೌಡರ ಚರಿತ್ರೆ ಇಲ್ಲಿ ಅಪ್ರಸ್ತುತವೆನಿಸಲಾರದು. ಕೆಂಪೇಗೌಡರು ಭೈರವಿ ಕೆಂಪೇಗೌಡರೆಂದೂ ಹೆಸರಾಗಿದ್ದಾರೆ. ಬೇಗಡೆ ಮತ್ತು ಭೈರವಿ ರಾಗಗಳನ್ನು ಅವರು ಅನನ್ಯಸದೃಶವಾಗಿ ಹಾಡುತ್ತಿದ್ದರು. ಬೇಗಡೆ ಅವರ ಗುರುಗಳಾದ ಪಟ್ಟಣಂ ಸುಬ್ರಹ್ಮಣ್ಯ ಅಯ್ಯರರ ಜೀವದ ರಾಗವಾಗಿತ್ತು. ಅದನ್ನು ಅವರು ಇನ್ನಾರಿಗೂ ಇಲ್ಲದ ರೀತಿಯಲ್ಲಿ ಈ ಶಿಷ್ಯನಿಗೆ ಧಾರೆಯೆರೆದಿದ್ದರು. ಅಯ್ಯರರ ಪತ್ನಿ ಆಗಾಗ ಕೆಂಪೇಗೌಡರಿಗೆ

ಕೆಂಪೂ ನೀನೆಲ್ಲೋ ಯಾವುದೋ ಜನ್ಮದಲ್ಲಿ ನಮ್ಮ ಮಗನಾಗಿದ್ದಿರಬೇಕು ಕಾಣಯ್ಯ! ಇಲ್ಲವಾದರೆ ನಮ್ಮಿಬ್ಬರಿಗೂ ನಿನ್ನಲ್ಲಿ ಇಷ್ಟು ವಾತ್ಸಲ್ಯ ಉಂಟಾಗಲು ಕಾರಣವೇನು ? ಎನ್ನುತ್ತಿದ್ದರಂತೆ. ಪಟ್ಟಣಂ ಸುಬ್ರಹ್ಮಣ್ಯ ಅಯ್ಯರಲ್ಲಿಗೆ ಮೈಸೂರ ವಾಸುದೇವಾಚಾರ್ಯರು ಕಲಿಯಲು ಹೋಗುವ ಮುಂಚೆಯೇ ಗೌಡರು ಅಯ್ಯರರಲ್ಲಿ ಶಿಷ್ಯವೃತ್ತಿ ಮಾಡುತ್ತಿದ್ದರು. ವಾಸುದೇವಾಚಾರ್ಯರು ಆರು ವರ್ಷ ಕಲಿತು ಮೈಸೂರಿಗೆ ಮರಳಿದ ಮೇಲೂ ಕೆಂಪೇಗೌಡರು ಇನ್ನೂ ತಿರುವಯ್ಯಾರಿನಲ್ಲಿದ್ದುಕೊಂಡು ಗುರುಸೇವೆ ಮಾಡುತ್ತ ಸಂಗೀತ ಕಲಿಯುತ್ತಲೇ ಇದ್ದರು. ಸಂಗೀತವೊಂದು ಸಾಗರ, ಅದಕ್ಕೆ ಪಾರವುಂಟೇ ?

ಕೆಂಪೇಗೌಡರು ಕೊಯಮತ್ತೂರು ಮುಂತಾದ ಮಹಾನಗರಗಳಲ್ಲಿ ಕಚೇರಿ ಮಾಡಿ ಬರುತ್ತಿದ್ದರು. ಸಂಭಾವನೆಯಾಗಿ ಬಂದ ಹಣ, ಆಭರಣ, ಬಟ್ಟೆ ಬರೆ—ಎಲ್ಲವನ್ನು ಗುರುಗಳ ಪಾದದೆಡೆ ಸುರಿಯುತ್ತಿದ್ದರು. ಸುಬ್ರಹ್ಮಣ್ಯ ಅಯ್ಯರರಲ್ಲಿಗೆ ಬೇರೆ ಬೇರೆ ಸಂಸ್ಥಾನಿತರ ಆಶ್ರಿತರಾದ ಶಿಷ್ಯರು ಬಂದಿದ್ದರೂ ಕೆಂಪೇಗೌಡರು ಕೊಟ್ಟಷ್ಟು ಹಣವನ್ನು ಆ ಗುರುಗಳಿಗೆ ಯಾವ ಸಂಸ್ಥಾನಿತನೂ ಕೊಡಲಿಲ್ಲವಂತೆ.

ರಹಮತಖಾನರಂತೆ ಗೌಡರು ಕೂಡಾ ರಾಗದಲ್ಲಿ ಮುಳುಗಿದ್ದೂ ವಿರಾಗಿಯಾಗಿದ್ದರು. ಹೊನ್ನು ಹೆಣ್ಣು ಮಣ್ಣುಗಳ ಮೋಹ ಅವರನ್ನು ಮುಟ್ಟಲಿಲ್ಲ. ಅವರು ನಾದಯೋಗಿ. ಅವರ ಕಚೇರಿಗಳೆಂದರೆ ಶ್ರೋತೃಗಳಿಗೆ ರಸದೌತಣವಾಗಿರುತ್ತಿತ್ತು. “ಕೆಂಪೇಗೌಡರ ತಾನಗಳೆಂದರೆ ಸೀಮೆ ಕಮಲಗಳನ್ನು ಸೂರ್ಯಪ್ರಕಾಶದಲ್ಲಿ ತೂರಿಬಿಟ್ಟುದನ್ನು ಕಂಡ ಅನುಭವ ವಾಗುತ್ತಿತ್ತು!” ಎಂದು ವಾಸುದೇವಾಚಾರ್ಯರು ತಮ್ಮ ಸಹಪಾಠಿಯ ಗುಣಗಾನ ಮಾಡಿದ್ದಾರೆ. ಸೇಲಂ, ಕೊಯಮತ್ತೂರು, ಮೈಸೂರು, ಬೆಂಗಳೂರು—ಎಲ್ಲಿಯೇ ಕೆಂಪೇಗೌಡರ ಗಾಯನವಿರಲಿ, ರಸಿಕ ಶ್ರೋತೃಗಳು ಗಾನಮಂದಿರದೊಳಗೆ ನೆರವಿ ನೆರವಿಯಾಗಿ ಸೇರಿ ಗಾನಸುಧಾರಸವನ್ನು ಸವಿಯುತ್ತಿದ್ದರು. ಅದೇ ಸಮಯಕ್ಕೆ ಅಷ್ಟೇ ದೊಡ್ಡ ಜನಜಂಗುಳಿ ಮಂದಿರದ ಹೊರಗಡೆಯಲ್ಲಿ ಸೇರುತ್ತಿತ್ತು. ಕಾರಣ, ಕಚೇರಿ ಮುಗಿದ ಮೇಲೆ ದೊರೆತ ಸಂಭಾವನೆಯನ್ನು—ಅದು ಸಾವಿರವಿರಲಿ, ಎರಡು ಸಾವಿರ



ರಾಮಕೃಷ್ಣ ವರೆ್ಛ ಬುವಾ

ವಿರಲಿ — ಕೆಂಪೇಗೌಡರು ಹೊರಗೆ ಬಂದು ಎಲ್ಲವನ್ನು ತೂರುತ್ತಿದ್ದರು. ಜನ ಹೆಕ್ಕಿಕೊಳ್ಳುತ್ತಿದ್ದರು. ನಾದಯೋಗಿ ವಿರಾಗಿಯನ್ನು ಹರಸುತ್ತಿದ್ದರು.

ಗೌಡರು ಎಲ್ಲ ಹಣವನ್ನೂ ತೂರುತ್ತಿರಲಿಲ್ಲ. ಎರಡು ರೂಪಾಯಿಗಳನ್ನು—ಕೇವಲ ಎರಡನ್ನು—ಕೈಯಲ್ಲಿ ಉಳಿಸಿಕೊಳ್ಳುತ್ತಿದ್ದರು. ಅದೂ ಕುಡಿತಕ್ಕಾಗಿ. ರಹಮತಖಾನರಿಗೆ ಅಫೀಮಿದ್ದಂತೆ ಕೆಂಪೇಗೌಡರಿಗೆ ಮದಿರೆ. ಮದಿರೆ ಮಾತ್ರ, ಮದಿರಾಕ್ಷಿಯರಲ್ಲ. ಇವರನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಬಯಸಿದ ಮೈಸೂರಿನ ನಾಯಕಸಾನಿಯರನೇಕರು ತಮ್ಮ ಮನೆಗೆ ಕರೆಸಿ ವಿದೇಶೀ ಮಧುವನ್ನು ತರಿಸಿ ಕುಡಿಸಿ ಹಾಡಿಸುತ್ತಿದ್ದರು. ಕೇಳಿ ಕಲಿತ್ತುಕೊಳ್ಳುತ್ತಿದ್ದರು. ಆದರೆ ಗುರುಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಮಾತ್ರ, ಗೌಡರು : "ಅಮ್ಮಾ, ನನಗೆ ತಿನ್ನಲು 'ಕುಡಿಯಲು' ಕೊಟ್ಟ ತಾಯಿ ನೀನು ನೀನು ನನ್ನ ತಾಯಿ !" ಎಂದು ಎದ್ದು ಹೊರಡುತ್ತಿದ್ದರು.

ಮೈಸೂರೊಡೆಯರು ಆಸ್ಥಾನವಿದ್ವಾಂಸ ಪದವಿಯನ್ನು ಕೊಡಮಾಡಿದಾಗ ಕೆಂಪೇಗೌಡರು ಸ್ವೀಕರಿಸಲಿಲ್ಲ. ರಹಮತಖಾನರೂ ಹೀಗೆಯೆ. ಇವರಿಬ್ಬರ ಜೀವನಸಾದೃಶ್ಯ ಅನನ್ಯಸದೃಶ.

ರಹಮತಖಾನರು ಕರ್ನಾಟಕದಲ್ಲಿ ಬಂದಿದ್ದು ಹಾಡಿ ಗ್ವಾಲಿಯರ ಘರಾನೆಯ ಗಾಯನ ವೈಭವದ ಸಕೃದ್ದರ್ಶನ ಮಾಡಿಸಿ ಹೋದರು. ಇಲ್ಲಿ ಅವರ ಶಿಷ್ಯಪರಂಪರೆ ಬೆಳೆಯಲಿಲ್ಲ; ಆದರೆ ಅವರ ಅಣ್ಣ ನಿಸಾರ ಹುಸೇನ ಖಾನರ ಶಿಷ್ಯರು ವಝೇ ಬುವಾ ಅದನ್ನಿಲ್ಲಿ ಬೆಳೆಸಿದರು.

ರಾಮಕೃಷ್ಣ ಬುವಾ ವಝೆ ಅವರು ಸಂಗೀತವನ್ನು ತಮ್ಮ ಕೈವಶ ಮಾಡಿಕೊಂಡಿದ್ದು ನಿರಂತರ ಸಾಧನೆಯಿಂದ, ಕಠಿಣವಾದ ತಪಸ್ಸಿನಿಂದ ಎಂದರೂ ಸಲ್ಲುತ್ತದೆ.

ಸಾವಂತವಾಡಿ ಸಂಸ್ಥಾನದ ಓರ್ಝರೇ ಎಂಬ ಗ್ರಾಮ ರಾಮಕೃಷ್ಣ ಬುವಾ ಅವರ ಜನ್ಮಸ್ಥಳ. ಹತ್ತು ತಿಂಗಳ ಶಿಶುವಾಗಿದ್ದಾಗಲೇ ಅವರ ತಂದೆ ತೀರಿಕೊಂಡರು. ತಾಯಿ ಬಹು ಕಷ್ಟದಿಂದ ಕಾಗಲ ಎಂಬ ಪಟ್ಟಣದಲ್ಲಿ ಆವರಿವರ ಮನೆಯಲ್ಲಿ ಕೆಲಸ ಮಾಡಿಕೊಂಡು ಮಗನನ್ನು ಬೆಳೆಸಿದಳು. ಮಗ ಚೆನ್ನಾಗಿ ಓದಿ ದೊಡ್ಡ ಕೆಲಸಕ್ಕೆ ಸೇರಲೆಂಬುದು ತಾಯಿಯ ಆಸೆ.

ಆದರೆ ಬಾಲಕ ರಾಮಕೃಷ್ಣನಿಗೆ ಶಾಲೆಯ ಪಾಠ ತಲೆಗೇ ಹತ್ತಲಿಲ್ಲ. ಅವನ ಗಮನವೆಲ್ಲಾ ಸಂಗೀತದ ಕಡೆಗೆ. ಕಡೆಗೆ ತಾಯಿ ತಾನೇ ಸೋಲೊಪ್ಪಿಕೊಂಡು, ಕಾಗಲಿನಲ್ಲಿಯೇ ಇದ್ದ ಆಸ್ಥಾನಗಾಯಕ ಬಲವಂತರಾವ ಫೋಹೋರೇ ಎಂಬ ವಿದ್ವಾಂಸರಲ್ಲಿ ಮಗನನ್ನು ಸಂಗೀತಾಭ್ಯಾಸಕ್ಕಾಗಿ ಸೇರಿಸಿದಳು. ಬಲವಂತರಾವ ಅವರು ರಾಮಕೃಷ್ಣನಿಗೆ ಪಾಠವನ್ನೇನೋ ಆರಂಭಿಸಿದರು. ಆದರೆ ಮೂರು ವರ್ಷಗಳಾದರೂ ಸರಳೆ ಜಂಟಿ ವರಸೆಗಳನ್ನು ಬಿಟ್ಟು ಮುಂದೆ ಹೋಗಲೇ ಇಲ್ಲ. ಹುಡುಗತನದಿಂದ ರಾಮಕೃಷ್ಣ "ಎಷ್ಟು ದಿನ ನಾನು ಹೀಗೆಯೇ ಸರಿಗಮಪದನಿಸ ತೀಡುತ್ತಿರಬೇಕು" ಎಂದು ಕೇಳಿಯೇಬಿಟ್ಟ. ಗುರುಗಳಿಗೆ ಸಿಟ್ಟು ಬಂತು. ರಾಮಕೃಷ್ಣನ ಪಾಠವೂ ಅಲ್ಲಿಯೇ ನಿಂತಿತು. ಆದರೆ ಅವನು ಎದೆಗುಂದಲಿಲ್ಲ. ಮಾಲವಣದಲ್ಲಿ ನೆಲಸಿದ್ದ ಕನ್ನಡಿಗರಾದ ವಿಷ್ಣು ಅಣ್ಣಾ ಹಡಪದ ಎಂಬುವರಲ್ಲಿಗೆ ಹೋದ. ರಾಮಕೃಷ್ಣನ ಕಂಠಮಾಧುರ್ಯವನ್ನು ಮೆಚ್ಚಿಕೊಂಡ ವಿಷ್ಣು ಅಣ್ಣಾನವರು ಅವನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಭೈರವ, ಯಮನ ಮುಂತಾದ ಪ್ರಾರಂಭಿಕ ರಾಗಗಳಲ್ಲಿ ದ್ರುತಲಯದ ಚೀಜುಗಳನ್ನು ಹೇಳಿಕೊಟ್ಟರು.

ಅಷ್ಟರಲ್ಲಿ ತಾಯಿಗೆ ಮಗನ ಮದುವೆ ಮಾಡಬೇಕೆನ್ನಿಸಿತು. ಮಾಲವಣದಿಂದ ಕಾಗಲಿಗೆ ಕರೆಸಿಕೊಂಡು ಹನ್ನೆರಡನೆಯ ವಯಸ್ಸಿನಲ್ಲಿಯೇ ರಾಮಕೃಷ್ಣನಿಗೆ ಮದುವೆಯನ್ನು ಮಾಡಿಬಿಟ್ಟಳು.

ತಾನು ಇನ್ನೂ ಕಲಿಯಬೇಕು, ಸಂಗೀತದಲ್ಲಿ ಪ್ರಭುತ್ವಗಳಿಸಿಕೊಳ್ಳಬೇಕು ಎನ್ನುವ ಆಸೆ ರಾಮಕೃಷ್ಣನನ್ನು ಬಿಟ್ಟಿರಲಿಲ್ಲ. ಮನೆಯಲ್ಲಿ ಹೇಳದೆ ಕೇಳದೆ ಮತ್ತೆ ಗುರುಗಳನ್ನು ಹುಡುಕಿಕೊಂಡು ಹೊರಟ. ಕೈಯಲ್ಲಿ ಕಾಸಿರಲಿಲ್ಲ. ಬರಿಗಾಲಲ್ಲೇ ನಡೆದು ಮುನ್ನೂರು ಮೈಲಿಗಳ ದೂರದಲ್ಲಿದ್ದ ಪುಣೆಯನ್ನು ತಲುಪಿದ. ಅಲ್ಲಿಂದ ಮುಂಬಯಿಗೆ ಹೋದ. ಮುಂದೆ ಅವರಿವರ ಸಹಾಯದಿಂದ ಬನಾರಸಿಗೂ ಬಂದ. ಬನಾರಸಿನಲ್ಲಿ ಛತ್ರೆ ಸರ್ಕಸ ಕಂಪನಿಯಿತ್ತು. ರಹಮತಖಾನರೇನೋ ಆ ಕಂಪನಿಯಲ್ಲೇ ಇದ್ದರು. ಆದರೆ ಅವರು ಯಾರಿಗೂ ಪಾಠ ಹೇಳಿಕೊಡುವವರಲ್ಲ. ಆ ಸಮಯದಲ್ಲಿ ರಹಮತಖಾನರ ಚಿಕ್ಕಪ್ಪ ನತ್ಥೂಖಾನರ ಮತ್ತು ಮಗ, ನಿಸಾರ ಹುಸೇನ



ನಿಸಾರ ಹುಸೇನ ಖಾನ

ಖಾನರೂ ರಹಮತಭಾಯಿಯನ್ನು ಕಾಣಲು ಬಂದಿದ್ದರು. ಅವರು ಗ್ವಾಲಿಯರ ಸಂಸ್ಥಾನದ ಆಸ್ಥಾನ ವಿದ್ವಾಂಸರಾಗಿದ್ದರು. ಅವರು ರಾಮಕೃಷ್ಣನಿಗೆ ಪಾಠ ಹೇಳಿಕೊಡಲು ಒಪ್ಪಿದರು. ತಮ್ಮ ಜೊತೆ ಗ್ವಾಲಿಯರಿಗೆ ಕರೆದುಕೊಂಡು ಹೋದರು. ಅವರಿಗೆ ಹಿಂದೂಧರ್ಮದಲ್ಲಿ ಅಸಾಧಾರಣ ನಂಬಿಕೆ. ಮಡಿ ಮೈಲಿಗೆಗಳನ್ನು ಕೂಡ ಬ್ರಾಹ್ಮಣರಂತೆಯೇ ಅನುಸರಿಸುತ್ತಿದ್ದರು. ಅವರ ಶ್ರದ್ಧೆಯನ್ನು ಕಂಡು ಜನ ಅವರನ್ನು "ನಿಸಾರ ಭಟ್ಟ"ರೆಂದೇ ಕರೆಯುತ್ತಿದ್ದರು.

ರಾಮಕೃಷ್ಣ ಶ್ರದ್ಧೆಯಿಂದ ಗುರುಸೇವೆ ಮಾಡಿದ. ಆದರೆ ನಿಸಾರ ಹುಸೇನಖಾನರು ಲಹರಿ ಸ್ವಭಾವದವರು. ಮನಸ್ಸು ಬಿಟ್ಟು ಶಿಷ್ಯರಿಗೆ ಪಾಠ ಹೇಳಿಕೊಡುತ್ತಲೇ ಇರಲಿಲ್ಲ. ಅವರು ಹಾಡುತ್ತಿದ್ದುದನ್ನು ಕೇಳಿ ಶಿಷ್ಯರು ಕಲಿಯಬೇಕಾಗಿತ್ತು. ರಾಮಕೃಷ್ಣ ನಿಸಾರ ಹುಸೇನಖಾನರಿಂದ ಕಲಿತಿದ್ದೂ ಹಾಗೆಯೇ. ಹಾಡುತ್ತಿದ್ದ ಚೀಜನ್ನು ನೆನಪಿಟ್ಟುಕೊಳ್ಳದೆ ಬರೆದುಕೊಳ್ಳಹೋದರೆ ಖಾನಸಾಹೇಬರಿಗೆ -ಭಟ್ಟರಿಗೆ ಎನ್ನೋಣವೇ ?—ರೇಗುತ್ತಿತ್ತು.

ಬೇಸರದಿಂದ ರಾಮಕೃಷ್ಣ ನಿಸಾರ ಹುಸೇನಖಾನರ ಮನೆಯನ್ನು ಬಿಟ್ಟು ಹೊರಟ. ಕೊನೆಗೊಮ್ಮೆ ಅವನ ಅದೃಷ್ಟದ ಬಾಗಿಲು ತೆರೆಯಿತು. ಆಗ ಜಯಪುರದ ಮಹಾರಾಜರಾಗಿದ್ದ ರಾಮಸಿಂಗರು ಸಂಗೀತದ ಪೋಷಕರಾಗಿದ್ದರು. ಸ್ವತಃ ಸಂಗೀತಜ್ಞರಾಗಿದ್ದರು. ಅವರ ಆಸ್ಥಾನದಲ್ಲಿ ಮಹಮದ್ ಅಲಿಖಾನ ಕೋಠೀವಾಲೆ ಎಂಬ ವಿದ್ವಾಂಸರೊಬ್ಬರಿದ್ದರು. ರಾಮಕೃಷ್ಣ ಅವರನ್ನು ಆಶ್ರಯಿಸಿದ. ಅವರು ಹೃತ್ಪೂರ್ವಕವಾಗಿ ತಮ್ಮ ವಿದ್ಯೆಯನ್ನು ಶಿಷ್ಯನಿಗೆ ಧಾರೆಯೆರೆದರು. ರಾಮಕೃಷ್ಣನ ತಪಸ್ಸು ಫಲಿಸಿತು. ಕೆಲವೇ ವರ್ಷಗಳಲ್ಲಿ ರಾಮಕೃಷ್ಣ ವಝೇ ಬುವಾ ಎಂದು ಪ್ರಖ್ಯಾತರಾದರು.

ನೇಪಾಳದ ಮಹಾರಾಜ ವೀರ ಶಮಶೇರ ಜಂಗ ಬಹಾದೂರ ಅವರು ರಾಮಕೃಷ್ಣಬುವಾ ವಝೇ ಅವರ ಕಲಾಪ್ರತಿಭೆಯ, ಪಾಂಡಿತ್ಯದ ಪ್ರಶಂಸೆಯನ್ನು ಕೇಳಿ ತಮ್ಮಲ್ಲಿಗೆ ಕರೆಯಿಸಿಕೊಂಡು ದರಬಾರಿನಲ್ಲಿ ಅವರ ಬೈಠಕವನ್ನೇರ್ಪಡಿಸಿದರು. ಗಾಯನವನ್ನು ಕೇಳಿ ಮೆಚ್ಚಿದರು. ತಮ್ಮ ಆಸ್ಥಾನದ ಗಾಯಕರನ್ನಾಗಿ ನೇಮಿಸಿಕೊಂಡರು. ಅಲ್ಲಿ ಹಲವಾರು ವರ್ಷ ಕೆಲಸ ಮಾಡಿ ವಝೇ

ಬುವಾ ಅವರು ಮುಂಬಯಿಗೆ ಬಂದು ನೆಲಸಿದರು. ಅಲ್ಲಿ ಅನೇಕ ಜನ ಶಿಷ್ಯರಿಗೆ ಪಾಠ ಹೇಳಿದರು. ಮುಂಬಯಿಯ ಆಕಾಶವಾಣಿಯ ಕೇಂದ್ರದಲ್ಲಿ ಗಾಯನ ಮಾಡಿದರು. ಗ್ರಾಮೋಫೋನ ರೆಕಾರ್ಡುಗಳಿಗಾಗಿ ಹಾಡಿದರು. ಮರಾಠಿ ನಾಟಕಗಳಿಗೆ ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದರು. ಆ ಸಮಯದಲ್ಲಿ ರಂಗಭೂಮಿಯ ಮೇಲೆ ಪಾತ್ರ ವಹಿಸುತ್ತಿದ್ದ ಕೆಲವು ನಟರು ಇವರ ಶಿಷ್ಯರಾದರು. ಅವರಲ್ಲಿ ಪ್ರಸಿದ್ಧರಾದವರು ಕೇಶವರಾವ್ ಭೋಂಸಲೇ ಮತ್ತು ಮಾಸ್ಟರ್ ದೀನಾನಾಥ ಮಂಗೇಶಕರ (ಲತಾ ಮಂಗೇಶ ಕರರ ತಂದೆ). ದೀನಾನಾಥರ ಶಿಷ್ಯರು ಪಿ. ಕಾಳಿಂಗರಾಯರ ಗುರುಗಳಾದ ಮರೋಳ ರಾಮಣ್ಣನವರು.

ಅನಂತರ ವಝೇ ಬುವಾ ಅವರು ಬೆಳಗಾವಿಯಲ್ಲಿ ಬಂದು ನೆಲಸಿದರು. 'ಸಂಗೀತ ಕಲಾಪ್ರಕಾಶ' ಎಂಬ ಪುಸ್ತಕ ಬರೆದರು. ಬೆಳಗಾವಿಯಲ್ಲಿ ಕನ್ನಡಿಗರನೇಕರನ್ನು ಶಿಷ್ಯರನ್ನಾಗಿ ಗ್ರಹಿಸಿ ಸಂಗೀತ ಕಲಿಸಿದರು. ಧಾರವಾಡದ ಗುರುರಾವ ದೇಶಪಾಂಡೆ ಬೆಳಗಾವಿಯ ವಿ.ವಿ. ಕಾಗಲಕರ ಬುವಾ ಮೋಹನ ಚಿಕ್ಕರಮನೆ, ವಝೇಯವರ ಸ್ವಂತ ಮಗ ಶಿವರಾಮಬುವಾ ಇವರೆಲ್ಲ ರಾಮಕೃಷ್ಣಬುವಾ ಅವರ ಶಿಷ್ಯರಲ್ಲಿ ಪ್ರಸಿದ್ಧರು. ಮೋಹನ ಚಿಕ್ಕರಮನೆಯವರು ಅಂಧರಿದ್ದ ಕಾರಣ ವಝೇಯವರು ಅವರಿಂದ ಹಣ ತೆಗೆದುಕೊಳ್ಳುತ್ತಿರಲಿಲ್ಲ.

ಮೊದಲು ಮೈಸೂರಿನಲ್ಲಿ ಕರ್ನಾಟಕ ಸಂಗೀತವನ್ನು ಕಲಿತು, ಮಿರಜೆ ನೀಲಕಂಠ ಬುವಾ ಅವರಲ್ಲಿ ಹಿಂದೂಸ್ತಾನೀ ಸಂಗೀತ ಕಲಿತಿದ್ದ ಪಂಚಾಕ್ಷರಿ ಬುವಾ ಅವರು ಬೆಳಗಾವಿಯಲ್ಲಿ ರಾಮಕೃಷ್ಣ ಬುವಾ ವಝೇಯವರಲ್ಲಿ ಗ್ವಾಲಿಯರ ಪರಂಪರೆಯ ಸಂಗೀತದ ಕಲಿಕೆಯನ್ನು ಮುಂದುವರಿಸಿದರು. ಆಮೇಲೆ ಗದಗಿನಲ್ಲಿ ಸಂಗೀತದ ಶಾಲೆ ತೆರೆದು ನೂರಾರು ಜನ ಶಿಷ್ಯರಿಗೆ ಅನ್ನ ವಸ್ತ್ರ ಕೊಟ್ಟು ಸಂಗೀತ ಕಲಿಸಿ ಕರ್ನಾಟಕದಲ್ಲಿ ಹಿಂದೂಸ್ತಾನೀ ಸಂಗೀತದ ಪ್ರಚಾರ ಮಾಡಿದರು. ಈ ಪಂಚಾಕ್ಷರಿ ಬುವಾ ಅವರ ಶಿಷ್ಯರಲ್ಲಿ ಪ್ರಮುಖರಾದವರು ಶ್ರೀ ಬಸವರಾಜ ರಾಜಗುರು.

ಗುರುವನ್ನರಸಿಕೊಂಡು ಬಾಲಕ ರಾಮಕೃಷ್ಣ ವಝೇ ನೂರಾರು ಮೈಲಿ ನಡೆದುಕೊಂಡು ಹೋದ. ಆದರೆ ಮಲ್ಲೇಶಿ ಎಂಬ ಹುಡುಗನ

ಜೀವನದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಗುರುವೇ ಶಿಷ್ಯನನ್ನು ಹುಡುಕಿಕೊಂಡು ಬಂದರು.

ಮಲ್ಲೇಶಿ ಧಾರವಾಡದ ಸಮೀಪದ ಒಂದು ಹಳ್ಳಿಯ ಹುಡುಗ. ಸ್ವಲ್ಪ ದೊಡ್ಡವನಾದ ಕೂಡಲೇ ಮಿಕ್ಕವರಂತೆ ಅವನ ತಂದೆತಾಯಿಗಳೂ ಅವನನ್ನು ಶಾಲೆಗೆ ಸೇರಿಸಿದರು. ಏಳೆಂಟು ವರ್ಷಗಳಾಗುವವರೆಗೆ ಹುಡುಗ ಶಾಲೆಗೆ ಹೋಗುತ್ತಿದ್ದ. ಆದರೆ ಅವನಿಗೆ ಶಾಲೆಯ ಪಾಠದಲ್ಲಿ ಸ್ವಲ್ಪವೂ ಆಸಕ್ತಿ ಇರಲಿಲ್ಲ. ಸದಾ ಸಂಗೀತದ ಗುಂಗು. ಆಗ ಪ್ರಚಲಿತವಿದ್ದ ನಾಟಕದ ಹಾಡುಗಳನ್ನು ಇಂಪಾಗಿ ಹಾಡುತ್ತಿದ್ದ. ಬಾಯಿಗೆ ಬಂದದ್ದನ್ನು ಗುಣಗುಣಿಸುತ್ತಲಿದ್ದ. ಪಾಠ ಒಪ್ಪಿಸುವುದಿಲ್ಲವೆಂದು ಶಾಲೆಯಲ್ಲಿ ದಿನವೂ ಪೆಟ್ಟು. ಶಾಲೆಗೆ ಹೋಗಬೇಕೆಂದು ಹಿರಿಯರ ಒತ್ತಾಯ. ಶಾಲೆಗಾಗಿ ಕೊಟ್ಟ ಫೀ ಹಣದಿಂದ ಅಲ್ಲೀಪಾಕ ಕೊಂಡು ತಿನ್ನುತ್ತಿದ್ದ. ಅದಕ್ಕಾಗಿ ಮನೆಯಲ್ಲಿ ಮತ್ತೆ ಏಟು. ಅದನ್ನೆಲ್ಲ ತಾಳಲಾರದೆ ಮಲ್ಲೇಶಿ ಯಾರಿಗೂ ಹೇಳದೆ ಕೇಳದೆ ಹಳ್ಳಿಯನ್ನು ಬಿಟ್ಟು ಓಡಿಹೋದ. ನೇರವಾಗಿ ವಾಮನ ರಾವ್ ಮಾಸ್ತರರ ನಾಟಕ ಕಂಪನಿಗೆ ಬಂದ.

ವಾಮನರಾವ್ ಮಾಸ್ತರರು ಮಲ್ಲೇಶಿಯನ್ನು ಪ್ರೀತಿಯಿಂದ ಬರ ಮಾಡಿಕೊಂಡರು. ಅಕ್ಕರೆಯಿಂದ ನಾಟಕದ ಹಾಡುಗಳನ್ನು ಹೇಳಿಕೊಟ್ಟರು, ಅಭಿನಯ ಕಲೆಯನ್ನು ಕಲಿಸಿದರು. ಮಲ್ಲೇಶಿಯದು ಬಹಳ ಮಧುರವಾದ ಕಂಠ. ಅವನ ಹಾಡು ಕೇಳುವುದಕ್ಕೆ, ಅಭಿನಯವನ್ನು ನೋಡುವುದಕ್ಕೆ ಜನ ದೂರ ದೂರದಿಂದ ಬರುತ್ತಿದ್ದರು. ಅದರಲ್ಲೂ ಅವನು ಪ್ರಹ್ಲಾದನ ಪಾತ್ರ ಮಾಡುತ್ತಾನೆಂದರೆ ಊರೂರುಗಳಿಂದ ಎತ್ತಿನ ಬಂಡಿಗಳಲ್ಲಿ ಜನ ಬಂದು ಸೇರುತ್ತಿದ್ದರು. ಬಾಲಕ ಮಲ್ಲೇಶಿಯ ಕೀರ್ತಿ ಮಿರ್ಜಿಯಲ್ಲಿದ್ದ ನೀಲಕಂಠ ಬುವಾ ಅವರ ಕಿವಿಗೂ ಬಿದ್ದಿತು.

ನೀಲಕಂಠ ಬುವಾ ಜಾತಿಯಲ್ಲಿ ಜಂಗಮರು. ಅವರು ಆಲೂರು ಮಠ ದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಅವರ ಜೊತೆಯಲ್ಲಿ ಶಿವಬಸವಯ್ಯ ಎನ್ನುವ ಸಹಪಾಠಿಯಿದ್ದರು. ಅವರೇ ಮುಂದೆ ಹಾವೇರಿಯ ಹುಕ್ಕೇರಿ ಮಠಾಧಿಪತಿಯಾದರು. ಅವರಿಂದ ನೀಲಕಂಠ ಬುವಾ ಅವರಿಗೆ ಮಲ್ಲೇಶಿಯ ವಿಚಾರ ತಿಳಿಯಿತು,

ಮಿರಜಿ ನೀಲಕಂಠ ಬುವಾ ಎಂದರೆ ಸಂಗೀತವಿದ್ಯೆಯ ಪರ್ವತವಂತೆ. ಅವರು ಇಚಲಕರಂಜಿಯ ಬಾಲಕೃಷ್ಣಬುವಾ ಅವರ ಶಿಷ್ಯರು. ಘನ ವಿದ್ವಾಂಸರು. ಬಾಗಲಕೋಟೆಯಲ್ಲಿ ವಾಮನರಾವ್ ಮಾಸ್ತರರ ನಾಟಕ ಕಂಪನಿ ಕ್ಯಾಂಪು ಮಾಡಿದಾಗ ನೀಲಕಂಠ ಬುವಾ ಅವರು ಮಿರಜಿಯಿಂದ ಬಂದರು. ಮಲ್ಲೇಶಿಯ ಪಾತ್ರ ನೋಡಿದರು, ಅವನ ಗಾಯನ ಕೇಳಿದರು. ಮುಂದೆ ಇವನೊಬ್ಬ ದೊಡ್ಡ ಸಂಗೀತಗಾರನಾಗುತ್ತಾನೆ ಎಂದು ಅವರಿಗನ್ನಿಸಿತು. ವಾಮನರಾಯರಿಗೆ ತಿಳಿಸಿ ಮಲ್ಲೇಶಿಯನ್ನು ನಾಟಕ ಕಂಪನಿಯಿಂದ ಬಿಡಿಸಿ ತಮ್ಮೊಂದಿಗೆ ಮಿರಜಿಗೆ ಕರೆದುಕೊಂಡು ಬಂದರು. ನೀಲಕಂಠ ಬುವಾ ಅವರಿಗೆ ಮಕ್ಕಳಿರಲಿಲ್ಲ. ಅವರು ಮಲ್ಲೇಶಿಯನ್ನು ತಮ್ಮ ಮಗನೆಂದು ಭಾವಿಸಿ ಮುದ್ದಿನಿಂದ ಬೆಳಸಿದ್ದರಲ್ಲದೆ ಗುರುವಾಗಿ ಗಾಯನ ಕಲಿಸಿದರು.

ಹೀಗೆ ಮಲ್ಲಿಕಾರ್ಜುನ ಮನಸೂರರ ಭಾಗ್ಯವಿಶೇಷದಿಂದ ಅವರಿಗೆ ಗುರುಗಳೇನೋ ಸುಲಭವಾಗಿ ದೊರೆತರು. ಆದರೆ ಗುರುವಿನಿಂದ ದೊರೆತ ವಿದ್ಯೆಯನ್ನು ಕರಗತ ಮಾಡಿಕೊಳ್ಳುವುದು ಅಷ್ಟೇನೂ ಸುಲಭವಾದ ಮಾತಾಗಿರಲಿಲ್ಲ. ಅವರ ಪಾಲಿಗೆ ಅದೊಂದು ಕಠಿಣ ತಪಸ್ಸು.

ಗುರುಪತ್ನಿಯೇ ಚಿಕ್ಕಹುಡುಗನನ್ನು ಬೆಳಗಿನ ಜಾವ ಎಬ್ಬಿಸಿ, ಮುಖ ತೊಳೆಸಿ ಪಾಠಕ್ಕೆ ಕೂರಿಸುತ್ತಿದ್ದರು. ನೀಲಕಂಠಬುವಾ ಬೆಳಗಿನ ರಾಗಗಳಲ್ಲಿ ಅಲಂಕಾರ ತೀಡಿಸುತ್ತಿದ್ದರು. ಸಾಯಂಕಾಲ ಸಂಧಿಪ್ರಕಾರದ ರಾಗಗಳನ್ನು ಹೇಳಿಕೊಡುತ್ತಿದ್ದರು. ಮಲ್ಲೇಶಿ ಮನೆಗೆ ಬಂದಮೇಲೆ ಗುರುಗಳಿಗೆ ಒಬ್ಬ ಮಗನೂ ಜನಿಸಿದ. ಇದರಿಂದ ದಂಪತಿಗಳಿಗೆ ಮತ್ತಷ್ಟು ಸಂತೋಷ ವಾಯಿತು. ಇದು ಮಲ್ಲೇಶಿಯ ಕಾಲ್ಗುಣವೆಂದೇ ಅವರು ನಂಬಿದರು.

ಮಲ್ಲಿಕಾರ್ಜುನ ಮನಸೂರರಿಗೆ ಎಂಟನೆಯ ವಯಸ್ಸಿನಲ್ಲಿಯೇ ಮದುವೆಯಾಗಿತ್ತು. ಅವರಿಗೆ ಹದಿನೆಂಟು ವರ್ಷವಾದಾಗ, ಧಾರವಾಡದಲ್ಲಿ ಮನೆ ಮಾಡಿ, ಸಂಸಾರ ಹೂಡಿದರು. ನೀಲಕಂಠ ಬುವಾ ಅವರನ್ನು ಅಲ್ಲಿಗೇ ಕರೆಸಿಕೊಂಡು, ಸಂಗೀತ ಶಿಕ್ಷಣವನ್ನು ಮುಂದುವರೆಸಿದರು. ಸಂಗೀತ ಪ್ರೇಮಿಗಳಾದ ಶ್ರೀಪಾದರಾವ ಜೋಶಿಯವರು ಈ ಗುರು ಶಿಷ್ಯರಿಗೆ ತಮ್ಮ ಮನೆಯನ್ನು ಬಿಟ್ಟುಕೊಟ್ಟರು. ಅಲ್ಲಿ ಹಗಲಿರುಳೂ ಇವರ ರಿಯಾಜ ನಡೆಯುತ್ತಿತ್ತು.



ಮಿರ್ಜಿ ನೀಲಕಂಠ ಬುವಾ

ಇದೇ ಸಮಯದಲ್ಲಿ ಧಾರವಾಡದಲ್ಲಿ ಯರಾಶಿ ಭರಮಪ್ಪನವರ 'ವಿಶ್ವಗುಣಾದರ್ಶ' ಕಂಪನಿ ನಾಟಕಗಳನ್ನಾಡುತ್ತಿತ್ತು. ಮಲ್ಲಿಕಾರ್ಜುನ ಮನಸೂರರಂತಹ ಸಂಗೀತ ಬಲ್ಲ ನಟರೊಬ್ಬರು ಅವರಿಗೆ ಬೇಕಾಗಿದ್ದಿತು. ಈ ದಿನಗಳಲ್ಲಿ ಮಲ್ಲಿಕಾರ್ಜುನ ಮನಸೂರರ ಆರ್ಥಿಕ ಸ್ಥಿತಿಯು ಅಷ್ಟೇನೂ ಚೆನ್ನಾಗಿರಲಿಲ್ಲ. ಪಿತ್ರಾರ್ಜಿತವಾಗಿ ಬಂದಿದ್ದ ಆಸ್ತಿಯನ್ನು ತಮ್ಮಂದಿರು ಅವಿದ್ಯಾವಂತರು ಎನ್ನುವ ಕಾರಣದಿಂದ ಹಿರಿಯರಾದ ಬಸವರಾಜ ಮನಸೂರರೂ, ಮಲ್ಲಿಕಾರ್ಜುನರೂ ಅವರಿಗೇ ಬಿಟ್ಟುಕೊಟ್ಟಿದ್ದರು. ಸಂಗೀತದಿಂದ ಬರುತ್ತಿದ್ದ ಆದಾಯ ಸಾಕಾಗುತ್ತಿರಲಿಲ್ಲ. ಹೀಗಾಗಿ ನಾಟಕ ಕಂಪನಿಗೆ ನಟರಾಗಿ ಸೇರುವುದು ಮಲ್ಲಿಕಾರ್ಜುನ ಮನಸೂರರಿಗೆ ಅನಿವಾರ್ಯವಾಗಿತ್ತು.

ಮಲ್ಲಿಕಾರ್ಜುನ ಮನಸೂರರು ತಾವು ನಾಟಕ ಕಂಪನಿಗೆ ಸೇರಿದ್ದಲ್ಲದೆ. ತಮ್ಮ ಗುರುಗಳನ್ನು ಅಲ್ಲಿಗೇ ಕರೆಸಿಕೊಂಡರು. ಇವರಿಗೆ ಸಂಗೀತ ಕಲಿಸುವುದಕ್ಕಾಗಿ ಯರಾಶಿ ಭರಮಪ್ಪನವರು ಬುವಾ ಅವರಿಗೆ ಸಂಬಳ ಕೊಡುತ್ತಿದ್ದರು.

"ಕಲಿತನದುರ್ಕು, ಜವ್ವನದ ಸೊರ್ಕು......" ಎಲ್ಲ ಸಂಗಮಿಸಿತ್ತು ಮನಸೂರರಲ್ಲಿ. ದೊಡ್ಡ ಗುರುವಿನಲ್ಲಿ ಉನ್ನತಮಟ್ಟದ ವಿದ್ಯೆ ದೊರೆತಿತ್ತು; ಕರ್ನಾಟಕದ ತುಂಬೆಲ್ಲ ಅಲ್ಲದೆ ಹೊರಗೂ ಹೆಸರಾಗಿದ್ದಿತು. ಕೈತುಂಬ ಹಣವು ಸೇರಿದ್ದಿತು. ಎಷ್ಟೆಂದರೆ ತಮ್ಮಂದಿರು ವಿದ್ಯಾವಂತರಲ್ಲವೆಂಬ ಕಾರಣಕ್ಕಾಗಿ ತಮ್ಮ ಪಾಲಿನ ಪಿತ್ರಾರ್ಜಿತ ಆಸ್ತಿಯ ಭಾಗದ ಹೊಲ ಮನೆಗಳನ್ನು ತಮ್ಮಂದಿರಿಗೇ ಬಿಟ್ಟುಕೊಟ್ಟರು. ಈ ಸಮಯದಲ್ಲಿ ಅವರಿಗೊಂದು ದೊಡ್ಡ ಆಘಾತ ಬರಸಿಡಿಲಿನಂತೆರಗಿತು.

ಮನಸೂರರ ತಾಯಿಯೊಬ್ಬ ಕರಣೆಯುತಿದ್ದರು. ಶ್ರೀಶೈಲ ಮಲ್ಲಿಕಾರ್ಜುನನ ದರ್ಶನ ಮಾಡಿಕೊಳ್ಳಬೇಕೆಂಬ ಸಂಕಲ್ಪ ಮಾಡಿದರು. ಮನಸೂರರಿಗೆ ಆಗ ದೇವರಲ್ಲಿ ಅಷ್ಟೊಂದು ನಂಬಿಕೆಯಿಲ್ಲದಿದ್ದರೂ ತಾಯಿಯ ಇಚ್ಛಾಪೂರ್ತಿಗೋಸುಗ ಕರೆದುಕೊಂಡು ಹೊರಟರು. ಅವರೊಂದಿಗೆ ಇತರ ಅಣ್ಣ ತಮ್ಮಂದಿರೂ ಇದ್ದರು.

ಶ್ರೀಶೈಲದಲ್ಲಿ ಪಾತಾಳಗಂಗೆಯಲ್ಲಿ ಎಲ್ಲರೂ ಸ್ನಾನ ಮಾಡಿ ಬಂದು ನೋಡಿದರೆ ದಂಡೆಯಲ್ಲಿಟ್ಟಿದ್ದ ಮನಸೂರರ ಕೋಟು ಇರಲಿಲ್ಲ. ಅದರ ಜೇಬುಗಳಲ್ಲಿ ಅವರೆಲ್ಲರ ಹಣವಿತ್ತು, ಮರುಪಯಣದ ಟಿಕೆಟೂ ಇದ್ದುವು.

ಮೊದಲೇ ನಾಸ್ತಿಕರಾದ ಮನಸೂರರಿಗೆ ಇನ್ನಷ್ಟು ತಲೆ ತಿರುಗಿತು. "ನೋಡಪೇ ನಿನ್ನ ಮಾತ ಕೇಳಿ ಬಂದದ್ದಕ್ಕ ಹಿಂಗಲ್ಲಾ ಆತು. ಒಳೇ ಕರಕೊಂಡು ಬಂದಪೇ ಈ ಮಲ್ಲ್ಯಾನ ದರ್ಶನಕ್ಕ" ಎಂದರು. ತಾಯಿ— "ಹೀಂಗನಬಾರದಪ್ಪಾ, ಶ್ರೀಶೈಲ ಮಲ್ಲಿಕಾರ್ಜುನ ಭಾಳ ಸತ್ಯವಂತ ದೇವರು, ಅವನ ಹೆಸರನ ನಿನಗಿಟ್ಟಿರೋದು" ಎಂದರು. "ಹೂಂ, ಸತ್ಯವಂತ; ನೋಡಿದೇವಲ್ಲ, ನಮ್ಮ ದೇವರ ಸತ್ಯ ನಮಗ ಗೊತ್ತಾತು....."

ಮನಸಿಲ್ಲದ ಮನಸ್ಸಿನಿಂದ ದೇವರ ದರ್ಶನಕ್ಕೆ ಹೋದರು ಮನಸೂರರು. ಪೂಜೆಯ ಕಾಲಕ್ಕೆ ತಾಯಿ ದೇವರ ಮೂರ್ತಿಯನ್ನು ಸಂಬೋಧಿಸಿ ನುಡಿದರು. "ನಿನ್ನಲ್ಲಿ ಸತ್ಯ ಇದ್ದರ ನಿನ್ನ ದರ್ಶನ ಆದ ಮ್ಯಾಲೂ ನನ್ನ ಈ ಸಂಸಾರದೊಳಗ ಹೋಗಾಕ ಬಿಡಬಾರದು ನೀನು. ನನ್ನ ಇಲ್ಲೇ ನಿನ್ನೊಳಗ ಕರಕೋಬೇಕು" ಎಂದರು. ಮನಸೂರರಿಗೆ ಈ ಕೋರಿಕೆ ವಿಚಿತ್ರವೆನ್ನಿಸಿತು, ರೇಗಿತು. ತಾಯಿಯನ್ನು ಗದರಿಸಿದರು. ಆದರವರು ಶಾಂತರಾಗಿಯೇ ಇದ್ದರು.

ಶ್ರೀಶೈಲದಲ್ಲಿ ಸಾವಿರಾರು ಜನ ಯಾತ್ರಿಕರು. ಮನಸೂರರ ಪರಿವಾರ ರಾತ್ರಿಯೂಟ ಮುಗಿಸಿ ಮಲಗಲು ಬೇರೆಲ್ಲಿಯೂ ಜಾಗ ಸಿಕ್ಕದೆ ದೇವಸ್ಥಾನದ ಎದುರು ಬಯಲಿನಲ್ಲಿ ಬೆಳುದಿಂಗಳಿನಲ್ಲಿ ಕಂಬಳಿ ಹಾಸಿಕೊಂಡು ಮಲಗ ಬೇಕಾಯಿತು. ಮಧ್ಯರಾತ್ರಿಯ ಹೊತ್ತಿಗೆ ಯಾವುದೋ ಊರಿನ ಯಾತ್ರಿಕರ ಚಕ್ಕಡಿಯೊಂದು ಬಂದಿತು. ಬೆಳುದಿಂಗಳಿನಲ್ಲಿ ಬಿಳಿಯ ಬಟ್ಟೆ ಹೊದೆದು ಮಲಗಿದ್ದ ಇವರನ್ನು ಕಂಡು ಎತ್ತುಗಳು ಬೆದರಿದವು. ದಿಕ್ಕು ಗೆಟ್ಟು ಓಡುತ್ತ ಮನಸೂರರತ್ತಲೇ ನಡೆದವು. ಗಾಡಿಯವ ಎಷ್ಟು ಜೋರಾಗಿ ಮೂಗುದಾರ ಎಳೆದರೂ ಹತೋಟಿಗೆ ಬರಲಿಲ್ಲ. ಮಲ್ಲಿಕಾರ್ಜುನ ಮನಸೂರರ ಕಾಲಮೇಲೆ ಚಕ್ಕಡಿಯ ಗಾಲಿ ಉರುಳಿತು; ಮೂಳೆ ಮುರಿಯಿತು. ಪಕ್ಕದಲ್ಲಿ ಮಲಗಿದ್ದ ತಾಯಿಯ ಎದೆಯ ಮೇಲೇರಿ ನಿಂತಿತು ಗಾಲಿ. ಉಸಿರಾಟವೂ ನಿಂತಿತು. ಶಿವಶರಣೆಯ ಸಂಕಲ್ಪ ಸಿದ್ಧಿಸಿತು. ಅಕ್ಕಮಹಾದೇವಿ ಐಕ್ಯಳಾದ ಕದಳಿಯ ವನದಲ್ಲಿಯೇ ಅವ್ವನ ಸಮಾಧಿ ಮಾಡಿ ಮನಸೂರಿಗೆ ಮರಳಿದರು.

ಈ ಆಘಾತದಿಂದ ಚೇತರಿಸಿಕೊಳ್ಳುತ್ತಿರುವಷ್ಟರಲ್ಲಿ ಮಿರ್ಜಿಯಿಂದ ನೀಲಕಂಠಬುವಾ ಅವರ ಮರಣವಾರ್ತೆ ಬಂದಿತು. ಮನುಷ್ಯರೆಲ್ಲ ಹಾಗಿದ್ದರೆ ಒಂದಲ್ಲ ಒಂದು ದಿನ ಸಾಯುತ್ತಾರೆ ಎಂಬ ಅಂಶ ಮನಸೂರರಿಗೆ ಹೊಳೆದದ್ದು ಆಗ ಮಾತ್ರ. ಆ ಮುನ್ನ ಎಷ್ಟು ಸಾವುಗಳನ್ನು ಕಂಡಿದ್ದರೂ ಹೊಳೆದಿರಲಿಲ್ಲ. ಅಂದಿನಿಂದ ಅವರು ನಸುಪೆ ಮೃದುವಾದರು. ಅವರೇ ಹೇಳುವಂತೆ ತಲೆಯ ಮೇಲೆ ಐಟಿನಿಂದ ಸೊಟ್ಟವಾಗಿರಿಸಿಕೊಳ್ಳುತ್ತಿದ್ದ ಟೊಪ್ಪಿಗೆಯನ್ನು ನೆಟ್ಟಗೆ ಮಾಡಿಕೊಂಡರು.

ವಿದ್ಯಾರ್ಜನೆಯ ಹಸಿವು ಹಿಂಗಿರಲಿಲ್ಲ. ಮುಂದಿನ ವಿದ್ಯಾಭ್ಯಾಸಕ್ಕೆಂದು ವಝೇಬುವಾರಲ್ಲಿಗೆ ಹೋಗಿ ವಿನಂತಿಸಿಕೊಂಡರು. ಏನೆನ್ನಿಸಿತೊ. ಏನೋ, ವಝೇಬುವಾ ಮನಸೂರರನ್ನು ಶಿಷ್ಯರನ್ನಾಗಿ ಸ್ವೀಕರಿಸಲೊಪ್ಪಲಿಲ್ಲ. ಅಷ್ಟರಲ್ಲಿ ವಾಮನರಾಯರ ಶಿಷ್ಯರಾಗಿ ರಂಗನಟರೆಂದೂ ನೀಲಕಂಠಬುವಾರಲ್ಲಿ ಅಭ್ಯಾಸ ಮಾಡಿ ಸಂಗೀತಗಾರರೆಂದೂ ಪ್ರಸಿದ್ಧರಾಗಿದ್ದ ಬಸವರಾಜ ಮನಸೂರರು ಶಾರದಾ ಫಿಲ್ಮ ಕಂಪನಿಯ ಸಂಗೀತ ನಿರ್ದೇಶಕರಾಗಿ ಮುಂಬಯಿಗೆ ಹೋದರು. ಕೆಲ ದಿನಗಳಾದ ಮೇಲೆ ತಮ್ಮನನ್ನು ತಮ್ಮಲ್ಲಿಗೆ ಕರೆಸಿಕೊಂಡರು.

ಮುಂಬಯಿಯಲ್ಲಿ ಅಲ್ಲಲ್ಲಿ ಮಲ್ಲಿಕಾರ್ಜುನರ ಗಾಯನ ಕಾರ್ಯಕ್ರಮಗಳಾದುವು. ಆವಾಗಾಗಲೇ ಹಿಜ್ ಮಾಸ್ಟರ್ಸ್ ವ್ಹಾಯಿಸ್ ಕಂಪನಿ ಇವರ ಶಾಸ್ತ್ರೀಯ ಸಂಗೀತದ ಧ್ವನಿಮುದ್ರಿಕೆಗಳನ್ನು ಚಲಾವಣೆಗೆ ತಂದಿತ್ತು. ಅನೇಕ ಸಂಗೀತಗಾರರೂ ಕಲಾರಸಿಕರೂ ವಯಕ್ತಿಕ ಮಿತ್ರರಾದರು. ಅವರಲ್ಲಿ ತುಕಾರಾಮ ಅಭಂಗಗಳನ್ನು ಹಾಡಿ, ಸಿನಿಮಾದಲ್ಲಿ ಪಾತ್ರವಹಿಸಿ ಪ್ರಸಿದ್ಧನಾಗಿದ್ದ ವಿಷ್ಣುಪಂತ ಪಾಗನೀಸನೊಬ್ಬ.

ಕಲಾವಿದ ಪಾಗನೀಸ ವೃತ್ತಿಯಲ್ಲಿ ಅಕ್ಕಸಾಲಿಗ. ಅವನಲ್ಲಿ ಒಂದು ಸಲ ಉಂಗುರ ಮಾಡಿಸಲು ಹೋದಾಗ ಅಲ್ಲಿಗೆ ಬಂದಿದ್ದ ಉಸ್ತಾದ ಮಂಜೀಖಾನರ ಭೇಟಿಯಾಯಿತು—ಮನಸೂರರಿಗೆ. ಅಲ್ಲಾದಿಯಾ ಖಾನಸಾಹೇಬರ ಹಿರಿಮಗ ಉಸ್ತಾದರು. ತಮ್ಮನ್ನು ಶಿಷ್ಯನನ್ನಾಗಿ ಪರಿಗ್ರಹಿಸಬೇಕೆಂದು ಮನಸೂರರು ಬೇಡಿಕೊಂಡರು. ಅದಕ್ಕೆ ಪಾಗನೀಸನ ಶಿಫಾರಸು ಬೇರೆ. ಅಲ್ಲದೆ ತನ್ನಲ್ಲಿದ್ದ ಗ್ರಾಮೋಫೋನ ತಿರುಗಿಸಿ ಅದರ ಮೇಲೆ

ಮನಸೂರರ ಗಾಯನದ ಮುದ್ರಿಕೆಗಳನ್ನು ಹಾಕಿದ. ಮಂಜೀಖಾನರು ಮೆಚ್ಚಿದರು. ತಮ್ಮ ಘರಾಣೆಯ ಸಂಗೀತದ ಪಾರಸುಪಾರರಾಗಲು ಮನಸೂರರು ತಕ್ಕವರೆಂದು ಮನಗಂಡರು. ಅವರಿಗೆ 'ಗಂಡಾ' ಕಟ್ಟಲು ಸಮ್ಮತಿಸಿದರು.

ಗ್ವಾಲಿಯರ ಘರಾಣೆಯ ಸಂಗೀತದೊಂದಿಗೆ ಜಯಪುರ ಘರಾಣೆಯ ಸಂಗೀತದ ಸಂಗಮವಾಯಿತು ಮನಸೂರರಲ್ಲಿ.

ಮಂಜೀಖಾನರ ಸಂಗೀತದ ವೈವಿಕತೆ ಅಪೂರ್ವವಾದುದು. ಅವರ ಸಂಗೀತ ಕೇಳಿದ ಮೇಲೆ ಮನಸೂರರು ಗಂಟೆಗಟ್ಟಲೆ ಸಮಾಧಿ ಸ್ಥಿತಿಯಲ್ಲಿರುತ್ತಿದ್ದರಂತೆ. 'ಗಂಡಾಬಂಧನ' ನಡೆದ ದಿನ ಮುಂಬಯಿಯ ದೊಡ್ಡ ದೊಡ್ಡ ಸಂಗೀತಗಾರರು ಸಭೆಯಲ್ಲಿ ಹಾಜರಿದ್ದರು. ಲಯಬ್ರಹ್ಮರೆಂದು ಪ್ರಸಿದ್ಧರಾಗಿದ್ದ ಕಾಪೂರ ಮಾಮಾ ಅವರೂ ಸಭೆಗೆ ಬಂದಿದ್ದರು.

ಮಂಜೀಖಾನರಲ್ಲಿ ಪಾಠ ಆರಂಭವಾಯಿತು. ಮಲ್ಲಿಕಾರ್ಜುನ ಮನಸೂರರು, ನೀಲಕಂಠಬುವಾ ಅವರು ಕಲಿಸಿದ ಸಂಗೀತದ ಬಲದಿಂದಲೇ ಕಚೇರಿ ಸಂಗೀತಗಳನ್ನು ಮಾಡುತ್ತಿದ್ದರು. ಅದರಿಂದ ಬಂದ ಹಣವನ್ನು ಗುರು ಮಂಜೀಖಾನರಿಗೆ ಒಪ್ಪಿಸುತ್ತಿದ್ದರು. ಮಿಕ್ಕ ಹಣದಲ್ಲಿ ತಮ್ಮ ಊಟ ಉಡುಗೆಗಳನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಕೆಲವು ದಿನಗಳಂತೂ ಎರಡು ಹೊತ್ತಿನ ಊಟಕ್ಕೂ ಗತಿಯಿರುತ್ತಿರಲಿಲ್ಲ.

ಎಂತಹ ಕಷ್ಟ ಸ್ಥಿತಿಯಲ್ಲಿದ್ದರೂ ಮನಸೂರರು ತುಂಬಾ ಅಭಿಮಾನದ ಸ್ವಭಾವ. ಒಮ್ಮೆ ಮಂಜೀಖಾನರಿಗೆ ಫೀ ತಂದುಕೊಡುವುದು ತಡವಾಯಿತು. ಯಾವುದಕ್ಕೋ ಮಂಜೀಖಾನರಿಗೆ ತುರ್ತಾಗಿ ಹಣ ಬೇಕಾಗಿತ್ತು. ಅವರು ಮಲ್ಲಿಕಾರ್ಜುನ ಮನಸೂರರನ್ನು 'ಇಷ್ಟು ತಡವಾಗಿ ಯಾಕೆ ತಂದುಕೊಟ್ಟೆ ? ಮೊದಲೇ ಹಣವನ್ನು ಕೊಡುವುದಕ್ಕೆ ಏನಾಗಿತ್ತು ?' ಎಂದು ಗದರಿಸಿಕೊಂಡರು. ಅಷ್ಟಕ್ಕೆ ಮನಸೂರರ ಅಭಿಮಾನಕ್ಕೆ ಪೆಟ್ಟು ತಗುಲಿದಂತಾಯಿತು. ಅಂದಿನಿಂದ ಪಾಠಕ್ಕೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು. ಮಂಜೀಖಾನರೇ ತಮ್ಮ ಪರಿಚಯದವರೊಡನೆ ಹೇಳಿ ಕಳುಹಿಸಿ ಕರೆಸಿಕೊಳ್ಳಬೇಕಾಯಿತು. "ನಾನೇ ತ್ರಿಪಷ್ಠಿ ಎಂದರೆ ನನ್ನ ಶಿಷ್ಯ ನನಗಿಂತಲೂ ತ್ರಿಪಷ್ಠಿ !" ಎಂದು ಸೋಲೊಪ್ಪಿಕೊಂಡು ಅಭಿಮಾನಪಟ್ಟರು. ತಮ್ಮ ವಿದ್ಯೆಯ ಭಂಡಾರವನ್ನೆಲ್ಲ ತೆರೆದಿಟ್ಟರು.

ಮಂಜೀಖಾನರು ಮುಕ್ತ ಮನಸ್ಸಿನಿಂದ ಮನಸೂರರಿಗೆ ಪಾಠ ಹೇಳಿಕೊಟ್ಟರು. ಇವರಂತಹ ಶಿಷ್ಯರು ದೊರಕಿದ್ದು ಅವರಿಗೂ ತೃಪ್ತಿಯನ್ನುಂಟುಮಾಡಿತ್ತು. ಮಂಜೀಖಾನರಿಗೆ ರಕ್ತದ ಒತ್ತಡದ ಕಾಯಿಲೆಯಿತ್ತು. ಬರಬರುತ್ತಾ ಅದು ಉಲ್ಬಣಿಸಿತು. ಸಾಯುವ ಹಿಂದಿನ ದಿನವೆಲ್ಲಾ ಅವರು ಅರ್ಧಪ್ರಜ್ಞೆಯಲ್ಲೂ ಮನಸೂರರ ಹೆಸರನ್ನೇ ಕನವರಿಸುತ್ತಿದ್ದರು. ಹಿಂದಿನ ದಿನ ಮುಂಬಯಿಯಲ್ಲಿ ಮನಸೂರರ ಕಚೇರಿಯಿತ್ತು. ಅದು ಮುಗಿದ ಮೇಲೆ ಗುರುಗಳು ತೀರಾ ಅಸ್ವಸ್ಥರಾಗಿರುವುದು ಅವರಿಗೆ ತಿಳಿಯಿತು. ಅವರನ್ನು ಹೋಗಿ ನೋಡುವ ಹೊತ್ತಿಗೆ ಮಂಜೀಖಾನರು ಮಾತನಾಡುವುದೂ ನಿಂತು ಹೋಗಿತ್ತು. ಶಿಷ್ಯನನ್ನೊಮ್ಮೆ ಕಣ್ಣು ತುಂಬಾ ನೋಡಿ ಮಂಜೀಖಾನರು ಪ್ರಾಣಬಿಟ್ಟರು.

ಮುಂದೆ ಮಂಜೀಖಾನರ ತಂದೆ ಅಲ್ಲಾದಿಯಾಖಾನರಲ್ಲೇ ಪಾಠ ಮುಂದುವರಿಸಲು ಮನಸೂರರು ಅಪೇಕ್ಷೆಪಟ್ಟರು. ಆದರೆ ಅಲ್ಲಾದಿಯಾ ಖಾನರಿಗೆ ಈಗಾಗಲೇ ತುಂಬಾ ವಯಸ್ಸಾಗಿತ್ತು. ಜೊತೆಗೆ ಮಗ ಸತ್ತ ದುಃಖ ಬೇರೆ. ಹೀಗಾಗಿ ತಮ್ಮ ಇನ್ನೊಬ್ಬ ಮಗ ಬುರ್ಜೀಖಾನರಲ್ಲಿ ಕಲಿಯುವಂತೆ ಅವರು ಮನಸೂರರಿಗೆ ತಿಳಿಸಿದರು.

ಬುರ್ಜೀಖಾನರು ಆಗ ಕೊಲ್ಲಾಪುರದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. ಮನಸೂರರು ಅಲ್ಲಿಗೆ ಬಂದರು. ಬುರ್ಜೀಖಾನರೇನೋ ಅವರಿಗೆ ಪಾಠ ಹೇಳಿಕೊಡಲು ಒಪ್ಪಿದರು. ಆದರೆ ಮನಸೂರರು ಬೇಗ ಬೇಗ ಕಲಿಯುವುದನ್ನು ನೋಡಿ ಅವರ ಸಹಪಾಠಿಗಳಿಗೆ ಅಸೂಯೆಯಾಯಿತು. ಬೇಗ ಪಾಠ ಕಲಿಸದಂತೆ ಗುರುಗಳಿಗೆ ದುರುಪದೇಶ ಮಾಡಿದರು. ಆದರೆ ಮನಸೂರರು ಧೃತಿಗೆಡಲಿಲ್ಲ. ಬುರ್ಜೀಖಾನರು ವಾರಕ್ಕೊಮ್ಮೆ ಕೊಲ್ಲಾಪುರದ ಲಕ್ಷ್ಮೀ ದೇವಸ್ಥಾನದಲ್ಲಿ ಕಚೇರಿ ಮಾಡಬೇಕಾಗಿತ್ತು. ಆಗ ಮನಸೂರರು ಅವರೊಂದಿಗೆ ತಂಬೂರಿ ನುಡಿಸುತ್ತಿದ್ದರು. ಕೆಲವು ಸಲ ತಬಲಾ ನುಡಿಸುತ್ತಿದ್ದರು. ಒಂದೊಂದು ಸಲ ಗುರುವಿಗೆ ಬದಲಾಗಿ ತಾವೇ ಹಾಡುವ ಪ್ರಸಂಗವೂ ಬರುತ್ತಿತ್ತು.

ಈ ದಿನಗಳಲ್ಲಿ ಮನಸೂರರು ಬಹಳ ಕಷ್ಟಪಟ್ಟರು. ಧಾರವಾಡದಲ್ಲಿ ಸಂಸಾರವನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಚಿಕ್ಕಚಿಕ್ಕ ಮಕ್ಕಳು.

ಹೀಗಾಗಿ ಧಾರವಾಡಕ್ಕೂ ಕೊಲ್ಲಾಪ್ರರಕ್ಕೂ ಓಡಾಡುತ್ತಲೇ ಇರಬೇಕಾಗುತ್ತಿತ್ತು. ಊರಿಗೆ ಬಂದಾಗಲೂ ಸಂಗೀತವೇನೂ ನಿಲ್ಲುತ್ತಿರಲಿಲ್ಲ. ಹೆಂಡತಿ ಗಂಭೀರತನದಿಂದ ಸಂಸಾರದ ಹೊಣೆಯನ್ನು ನಿರ್ವಹಿಸಿಕೊಂಡಿದ್ದರು. ಗಂಡ ಊರಿಗೆ ಹೊರಟುಹೋದರೆ ಆಕೆಗೂ ಬೇಸರದಿಂದ ನಿದ್ದೆಯೇ ಬರುತ್ತಿರಲಿಲ್ಲ. ರಾತ್ರಿ ಬಹುಹೊತ್ತಿನವರೆಗೆ ಜೋಳ ಬೀಸುತ್ತಾ ಬೀಸುವ ಕಲ್ಲಿನಪದ ಹಾಡುತ್ತಿದ್ದರು. ಅದನ್ನು ಕೇಳಿ ಜನ, 'ಮಲ್ಲಪ್ಪನ ತಂಬೂರಿ ನಿಂತಿತು, ಗಂಗವ್ವನ ತಂಬೂರಿ ಶುರುವಾಯಿತು' ಎಂದು ಮಾತನಾಡಿಕೊಳ್ಳುತ್ತಿದ್ದರು.

ಈ ಮಧ್ಯೆ ಗುಬ್ಬಿ ಕಂಪನಿಯವರು ತೆಗೆದ 'ಸುಭದ್ರಾ' ಚಿತ್ರಕ್ಕೆ ಮಲ್ಲಿಕಾರ್ಜುನ ಮನಸೂರರು ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದರು.

ಹೀಗೆ ಬುರ್ಜೀಖಾನರಲ್ಲಿ ನಾಲ್ಕು ವರ್ಷ ಪಾಠವಾಯಿತು. ಕೊನೆಕೊನೆಗೆ ಬುರ್ಜೀಖಾನರಿಗೂ ತಮ್ಮ ಶಿಷ್ಯನ ಯೋಗ್ಯತೆ ತಿಳಿಯಿತು. ತಮ್ಮ ಘರಾಣೆಯ ಕೀರ್ತಿ ಬೆಳಗುವುದು ಇವನಿಂದಲೇ ಎಂಬುದು ಮನದಟ್ಟಾಯಿತು. ಆಗ ನಿಯಮಿತವಾಗಿ ಪಾಠ ಹೇಳಲು ತೊಡಗಿದರು. ಆದರೆ ಅವರಿಗೂ ರಕ್ತದ ಒತ್ತಡವಿದ್ದಿತು. ಅದು ತೀವ್ರವಾದಾಗ ಮುಂಬಯಿಗೆ ಬಂದು ಆಸ್ಪತ್ರೆ ಸೇರಿದರು. ಮನಸೂರರನ್ನು ಅಲ್ಲಿಗೇ ಕರೆಸಿಕೊಂಡು ರುಗ್ಣಶಯ್ಯೆಯಲ್ಲಿ ಮಲಗಿಕೊಂಡೇ ಪಾಠ ಹೇಳಿಕೊಡಹತ್ತಿದರು. ಮನೆಯಿಂದ ಢಗ್ಗಾ ತರಿಸಿ ಎದೆಯ ಮೇಲಿಟ್ಟುಕೊಂಡು ಠೇಕಾ ಹಿಡಿದು ಕ್ಷೀಣದನಿಯಲ್ಲಿ ಹಾಡಿ ಕಲಿಸುತ್ತಿದ್ದರು. ಅದೇ ಸಮಯದಲ್ಲಿ ಬುರ್ಜೀಖಾನರ ಹಾಸಿಗೆಯ ಪಕ್ಕದಲ್ಲಿ ಇನ್ನೊಂದು ಬೆಡ್ಡಿನಲ್ಲಿ ಜಿನ್ನಾಸಾಹೇಬರ ಡ್ರೈವರ ಕಾಯಿಲೆ ಮಲಗಿದ್ದ. ಅವನು ಬುರ್ಜೀಖಾನರನ್ನು ಆಕ್ಷೇಪಿಸುತ್ತಿದ್ದ. "ನೀವು ಮುಸಲ್ಮಾನರಾಗಿದ್ದೂ ಒಬ್ಬ ಹಿಂದೂವಿಗೆ ಪಾಠ ಹೇಳಿಕೊಡುವುದೇ ? ಅದೂ ಈ ಸ್ಥಿತಿಯಲ್ಲಿ ? ಹಾಗೆ ಹೇಳಿಕೊಡಲೇಬೇಕಾದರೂ, ಎದೆಯಮೇಲೆ ಢಗ್ಗಾ ಯಾಕೆ ಇಟ್ಟುಕೊಳ್ಳುತ್ತೀರಿ ? ಇದರಿಂದ ನಿಮ್ಮ ಕಾಯಿಲೆ ಇನ್ನಷ್ಟು ಹೆಚ್ಚುವುದಿಲ್ಲವೇ ?". ಆದರೆ ಬುರ್ಜೀಖಾನರು ನಗುತ್ತಲೇ ಅವರಿಗೆ ಉತ್ತರ ಕೊಡುತ್ತಿದ್ದರು. "ನನ್ನ ಎದೆಯ ಬಡಿತ ನಿಲ್ಲುವವರೆಗೆ ಈ ಢಗ್ಗಾದ ಬಡಿತವನ್ನು ನಿಲ್ಲಿಸಲಾರೆ. ನಮ್ಮ

ಘರಾಣೆಯ (ಜಯಪುರ) ಸಂಗೀತವೇ ತಾಳದ ಚೌಕಟ್ಟಿನಲ್ಲಿ ನಿಲ್ಲು ವಂತಹದು''.

ಕೆಲವು ದಿನಗಳಲ್ಲೇ ಬುರ್ಜೀಖಾನರು ತೀರಿಕೊಂಡರು. ಮುಂದೆ ಮಲ್ಲಿಕಾರ್ಜುನ ಮನಸೂರರು ಯಾರಲ್ಲೂ ಸಂಗೀತ ಮುಂದುವರಿಸಲಿಲ್ಲ. ಕಲಿಯುವುದು ಮುಗಿಯಿತೆಂದಲ್ಲ; ಇವರಿಗೆ ಕಲಿಸಬಲ್ಲವರು ಇರಲಿಲ್ಲ ಎಂಬುದಕ್ಕಾಗಿ.

೧೯೪೪ರಲ್ಲಿ ಮಲ್ಲಿಕಾರ್ಜುನ ಮನಸೂರರು ಬುರ್ಜೀಖಾನ ರನ್ನು ಧಾರವಾಡಕ್ಕೆ ಕರೆತಂದಿದ್ದರು. ಅವರ ಕಚೇರಿಯು ನಡೆಯಿತು. ಈ ಲೇಖಕನೂ ಆಗ ಆ ಕಚೇರಿಗೆ ಹೋಗಿದ್ದ. ಬುರ್ಜೀಖಾನರದು ಆರಡಿ ಎತ್ತರದ ಭವ್ಯ ವ್ಯಕ್ತಿತ್ವ, ಗೌರವರ್ಣ. ಆಗ ಅವರಿಗೆ ಸಾಕಷ್ಟು ವಯಸ್ಸಾಗಿತ್ತು; ಜೊತೆಗೆ ಆರೋಗ್ಯವೂ ಚೆನ್ನಾಗಿರಲಿಲ್ಲ. ಬುರ್ಜೀಖಾನರು ಹಾಡುವಾಗ ಅವರ ಮಗ ಬಾಬಾ ಒಂದು ಕಡೆ, ಮನಸೂರರು ಒಂದು ಕಡೆ ತಂಬೂರಿ ನುಡಿಸಲು ಕುಳಿತರು. ಆರೋಗ್ಯ ಮತ್ತು ವಯಸ್ಸಿನ ಕಾರಣ ದಿಂದಾಗಿ ಎಷ್ಟು ಹೊತ್ತಾದರೂ ಸಂಗೀತ ರಂಗಾಯಿಸಲಿಲ್ಲ. ಗುರುವಿಗಿಂತ ಮುಂದೆ ಹೋಗಿ ಹಾಡಲು ಮನಸೂರರಿಗೆ ಇಷ್ಟವಿರಲಿಲ್ಲ. ಕೇಳುವವರಿಗೆ ತುಂಬಾ ನಿರಾಶೆಯಾಯಿತು. ಈತ ಮನಸೂರರ ಗುರುವೇ ಎಂದು ಸಂದೇಹವೇ ಆಯಿತು. ಆದರೆ ಸ್ವಲ್ಪ ಹೊತ್ತಿನ ನಂತರ ದನಿ ಬಿಸಿ ಯಾಯಿತು. ಬುರ್ಜೀಖಾನರು ಖಂಬಾವತಿ ರಾಗವನ್ನು ಆರಂಭಿಸಿದರು. ಅದನ್ನು ಕೇಳಿದ ಮೇಲೆ ಇವರೇ ಮಲ್ಲಿಕಾರ್ಜುನ ಮನಸೂರರಿಗೆ ತಕ್ಕ ಗುರು ಎನ್ನಿಸಿತು.

ಶಾಂತೇಶ ಪಾಟೀಲರ ಪಂಪಾ ಪಿಕ್ಚರ್ಸ "ಚಂದ್ರಹಾಸ" ಚಿತ್ರವನ್ನು ತೆಗೆದಾಗ, ಮನಸೂರರು ಆ ಚಿತ್ರದ ಸಂಗೀತ ನಿರ್ದೇಶಕರಾಗಿದ್ದರು. ಪ್ರಸಿದ್ಧ ನಟ ಹಂದಿಗನೂರು ಸಿದ್ಧರಾಮಪ್ಪನವರು ಖಲನಾಯಕ ದುಷ್ಟಬುದ್ಧಿಯ ಪಾತ್ರವಹಿಸಿದ್ದರು.

ಮಲ್ಲಿಕಾರ್ಜುನರು ಹಿಂದೂಸ್ತಾನೀ ಸಂಗೀತದ ಸಾರಸರ್ವಸ್ವವನ್ನು ಅರಗಿಸಿಕೊಂಡಿದ್ದರೂ ಸರಿಯಾದ ಪ್ರಚಾರವಿಲ್ಲದ್ದರಿಂದ ಅವರಿಗೆ ದೊರೆಯಬೇ ಬೇಕಾದಷ್ಟು ಕೀರ್ತಿ ದೊರೆತಿರಲಿಲ್ಲ. ಹಣದ ವಿಚಾರವಂತೂ ಸರಿಯೇ.

ಇದಕ್ಕೆ ಕಾರಣಗಳು ಅನೇಕ. ಶುಲ್ಕದ ವಿಚಾರದಲ್ಲಿ ಭಿನ್ನಾಭಿಪ್ರಾಯ ವುಂಟಾಗಿ ಅವರು ಆಕಾಶವಾಣಿಯಲ್ಲಿ ಹಾಡುತ್ತಲೇ ಇರಲಿಲ್ಲ. ಅಂತಹ ದೊಂದು ದೊಡ್ಡ ಪ್ರಸಾರಮಾಧ್ಯಮ ದೂರವಾಗಿದ್ದರಿಂದ ಮನಸೂರರಿಗೆ ಬೇರೆಯವರಂತೆ ಜನಪ್ರಿಯತೆ ದೊರೆಯಲಿಲ್ಲ. ಜೊತೆಗೆ ಬೇರೆ ಅನೇಕರಂತೆ ಮೇಲೆಬಿದ್ದು ಹೋಗಿ ತಮ್ಮ ವಿದ್ಯೆಯನ್ನು ಪ್ರದರ್ಶಿಸುವ ಸ್ವಭಾವವೂ ಅಭಿಮಾನಿಯಾದ ಅವರಿಗೆ ಸರಿಹೋಗುತ್ತಿರಲಿಲ್ಲ. ಹೀಗಾಗಿ ೧೯೬೦ರ ವರೆಗೆ ಮನಸೂರರ ಆರ್ಥಿಕಸ್ಥಿತಿಯೂ ಸುಧಾರಿಸಿಯೇ ಇರಲಿಲ್ಲ.

ಒಂದು ದಿನ ರಾತ್ರಿ ಮೂರು ಗಂಟೆಯಾಗಿತ್ತು. ಅವರಾಗ ವಾಸಿ ಸುತ್ತಿದ್ದುದು ಧಾರವಾಡದ ಒಂದು ಚಿಕ್ಕ ಮನೆಯಲ್ಲಿ. ಆ ಮನೆಯ ಒಂದು ಚಿಕ್ಕಕೋಣೆಯಲ್ಲಿ ಮನಸೂರರ ದೊಡ್ಡ ಸಂಸಾರ ಮಲಗಿತ್ತು. (ಮಲ್ಲಿ ಕಾರ್ಜುನರಿಗೆ ಅವರು ಆಯುಷ್ಯವಿಡೀ ಆರಾಧಿಸಿದ ಸಪ್ತಸ್ವರಗಳೇ ಮೈದ ಳೆದು ಬಂದಂತಿರುವ ಏಳು ಜನ ಹೆಣ್ಣುಮಕ್ಕಳೂ, ಆರಾಧನೆಗೆ ಅವಶ್ಯಕ ವಾಗಿದ್ದ ಅವರ ಏಕಾಗ್ರಚಿತ್ತವೇ ಮೂರ್ತಿಮತ್ತಾದಂತೆ ಒಬ್ಬ ಗಂಡು ಮಗನೂ ಇದ್ದಾರೆ). ಆ ರಾತ್ರಿ ಶ್ರೀಮತಿ ಮನಸೂರರ ಸ್ಥಿತಿ ‘ ಈಗಲೋ ಇನ್ನಾವಾಗಲೋ ’ ಎಂಬ ಮಟ್ಟವನ್ನು ಮುಟ್ಟಿತ್ತು. ಇಳಿಸಿದ್ದ ಕಂದೀಲು ಮಿಣಿಮಿಣಿ ಎನ್ನುತ್ತಿತ್ತು. ಆಗ ಅಡುಗೆಮನೆಯ ಬಾಗಿಲಿಗೆ ಮಲಗಿದ್ದ ಅವರ ದೊಡ್ಡಮಗಳು ನೀಲವ್ವ ಮೈಮೇಲೆ ‘ ತಣ್ಣಗೆ ’ ಹರಿದಾಡಿದ ‘ ಇಲಿ ’ ಯನ್ನು ನಿದ್ದೆಗಣ್ಣಿನಲ್ಲಿಯೇ ಚಿಮ್ಮಿ ಶಪಿಸುತ್ತಾ ಸರಿದು ಮಲಗಿ ದಳು. ಕಿರಿಯ ಮಗಳು ಒಂದೂವರೆ ವರ್ಷದ ಗಿರಿಜಾ ಮೇಲಕ್ಕೆದ್ದು ಕುಳಿತು, ‘ ಅಪ್ಪಾ ಆವು, ಅಕ್ಕಾ ಆವು ’ ಎನ್ನತೊಡಗಿತು. ಮಗುವನ್ನು ಗದರಿಸಿ ಮಲಗಿಸಿದರು. ಆದರೆ ತುಸು ಹೊತ್ತಿನಲ್ಲಿ ಮಲ್ಲಿಕಾರ್ಜುನರ ಕೈಗೇನೋ ತಣ್ಣಗೆ ಹತ್ತಿದಂತಾಗಿ ಎಚ್ಚರವಾಯಿತು. ಎದ್ದು ಕಂದೀಲನ್ನು ದೊಡ್ಡದು ಮಾಡಿ ನೋಡುತ್ತಾರೆ; ನಾಗರ ಹಾವು. ಹೆಡೆ ತೆಗೆದುಕೊಂಡು ಸುರುಳಿ ಸುತ್ತಿಕೊಂಡು ಇವರ ತಲೆಯ ಬಳಿ ಕುಳಿತಿದೆ. ನೋಡಿ ಒಂದು ಕ್ಷಣ ದಿಙ್ಮೂಢರಾದರು. ಏನು ಮಾಡಬೇಕು. ಹತ್ತು ಅಡಿ ಉದ್ದದ ಕೋಣೆಯಲ್ಲಿ ಒಂಬತ್ತು ಜನ ಮಲಗಿದ್ದಾರೆ. ಮಕ್ಕಳು ಮರಿ ತುಂಬಿದ ಇಂತಹ ಮನೆಯಲ್ಲಿ, ಬಾಗಿಲು ಮುಚ್ಚಿರುವಾಗ, ಅಪರಾತ್ರಿಯಲ್ಲಿ ಹಾವು

ಕಾಣಿಸಿಕೊಂಡಿದೆ. ಹಾಸಿಗೆಯಲ್ಲಿ ಕುಳಿತಿದ್ದಂತೆಯೇ ಕಣ್ಣುಮುಚ್ಚಿದರು. 'ಶಿವಯೋಗಿಯ' ಇಚ್ಛೆಯಿದ್ದಂತಾಗಲಿ ಎಂದು ಮನದೊಳಗೆ ನುಡಿದು ಕೊಂಡು ಮಕ್ಕಳನ್ನೆಲ್ಲಾ ಒಬ್ಬೊಬ್ಬರನ್ನಾಗಿ ಮೆಲ್ಲನೆ ಎಬ್ಬಿಸಿದರು. ಎಲ್ಲ ರನ್ನೂ ದೂರ ಒಂದು ಮೂಲೆಯಲ್ಲಿ ಸರಿಸಿ ನಿಲ್ಲಿಸಿ ಇವರು ಧೈರ್ಯವಾಗಿ ಮುನ್ನಡೆದು ಹೋಗಿ ಬಾಗಿಲು ತೆಗೆದರು. ನಾಗಪ್ಪ ಬಾಗಿಲ ಕಡೆ ನೋಡಿದ. ಮೆಲ್ಲಗೆ ಸುರುಳಿ ಬಿಚ್ಚಿ ಮುಂದೆ ಸರಿಯತೊಡಗಿದ. ಇವರೆಲ್ಲರ ಕಡೆ ಆಗಾಗ ಸರ್ಪಾವಲೋಕನ ಮಾಡುತ್ತಾ ಬಾಗಿಲ ಕಡೆಗೆ ಸರಿಯುತ್ತ ನಡೆದ. ಆ ಹಾವಿನ ಸಂಪೂರ್ಣ ಗಾತ್ರವನ್ನು ಕಂಡು ಮನಸೂರರ ಕಾಲು ತತ್ತರಿಸಿತು, ಕುಸಿದು ಕುಳಿತರು. ಆವಾಗಲೇ ಹಾವು ಹೊಸ್ತಿಲನ್ನು ದಾಟಿ ಹೊರಟು ಹೋಗಿತ್ತು.

ಮರುದಿನ ಬೆಳಗಾಗುತ್ತಲೇ ಧಾರವಾಡದ ಹಾವೇರಿ ಪೇಟೆಯ ಮುರಘಾ ಮಠಕ್ಕೆ ಹೋಗಿ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳ ದರ್ಶನ ತೆಗೆದುಕೊಂಡರು. ಮನಸೂರರು ನಿವೇದಿಸಿಕೊಂಡ ಕತೆಯನ್ನೆಲ್ಲ ಕೇಳಿ ಶ್ರೀಗಳವರು : "ಬೇರೇನಿಲ್ಲ, ಶ್ರೀ ಶಿವಯೋಗಿಗಳೇ ಆ ರೂಪದಲ್ಲಿ ಬಂದು ದರ್ಶನ ಕೊಟ್ಟು ಹೋಗಿದ್ದಾರೆ. ನಿನಗಿನ್ನು ಮೇಲೆ ಕಲ್ಯಾಣವಾಗುವುದು" ಎಂದು ಆಶೀರ್ವದಿಸಿದರು.

ಸ್ವಾಮೀಜಿಯವರ ಮಾತು ನಿಜವಾಯಿತು. ಅಲ್ಲಿಂದ ಮುಂದೆ ದಿನ ದಿನಕ್ಕೆ ಮಲ್ಲಿಕಾರ್ಜುನ ಮನಸೂರರ ಕೀರ್ತಿ ಬೆಳೆಯಿತು. ಶ್ರೀಯುತ ಕೆ. ಡಿ. ದೀಕ್ಷಿತರ ಪ್ರಯತ್ನದಿಂದಾಗಿ ಆಕಾಶವಾಣಿಯ ಸಂಗೀತ ಸಲಹಾಕಾರರಾಗಿ ನಿಯಮಿಸಲ್ಪಟ್ಟರು. ಇಡೀ ಭಾರತದಲ್ಲಿ ಎಲ್ಲ ಕಡೆಯೂ ಕಚೇರಿಗಳಾದವು. ಕೇಳಿದವರೆಲ್ಲಾ ಮನಸೂರರ ವಿದ್ವತ್ತಿಗೆ, ಪ್ರತಿಭೆಗೆ ಮಾರುಹೋದರು. ಅವರಿಗೆ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ದೊರೆತವು. ಮನಸೂರರಿಗೆ ಪದ್ಮಭೂಷಣ ಪ್ರಶಸ್ತಿ ಬಂದಾಗ ಭಾರತದ ಪ್ರಮುಖಪತ್ರಿಕೆಗಳಲ್ಲೊಂದಾದ "ಟೈಮ್ಸ್ ಆಫ್ ಇಂಡಿಯಾ" ಮುಖಪುಟದಲ್ಲಿ ಮನಸೂರರ ಫೋಟೊವನ್ನು ಪ್ರಕಟಿಸಿ ಅವರನ್ನು ಗೌರವಿಸಿತು.

ಮಲ್ಲಿಕಾರ್ಜುನ ಮನಸೂರರು ಸಂಗೀತದ ಜೊತೆಗೆ ಕನ್ನಡ ಭಾಷೆಗೂ, ಕನ್ನಡದ ಸಂಗೀತ ಕೃತಿಗಳಿಗೂ ವಿಶೇಷ ಸೇವೆ ಸಲ್ಲಿಸಿದ್ದಾರೆ. ನಲವತ್ತು ವರ್ಷಗಳ ಹಿಂದೆ ವಚನಗಳನ್ನು ಹಾಡುವುದೆಂದರೆ ಮಲ್ಲಿಕಾರ್ಜುನ ಮನಸೂರರಿಗೆ ತಮಾಷೆ ಎನ್ನಿಸುತ್ತಿತ್ತು. ಆ ಮನೋಭಾವವನ್ನು ದೂರಮಾಡಿದರು ಆಧುನಿಕ ಕನ್ನಡದ ಜನಪ್ರಿಯ ಸಾಹಿತಿ ದಿವಂಗತ ಅ.ನ. ಕೃಷ್ಣರಾಯರು. ಅ. ನ. ಕೃ. ಅವರಿಂದ ಪ್ರೇರಿತರಾದ ಮಂಗಳೂರಿನ ಸಿ. ಎಸ್. ಶಾಸ್ತ್ರಿಯವರು ಕಚೇರಿಗಳಲ್ಲಿ ವಚನಗಳನ್ನು ಹಾಡುವುದನ್ನು ಆರಂಭಿಸಿದರು. ಅದನ್ನು ಅ. ನ. ಕೃ. ಅವರು ಕೇಳಿ, ನೆನಪಿನಲ್ಲಿಟ್ಟುಕೊಂಡು ಮಲ್ಲಿಕಾರ್ಜುನ ಮನಸೂರರ ಮುಂದೆ ಆ ವಚನಗಳನ್ನು ಅದೇ ಧಾಟಿಯಲ್ಲಿ ಹಾಡಿ ತೋರಿಸಿದರು. ಆಗ ಮಲ್ಲಿಕಾರ್ಜುನ ಮನಸೂರರಿಗೂ ವಿಷಯ ಮನದಟ್ಟಾಯಿತು. ಈಗ ಭಾರತದ ಯಾವ ಮೂಲೆಯಲ್ಲಿ ಕಚೇರಿಯಾದರೂ ಮನಸೂರರು ಕನ್ನಡದ ಒಂದು ಕೃತಿಯನ್ನಾದರೂ ಹಾಡದೆ ಮುಗಿಸುವುದಿಲ್ಲ.

**ಉಪಸಂಹಾರ :**

ಉಪಸಂಹಾರವೆನ್ನುವುದಕ್ಕಿಂತ ವೇಣೀ ಸಂಹಾರ ಎಂದರೆ ಸೂಕ್ತವಾದೀತೇನೋ. ಹಾಗೆಂದರೆ ಬಿಡಿಯಾಗಿದ್ದ ನೀಳಕೇಶರಾಶಿಯನ್ನೆತ್ತಿ ಮುಡಿ ಕಟ್ಟುವುದು— ತುರುಬು ಕಟ್ಟುವುದು ಎಂದರ್ಥ. ಅನೇಕ ವಿಷಯಗಳಲ್ಲಿ ತುರುಬು ನೆನೆಸಿಕೊಳ್ಳುವುದು ಕನ್ನಡಿಗರ ಹಣೆಯ ಬರಹ. ಆದರೆ ಸಂಗೀತದ ವಿಷಯದಲ್ಲಿ ಮಾತ್ರ ಹಾಗಿಲ್ಲ; ಸುದೈವ! ಈ ಗ್ರಂಥದ ಆರಂಭದಲ್ಲಿ ನಾನು ಹೆಸರಿಸಿರುವ ಡಾಕ್ಟರ ಝಾ ಎಂಬುವರು ಒಂದು ದಿನ ನನ್ನನ್ನು ಸ್ನೇಹದಿಂದಲೇ ಆಕ್ಷೇಪಿಸಿದರು, “ನೀವು ಸಾಮಾನ್ಯರಲ್ಲಪ್ಪ ಕನ್ನಡಿಗರು! ನಮ್ಮನ್ನು (ಎಂದರೆ ಮಿಥಿಲಾ-ಬಿಹಾರ-ದೇಶೀಯರನ್ನು) ಎರಡುನೂರು ವರ್ಷ ಆಳಿದ ಪ್ರಚಂಡರು. ಅದಕ್ಕಾಗಿ ನಿಮ್ಮ ಮೇಲೆ ವಿಪರೀತ ಕೋಪ ನಮಗೆ. ಆದರೇನು ಮಾಡುವುದು? ನೀವು ನಮಗೆ ಕೊಟ್ಟ ಸಂಗೀತವನ್ನು ನೆನೆದು ಸುಮ್ಮನಿರಬೇಕಾಗಿದೆ.”

"ನಿಮಗೆ-ಬಿಹಾರಿಗಳಿಗೆ – ನಾವು—ಸಂಗೀತ ಕೊಟ್ಟೆವೆ ?"

"ನಮಗಷ್ಟೇ ಎಂದರೇನು? ಹಿಂದೂಸ್ತಾನೀ ಸಂಗೀತವೆಲ್ಲವೂ ಕರ್ನಾಟಕದ ದೇಣಿಗೆ!"

ಸಮಸ್ತ ಹಿಂದೂಸ್ತಾನದಲ್ಲಿಯ ಹಿಂದೂಸ್ತಾನಿ ಸಂಗೀತಗಾರರಲ್ಲಿ ಅಗ್ರಪಂಕ್ತಿಗೆ ಸೇರಿದವರು ಉತ್ತರ ಕರ್ನಾಟಕದವರು ಎಂದು ಹೇಳಿ ಪು. ಲ. ದೇಶಪಾಂಡೆಯವರು ನನಗೆ ಮದ್ಯ ಕುಡಿಸಿದ್ದರು. ಡಾಕ್ಟರ ಝಾ ಅವರು ತಮ್ಮ ಉದ್ಗಾರದಿಂದ ನನಗೆ ಜೇಳು ಕಡಿಸಿದರು. ತತ್ಪರಿಣಾಮವಾಗಿ ಮೂರೂವರೆ ವರ್ಷಗಳವರೆಗೆ ಸಂಶೋಧನೆಯ ಭೂತ ಹಿಡಿದಿತ್ತು. ನಮ್ಮ ಸಂಗೀತದ ಭೂತ-ವರ್ತಮಾನಗಳನ್ನು ರಂಗಭೂಮಿಯ ಮೇಲೆ ಬೆಂಗಳೂರು ಆಕಾಶವಾಣಿಯ ಆಶೀರ್ವಾದದಿಂದ ಗಂಗಾ ಕಾವೇರಿ ಎಂಬ ಕಾರ್ಯಕ್ರಮ ರೂಪದಲ್ಲಿ ಪ್ರದರ್ಶಿಸಿದ ಮೇಲೆ ನನ್ನ ಮತ್ತು ಇನ್ನಿತರರ ಭೂತ ಬಿಡಿಸಿದಂತಾಯಿತು. ಅನೇಕರ ತಪ್ಪು ತಿಳಿವಳಿಕೆಗಳು ದೂರಾದವು. ಈಗ ಈ ಪುಸ್ತಕವನ್ನೋದಿದವರು ಕೂಡಾ ಐತಿಹಾಸಿಕ ತಥ್ಯ ಸತ್ಯಗಳನ್ನು ಮನಗಂಡು ಆನಂದ ಆಶ್ಚರ್ಯ ಅಭಿಮಾನಗಳಿಂದ ಬೀಗುವರೆಂದು ಭಾವಿಸುತ್ತೇನೆ.

ಎಂಟನೆಯ ಶತಮಾನದಿಂದ ಒಂದು ಸಾವಿರ ವರ್ಷಗಳ ಅವಧಿಯಲ್ಲಿ ಮತಂಗನಿಂದ ಮಾಯಿಯುವರೆಗೆ ಸಂಗೀತದ ಮೇಲೆ ಶಾಸ್ತ್ರ ಗ್ರಂಥಗಳನ್ನು ಬರೆದವರೆಲ್ಲಾ ಕರ್ನಾಟಕದವರು. ಅವುಗಳ ಸೂತ್ರಗಳೇ ಇಂದಿಗೂ ಹಿಂದೂಸ್ತಾನೀಯವರಿಗೂ ಕರ್ನಾಟಕೀಯವರಿಗೂ ವೇದವಾಕ್ಯ ಎಂದರೆ ಯಾವ ಕನ್ನಡಿಗನ ಎದೆಯುಬ್ಬಲಿಕ್ಕಿಲ್ಲ ? ಆದರೆ ನಮ್ಮ ಸಂಗೀತದ ಇತಿಹಾಸದಲ್ಲಿ ಒಂದೆರಡು ಸಣ್ಣ ಸುಳ್ಳುಗಳು ನುಸುಳಿಕೊಂಡು ಮಹಾ ಅನಾಹುತಗಳನ್ನು ಮಾಡಿವೆ. ಅವುಗಳನ್ನು ನಿವಾರಿಸುವಲ್ಲಿ ಈ ಪುಟ್ಟ ಹೊತ್ತಿಗೆಯ ಶ್ರಮ ಸಾರ್ಥಕವಾದರೆ ಸಾಕು.

## ಸಾವಿರದ ಸುಳ್ಳೆ ?

ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಾರ್ಯ ಮಾಡಿಸಬೇಕಂತೆ. ಆದರೆ ಯಾರೋ ಯಾವಾಗಲೋ ಒಂದು ಸಾವಿರದ ಸುಳ್ಳನ್ನು ಹೇಳಿದರು :

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ ಕರ್ನಾಟಕ ಸಂಗೀತವೆಂದು ಹನ್ನೆರಡನೇ ಶತಕದಲ್ಲಿ ಹೆಸರು ಕೊಟ್ಟನೆಂಬುದಾಗಿ ನಾವು ಚಿಕ್ಕಂದಿನಿಂದಲೂ ಒಂದು ಜಾಣ್ನುಡಿಯನ್ನು ಕೇಳುತ್ತ ಬಂದಿದ್ದೇವೆ. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂದು. ಆದರೆ ಸೋಮೇಶ್ವರನು ದಕ್ಷಿಣದ ಸಂಗೀತಕ್ಕೆ ಕರ್ನಾಟಕ ಸಂಗೀತವೆಂದು ನಾಮಕರಣ ಮಾಡಿದನೆಂಬ ಸುಳ್ಳಿಗೆ ಸಾವಿಲ್ಲವೇನೋ ಎನಿಸುತ್ತದೆ. ಈವರೆಗೆ ಅನೇಕ ಗಾಯನವಾದನ ವಿದ್ವಾಂಸರೂ ಸಾಹಿತಿಗಳೂ ಪಂಡಿತರೂ ಆ ಸುಳ್ಳನ್ನು ಸತ್ಯವೆಂದೇ ನಂಬಿದ್ದಾರೆ. ತಮ್ಮ ಗ್ರಂಥದಲ್ಲಿ ಅವನ್ನು ನಿಜವೆಂಬಂತೆ ನಮೂದಿಸಿದ್ದಾರೆ. ಉದಾಹರಣೆಗೆ ಟಿ. ಓ. ಗೋಸ್ವಾಮಿ ಅವರ "ದಿ ಸ್ಟೋರಿ ಆಫ್ ಇಂಡಿಯನ್ ಮ್ಯೂಜಿಕ್" ಗ್ರಂಥದಲ್ಲಿ ಬಂದಿರುವ ಈ ನಿರಾಧಾರ ಸಂಗತಿಯನ್ನು ಡಾಕ್ಟರ್ ತಿಪ್ಪೇರುದ್ರಸ್ವಾಮಿ ಅವರು ತಮ್ಮ ಗ್ರಂಥದಲ್ಲಿ ಉದ್ಧರಿಸಿದ್ದಾರೆ. ಸೋಮೇಶ್ವರನು ಹಾಗೆ ಹೆಸರು ಕೊಟ್ಟಿಲ್ಲವೆಂದು ಗೊತ್ತಿರುವ ಕೆಲ ನಮ್ಮ ವಿಮರ್ಶಕರೂ ಸಂಗೀತಶಾಸ್ತ್ರಿಗಳೂ ಬೇಕೆಂತಲೇ ಬಾಯ್ಬಿಡದಿದ್ದಾರೆ.

ಇದರಿಂದಾಗಿ ಕರ್ನಾಟಕಕ್ಕೆ ದ್ರೋಹವಾಗಿದೆ. ಮೊದಲನೆಯದಾಗಿ ದಕ್ಷಿಣದ ಸಂಗೀತ ಮಾತ್ರವೇ ಕರ್ನಾಟಕದ ಸಂಗೀತವೆಂಬ ಭಾವನೆ ನಮ್ಮಲ್ಲಿ ಮೂಡಿ, ಸಮಸ್ತ ಭಾರತದ—ಎಂದರೆ ಉತ್ತರಾದಿ ಸಂಗೀತ ಸಮೇತವಾಗಿ—ಸಂಗೀತವೆಲ್ಲವೂ ಕರ್ನಾಟಕದ ದೇಣಿಗೆ ಎಂಬ ಸತ್ಯ ನಮ್ಮಿಂದ ಕಣ್ಮರೆಯಾಗಿದೆ. ಎರಡನೆಯದಾಗಿ ಕರ್ನಾಟಕೀ ಸಂಗೀತ ಮಾತ್ರ ತಮ್ಮದು, ಹಿಂದೂಸ್ತಾನೀ ಅಲ್ಲ ಎಂಬ ಭಾವನೆ ಭಾರತೀಯರ ಅನೈಕ್ಯಕ್ಕೆ ಕಾರಣವಾಗಿದೆ. ಹೃನ್ಮನಗಳನ್ನು ಒಂದುಗೂಡಿಸಬೇಕಾದ ಸಂಗೀತ ಕಲೆ ಭಾರತವನ್ನು ಉತ್ತರ ದಕ್ಷಿಣ ಎಂಬುದಾಗಿ ಒಡೆದಿದೆ. ಈ ಕುಚೋದ್ಯ ಇಲ್ಲಿಗೆ ನಿಲ್ಲಲಿಲ್ಲ. ಕರ್ನಾಟಕ ಸಂಗೀತವೆಂಬುದು ಸ್ವತಃ ಕರ್ನಾಟಕವನ್ನೇ ಉತ್ತರ-ದಕ್ಷಿಣವೆಂದು ವಿಭಜಿಸಿದೆ. ಈ ಕುಚೋದ್ಯಕ್ಕೆ ಪ್ರಚೋದಕರು ಪ್ರೊಫೆಸರ್ ಪಿ. ಸಾಂಬಮೂರ್ತಿ.

## ದಕ್ಷಿಣೋತ್ತರ ಭೇದತಃ ಎಂಬ ಭೇದ ನೀತಿ

ಸಾಂಬಮೂರ್ತಿಯವರು "ಹಿಸ್ಟರಿ ಆಫ್ ಸೌತ್ ಇಂಡಿಯನ್ ಮ್ಯೂಜಿಕ್" ಎಂಬ ತಮ್ಮ ಗ್ರಂಥದಲ್ಲಿ ಹರಿಪಾಲನ ಸಂಗೀತ ಸುಧಾಕರ ಗ್ರಂಥದೊಳಗಿನದೆಂದು ಹೇಳಿ ಒಂದು ಶ್ಲೋಕವನ್ನು ಕೊಟ್ಟಿದ್ದಾರೆ. ಅದನ್ನು ಡಾ॥ ತಿಪ್ಪೇರುದ್ರಸ್ವಾಮಿಗಳೂ, ಪ್ರೊ. ಎಸ್. ಕೆ. ರಾಮಚಂದ್ರರಾಯರೂ ತಮ್ಮ ಪುಸ್ತಕದಲ್ಲಿ ಉದ್ಧರಿಸಿದ್ದಾರೆ :

> ತದಪಿ ದ್ವಿವಿಧಂ ಜ್ಞೇಯಂ ದಕ್ಷಿಣೋತ್ತರ ಭೇದತಃ ॥
> ಕರ್ಣಾಟಕಂ ದಕ್ಷಿಣೇ ಸ್ಯಾಧಿಂದುಸ್ಥಾನೀ ತಥೋತ್ತರೇ ॥

ಹರಿಪಾಲನ ಗ್ರಂಥ ಹದಿಮೂರನೆಯ ಶತಮಾನದ್ದು. ಹಾಗಾದರೆ ಆಗಲೇ ಅವನು ಹಾಗೆ ಹೇಳಬೇಕಾದರೆ ಹದಿಮೂರನೆ ಶತಮಾನದಷ್ಟು ಪೂರ್ವದಲ್ಲಿಯೇ ಭಾರತೀಯ ಸಂಗೀತ ಎರಡಾಗಿ ಒಡೆದಿತ್ತೆಂದೂ, ಕರ್ನಾಟಕ ಸಂಗೀತವೂ ಅಷ್ಟು ಪುರಾತನವಾದುದೆಂದೂ ನಮ್ಮವರಲ್ಲಿ ಭಾವನೆ ಬೇರೂರಿ ಬಿಟ್ಟಿದೆ. ಆದರೆ ಹರಿಪಾಲನ ಗ್ರಂಥದಲ್ಲಿ ಆ ಶ್ಲೋಕವಿಲ್ಲ. ಗ್ರಂಥ ಅಚ್ಚಾಗಿಲ್ಲ; ಅದರ ಕೈ ಬರಹದ ಪ್ರತಿ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿದೆ. ಸಾಂಬಮೂರ್ತಿಯವರು ಉದ್ಧರಿಸುವ ಶ್ಲೋಕ ಅದರಲ್ಲಿ ಕಾಣಬರದು. ಅದಿರುವುದು ಅಪ್ಪಾ ತುಳಸಿ ಎಂಬುವರು ೧೯೧೦ರಲ್ಲಿ ಬರೆದ ಗ್ರಂಥದಲ್ಲಿ. ಅದರ ಹೆಸರೂ "ಸಂಗೀತಸುಧಾಕರ" ಎಂದೇ ಇರುವುದರಿಂದ ಅದರ ಶ್ಲೋಕವನ್ನೆತ್ತಿ ಸಾಂಬಮೂರ್ತಿಯವರು ಹರಿಪಾಲನ ಗ್ರಂಥದಲ್ಲಿ ತಂದು ತುರುಕಿಬಿಟ್ಟರು. ಇದು ಉದ್ದೇಶ ಪೂರ್ವಕವಾಗಿ ಮಾಡಿದ ಕುಚೋದ್ಯವೆ ? ಇಲ್ಲವೇ, ಸಾಂಬಮೂರ್ತಿಯವರು ಹರಿಪಾಲನ ಹಾಗೂ ತುಳಸಿಯ ಗ್ರಂಥಗಳ "ನಾಮಸಾದೃಶ್ಯೇನ ವಂಚಿತ"ರಾಗಿರಬಹುದೇ ? ಸಾಂಬಮೂರ್ತಿಯವರ ಪಾಂಡಿತ್ಯದ ಬಗೆಗೆ ನನಗೆ ತುಂಬಾ ಗೌರವವಿದೆ. ಅಂತಹ ಪಂಡಿತರು ಹಾಗೆ ವಂಚಿತರಾಗಿರಲು ಸಾಧ್ಯವಿಲ್ಲ.

## ಇತೋ ಭ್ರಷ್ಟಸ್ತತೋ ಭ್ರಷ್ಟಃ

ಭಾರತೀಯ ಅಥವಾ ಹಿಂದೂಸ್ತಾನೀ ಸಂಗೀತದಿಂದ ಭಿನ್ನವಾದ ಸ್ವತಂತ್ರವಾದ ಸಂಗೀತ ಕರ್ನಾಟಕ ಸಂಗೀತವೆಂಬ ಭಾವನೆಯಿಂದಾಗಿ ಭಾವನಾತ್ಮಕವಾಗಿ ಭಾರತವನ್ನು ಉತ್ತರ–ದಕ್ಷಿಣವಾಗಿ ಒಡೆಯುವುದು ಹಿಂದಿನ ಆಳರಸರಾದ ಬ್ರಿಟಿಷರಿಗೆ ಒಳ್ಳೆಯದಾಗಿ ಕಂಡಿತು. ಅದಕ್ಕಾಗಿ ಅವರು 'ಕರ್ನಾಟಕ ಮ್ಯೂಜಿಕ್' ಎಂಬುದಾಗಿ ದಕ್ಷಿಣದ ಸಂಗೀತಕ್ಕೆ ಒಂದು ರೀತಿಯಲ್ಲಿ 'ಎ ಲೋಕಲ್ ಹ್ಯಾಬಿಟೇಶನ್ ಅಂಡ್ ಎ ನೇಮ್' ಕೊಟ್ಟರು. ಅದರಿಂದಾಗಿ ಬ್ರಿಟಿಷರಿಗೆ ವಿಶೇಷ ವಿರೋಧವನ್ನು ತೋರದಿದ್ದ ಮದರಾಸಿನ ಜನ ಪ್ರತಿಷ್ಠಿತರಾದರು. ಅಲ್ಲಿಯ ಕಲಾವಿದರಿಗೆ ಅಲ್ಲಲ್ಲಿನ ಚಿಕ್ಕ ಪುಟ್ಟ ರಾಜರುಗಳಾಶ್ರಯವಲ್ಲದೆ ಬ್ರಿಟಿಷರ ಕೃಪಾಛತ್ರವೂ ದೊರೆಯಿತು. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ತಮಿಳರು ಮುಂದೆ ಬಂದರು. ಮೈಸೂರಿನ ಬ್ರಿಟಿಷ್ ರೆಸಿಡೆಂಟ್ ಅಧಿಕಾರಿಗಳ ಹಾಗೂ ಅವರುಗಳ ಮೂಲಕವಾಗಿ ಬಂದಿದ್ದ ದಿವಾನರುಗಳ ಮುಖಾಂತರವಾಗಿ ತಮಿಳು ಸಂಗೀತಗಾರರು ಮೈಸೂರ ಸಂಸ್ಥಾನದಲ್ಲಿಯೂ, ಆಸ್ಥಾನದಲ್ಲಿಯೂ, ಪ್ರಸ್ಥ ಬೆಳೆಸಿಕೊಂಡರು. ತ್ರಿಮೂರ್ತಿಗಳೆಂದು ದೊಡ್ಡ ಗೌರವವನ್ನು ಅವರೆಲ್ಲ ಸೇರಿ ತ್ಯಾಗರಾಜ–ದೀಕ್ಷಿತ–ಶಾಮಕೃಷ್ಣರಿಗೆ ಕೊಟ್ಟು ಕೂರಿಸಿದರು. ಅವರು ತೆಲಗು ಹಾಗೂ ಸಂಸ್ಕೃತ ಭಾಷೆಗಳಲ್ಲಿ ರಚಿಸಿದ್ದ–ಸಂಖ್ಯೆಯಲ್ಲಿ ಒಟ್ಟು ಒಂದು ಸಾವಿರ ಕೂಡಾ ಆಗದ–ಕೃತಿಗಳಿಂದಾಗಿ ಕನ್ನಡಭಾಷೆ ಕನ್ನಡನಾಡಿನ ಸಂಗೀತದಿಂದ ಮಾಯವಾಯಿತು. ಎಂತಹ ವಿಪರ್ಯಾಸ! ಮೈಸೂರಿನಲ್ಲಿ ತಮಿಳರು ತೆಲಗು ಕೃತಿಗಳನ್ನು ಹಾಡಿದರೆ ಅದು ಕರ್ನಾಟಕ ಸಂಗೀತವೆನ್ನಿಸಿಕೊಂಡಿತು.

ಇನ್ನು ಹಿಂದೂಸ್ತಾನೀ ಸಂಗೀತದಲ್ಲಿಯಂತೂ ಬ್ರಿಜ್‌ಭಾಷೆಯೇ ಸರ್ವಸಾಮಾನ್ಯ. ಹೀಗಾಗಿ ಕನ್ನಡಭಾಷೆ ಇಲ್ಲಿಯೂ ಸಲ್ಲದಾಗಿ ಅಲ್ಲಿಯೂ ಸಲ್ಲದಾಯಿತು.

## ಮೈಸೂರೊಡೆಯರ ಕಳಕಳಿ

ನಮ್ಮ ಸಂಗೀತದಲ್ಲಿ ನಮ್ಮ ಭಾಷೆಗೇ ಸ್ಥಾನವಿಲ್ಲವಲ್ಲ ಎಂಬ ಕೊರಗು ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕಾಡುತ್ತಿತ್ತು. ಆದರೆ ಅವರು

ಅಸಹಾಯಕರಾಗಿದ್ದರು. ಹಿಂದಿನ ದಿವಾನರುಗಳೆಲ್ಲ ಶಾಲೆಗಳಲ್ಲಿ ಮಾತೃ ಭಾಷೆಯಾದ ಕನ್ನಡಕ್ಕೆ ದ್ವಿತೀಯ ಸ್ಥಾನವನ್ನು ಕೊಟ್ಟು ಕನ್ನಡಾಭಿಮಾನಕ್ಕೆ ಕೊಡಲಿಯೇಟನ್ನು ಹಾಕಿದರು. ಹಾಗಾದರೆ ಸಂಗೀತದ ಮೂಲಕವಾಗಿ ಯಾದರೂ ಕನ್ನಡತನವನ್ನು ಜನಗಳೆದೆಯಲ್ಲಿ ಬಿತ್ತಬೇಕೆಂದು ಅವರಿಗನ್ನಿಸಿತು. ಅದಕ್ಕಾಗಿ ತಮ್ಮ ಆಸ್ಥಾನದ ಸಂಗೀತಗಾರರೆಲ್ಲರಿಗೆ ಮಹಾರಾಜರು ಕನ್ನಡದಲ್ಲಿ ಕೃತಿ ರಚಿಸಿ ತಮ್ಮ ಕುಲದೈವ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ಹಾಡಬೇಕೆಂದು ಅಪ್ಪಣೆ ಮಾಡಿದರು.

ಆದರೆ ಅಷ್ಟರೊಳಗಾಗಿ ತೆಲುಗು ತೀರ್ಥದಿಂದ ಬಂದುದೇ ಶಾಸ್ತ್ರೀಯ 'ಕರ್ನಾಟಕ' ಸಂಗೀತವೆಂಬ ಭಾವನೆಯು ಮೈಸೂರಿನ ಸಂಗೀತಗಾರರಿಗೆಲ್ಲ ಮೈಗೂಡಿಹೋಗಿತ್ತು. ಆದ್ದರಿಂದ ಅವರು ಕನ್ನಡದಲ್ಲಿ ಕೃತಿ ರಚಿಸಿ ಹಾಡಲು ಒಪ್ಪಲಿಲ್ಲ. ಹೋಗಲಿ, ತ್ಯಾಗರಾಜರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಕೊಂಡಾದರೂ ಹಾಡಿರೆಂದಾಜ್ಞಾಪಿಸಿದರು— ಮಹಾರಾಜರು. ಕನ್ನಡನಾಡಿನ ಅನ್ನವನ್ನು ತಿಂದು ಕನ್ನಡರಾಜನ ಪೋಷಣೆಯಲ್ಲಿ ಬೆಳೆದ ಕನ್ನಡ ಸಂಗೀತಗಾರರು ಅದಕ್ಕೂ ಒಪ್ಪಲಿಲ್ಲ. ತಮಿಳುನಾಡಿನಿಂದ ಬಂದು ಮೈಸೂರು ಆಸ್ಥಾನ ವಿದ್ವಾನರಾಗಿದ್ದ ಮುತ್ತಯ್ಯ ಭಾಗವತರು ತಾವು ಕನ್ನಡದಲ್ಲಿ ಕೃತಿ ರಚಿಸಲು ಒಪ್ಪಿದರು.

ಬಾಲ್ಯದಲ್ಲಿಯೇ ಅನಾಥರಾಗಿದ್ದ ವಾಸುದೇವಾಚಾರ್ಯರನ್ನು ಮಹಾರಾಜರೇ ಪಾಲನೆ ಪೋಷಣೆ ಮಾಡಿ, ದೊಡ್ಡವರಾದ ಮೇಲೆ ತಮ್ಮ ಬೊಕ್ಕಸದ ಹಣದಿಂದಲೇ ಅವರನ್ನು ತಿರುವಯ್ಯಾರಿಗೆ ಪಟ್ಟಣಂ ಸುಬ್ರಮಣ್ಯ ಅಯ್ಯರರಲ್ಲಿ ಕಳಿಸಿ ಸಂಗೀತ ವಿದ್ಯಾಭ್ಯಾಸ ಮಾಡಿಸಿ ಕರೆಸಿಕೊಂಡು ಅವರನ್ನು ತಮ್ಮ ಆಸ್ಥಾನ ವಿದ್ವಾನರನ್ನಾಗಿ ನೇಮಿಸಿಕೊಂಡರು. ಅಂತಹ ವಾಸುದೇವಾಚಾರ್ಯರೂ ಕನ್ನಡದಲ್ಲಿ ಕೃತಿ ರಚಿಸಲು ನಿರಾಕರಿಸಿದಾಗ ಮಹಾರಾಜರ ಮನಸ್ಸು ನೊಂದುಹೋಯಿತು. ವಾದ್ಯಗಾರರಾದ ಶೇಷಣ್ಣನವರು ಕೂಡಾ ತಮ್ಮ ತಿಲ್ಲಾನಾಗಳಲ್ಲಿ ಎಲ್ಲೋ ಮಧ್ಯದಲ್ಲಿ ಒಂದು ಸಾಲಿನ ಸಾಹಿತ್ಯವನ್ನಿಟ್ಟರೆ ಸಮಾಸಭೂಯಿಷ್ಠ ಸಂಸ್ಕೃತ ಪದ ಪಂಕ್ತಿಗಳ ನಡುವೆ ಅನಿವಾರ್ಯವಾಗಿ ಬಂದೆಡೆಯಲ್ಲಿ ಬರಬೇಕಾದ ಕ್ರಿಯಾ

ವನ್ನೇನೋ ಸುಬ್ಬರಾಯರು ತಮ್ಮ ಗುರುಪರಂಪರೆಯ ಮೇರೆಗೆ ಲೀಲಾಜಾಲವಾಗಿ ಪರಿಣಾಮಕಾರಿಯಾಗಿ ಹಾಡುತ್ತಾರೆ. ಆದರೆ ಹಿಂದೂಸ್ತಾನೀ ? ಆ ಪದ್ಧತಿಯಲ್ಲೇನೋ ಈವರೆಗೆ ವಚನಗಳನ್ನೂ ದಾಸರ ಪದಗಳನ್ನೂ ಮನಸೂರರೂ, ಭೀಮಸೇನ ಜೋಶಿಯವರೂ ಹಾಡುತ್ತಲೇ ಇದ್ದಾರೆ. ಆದರೆ ಅವೆಲ್ಲ ದ್ರುತಲಯದಲ್ಲಿ. ಎಂದರೆ ಛೋಟಾ ಖಯಾಲ ರೂಪದಲ್ಲಿ. ಶಾಸ್ತ್ರೀಯ ಸಂಗೀತ ಕಚೇರಿಯೆಂದರೆ ಅವರಲ್ಲಿ ಧ್ರುಪದ, ಧಮಾರ, ಬಡಾ ಖಯಾಲ ಮತ್ತು ಠುಮರೀ ಹಾಡಬೇಕು. ಆದು ಹೇಗೆ ಸಾಧ್ಯ ? ಸಾಧ್ಯವಾಗಿದೆ. ಗುರು ಕರುಣೆಯಿಂದ ದೊರೆತಿರುವ ಗಾಂಧರ್ವ ವಿದ್ಯೆಯ ಬಲದಿಂದ ಈ ಲೇಖಕನು ಕನ್ನಡದ ವಚನಗಳನ್ನೂ ಉಗಾಭೋಗ ಹಾಗೂ ಕೀರ್ತನೆಗಳನ್ನೂ ಅಳವಡಿಸಿಕೊಂಡು ಧ್ರುಪದ, ವಿಲಂಬಿತ ಹಾಗೂ ದ್ರುತ ಖಯಾಲ ಮತ್ತು ಠುಮರೀಗಳನ್ನು ಹಾಡಿ ಹಿಂದೂಸ್ತಾನೀ ಕಚೇರಿಗಳನ್ನು ನಡೆಸ ತೊಡಗಿದ್ದಾನೆ. ತಕ್ಕಮಟ್ಟಿಗೆ ಯಶಸ್ವಿಯೂ ಆಗಿದ್ದಾನೆಂದು ವದಂತಿ.

ಕನ್ನಡ ನಾಡಿನಲ್ಲೀಗ ಆಗಬೇಕಾದುದು ಮುಖ್ಯವಾಗಿ ಮನಃಪರಿವರ್ತನೆ. ಅದಕ್ಕಾಗಿ ನಮ್ಮಲ್ಲಿರುವ ತಪ್ಪು ತಿಳುವಳಿಕೆಗಳು ಮಾಯವಾಗಬೇಕು. ಅದು ಸಾಧ್ಯವಾಗಬೇಕಾದರೆ ಸೋಮೇಶ್ವರನ ತಲೆಗೂ, ಹರಿಪಾಲನ ತಲೆಗೂ ಕಟ್ಟಿರುವ ಎರಡು ಸುಳ್ಳುಗಳನ್ನು ಸುಳ್ಳುಗಳೆಂದು ನಾವು ಅರಿಯಬೇಕು. ಸೋಮೇಶ್ವರ ಕರ್ನಾಟಕ ಸಂಗೀತವೆಂದು ಹೆಸರು ಕೊಡಲಿಲ್ಲ. ಹರಿಪಾಲ ಹಿಂದೂಸ್ತಾನೀ ಕರ್ನಾಟಕೀ ಸಂಗೀತ ಧಾರೆಗಳು ಬೇರೆ ಬೇರೆಯೆಂದು ಹೇಳಿಲ್ಲ. ಇದನ್ನು ನಾವರಿಯಬೇಕು. ಭಾರತೀಯ ಸಂಗೀತ ಎರಡಲ್ಲ, ಒಂದೇ. ಭಾರತವೆಂದರೆ ಹಿಂದೂಸ್ತಾನ. ಆದ್ದರಿಂದ ಭಾರತೀಯ ಸಂಗೀತವೆಂದರೆ ಹಿಂದೂಸ್ತಾನೀ ಸಂಗೀತ. ಅದಕ್ಕೆ ಶಾಸ್ತ್ರಾಧಾರವನ್ನೊದಗಿಸಿದವರು ಮತಂಗನಿಂದ ಮುಖಿಯವರೆಗೆ—ಕರ್ನಾಟಕದವರು. ಆದ್ದರಿಂದ ಶಾಸ್ತ್ರೀಯ ಹಿಂದೂಸ್ತಾನೀ ಸಂಗೀತವಲ್ಲ ಕರ್ನಾಟಕ ಸಂಗೀತ. ಆದ್ದರಿಂದ ಉತ್ತರಾದಿ ದಕ್ಷಿಣಾದಿ ಎಂಬ ಭೇದ ಮೊದಲು ನಮ್ಮ ಮನಸ್ಸಿನಿಂದ ತೊಲಗಬೇಕು.

## ಬ್ರಿಜ್ ಭಾಷೆ

ಹಿಂದೂಸ್ತಾನೀ ಚೀಜುಗಳೆಲ್ಲ ಹೆಚ್ಚಾಗಿ ಬ್ರಿಜ್ ಭಾಷೆಯಲ್ಲಿವೆ. ಅಲ್ಲದೆ ಕೆಲಕೆಲವು ಫಾರಸೀ, ಮಾರವಾಡಿ, ಪಂಜಾಬೀ ಭಾಷೆಯಲ್ಲಿಯೂ ಇವೆ. ಯಾರು ಬಲ್ಲರು, ತಾನಸೇನನಾಗಲಿ ಸದಾರಂಗನಿಗಾಗಲಿ ಕನ್ನಡ ಬರುತ್ತಿದ್ದರೆ ಅವರು ಬ್ರಿಜ್ ಭಾಷೆಯ ಜೊತೆಗೆ ಕನ್ನಡದಲ್ಲಿಯೂ ಕೃತಿ ರಚನೆ ಮಾಡುತ್ತಿದ್ದರೇನೋ! ಈಗ ಅದರ ಆವಶ್ಯಕತೆಯಿಲ್ಲ. ದಾಸರೂ ಶರಣರೂ ಹೇರಳವಾದ ಕೃತಿಸಂಪತ್ತನ್ನು ನಮಗೆ ಕೊಟ್ಟು ಹೋಗಿದ್ದಾರೆ. ಅದನ್ನೆಲ್ಲ ನಾವು ನಮ್ಮ ಸಂಗೀತಕ್ಕೆ ಅಳವಡಿಸಿಕೊಂಡು ಬಳಸಿಕೊಳ್ಳಬೇಕು—ಅದಕು ಇದಕು ಎಂದಕೂ—ಎಂದರೆ ಹಿಂದೂಸ್ತಾನಿಗೂ, ಕರ್ನಾಟಕಿಗೂ, ಭಾರತದಲ್ಲೆಲ್ಲ ಎರಡೂ ಪದ್ಧತಿಯ ಸಂಗೀತವಿರುವುದು ಕರ್ನಾಟಕದಲ್ಲಿ ಮಾತ್ರ. ಕರ್ನಾಟಕದ ಸಂಗೀತಗಾರರೆಲ್ಲರೂ ಕನ್ನಡ ಕೃತಿಗಳನ್ನೇ ಹಾಡಿ ಎರಡೂ ಪದ್ಧತಿಗಳ ಅಂತರ ಮಾಯವಾಗಿ ಕನ್ನಡ ಭಾಷೆ ಅವೆರಡರ ನಡುವಣ "ಬ್ರಿಜ್" ಭಾಷೆಯಾಗುವುದು.